ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 3 ಶುಕ್ರವಾರ 2026

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸಂಪುಟ: 46 | ಸಂಚಿಕೆ: 342 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರಾಜ್ಯದಲ್ಲಿ ಅಪರಾಧ ಹೆಚ್ಚಳ

ಮುಖ್ಯಮಂತ್ರಿ ಸಿದ್ದರಾಮಯ್ಯ ಕಳವಳ

● ಪೊಲೀಸ್ ಧ್ವಜ ದಿನಾಚರಣೆ; ಮುಖ್ಯಮಂತ್ರಿಗಳ ಪದಕ ಪ್ರದಾನ ● ಪ್ರತಿ ಪೊಲೀಸ್ ಠಾಣೆಯ ಅಧಿಕಾರಿಗೆ ಅರಿವಿಲ್ಲದಂತೆ ಯಾವ ಅಪರಾಧವೂ ನಡೆಯಲ್ಲ!; ಸಿಎಂ



ಪೊಲೀಸ್ ಧ್ವಜ ದಿನಾಚರಣೆ ವೇಳೆ ವಂದನೆ ಸ್ವೀಕರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ.

ಬೆಂಗಳೂರು, ಏ.2(ಕೆಎಂಶಿ)– ಸೈಬರ್ ಅಪರಾಧವೂ ಸೇರಿದಂತೆ ನಾನಾ ಅಪರಾಧಗಳಲ್ಲಿ ನಮ್ಮ ರಾಜ್ಯ, ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಾಗಿರುವುದು ಆತಂಕಕಾರಿ ಸಂಗತಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ.

ಕೋರಮಂಗಲದ ಪರೇಡ್ ಮೈದಾನದಲ್ಲಿ ಆಯೋಜಿಸಿದ್ದ 'ಪೊಲೀಸ್ ಧ್ವಜ ದಿನಾಚರಣೆ' ಕಾರ್ಯಕ್ರಮದಲ್ಲಿ 'ಮುಖ್ಯಮಂತ್ರಿಗಳ ಪದಕ' ಪ್ರದಾನ ಮಾಡಿ ಮಾತನಾಡಿದ ಅವರು, ಯಾವುದೇ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಆಯಾ ಠಾಣಾಧಿಕಾರಿಯ ಗಮನಕ್ಕೆ ಬಾರದಂತೆ ಯಾವುದೇ ಅಪರಾಧಗಳು, ಕೆಟ್ಟ ವ್ಯವಹಾರಗಳು ನಡೆಯಲು ಸಾಧ್ಯವಿಲ್ಲ ಎನ್ನುವುದು ನನ್ನ ನಂಬಿಕೆ ಎಂದರು.

ಹೆಚ್ಚಾಗಿರುವ ಅಪರಾಧಗಳ ನಿಯಂತ್ರಣದಲ್ಲೂ ಪೊಲೀಸರು ಭಾರೀ ಶ್ರಮ ಹಾಕಬೇಕಿದೆ. ಸೈಬರ್ ಅಪರಾಧಗಳು ಸೇರಿದಂತೆ ನಾನಾ ರೀತಿಯ ಅಪರಾಧಗಳನ್ನು ತಡೆಯಲು ತಂತ್ರಜ್ಞಾನದ ಅವಕಾಶ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಮಯದ ಮಿತಿ ಇಲ್ಲದಂತೆ ದಿನದ 24 ಗಂಟೆಯೂ ಕರ್ತವ್ಯ ಪ್ರಜ್ಞೆ ಇಟ್ಟುಕೊಂಡು ಕೆಲಸ ಮಾಡುವುದರಿಂದ ಸಮಾಜದಲ್ಲಿ ನೆಮ್ಮದಿ ಮತ್ತು ಸೌಹಾರ್ದತೆ ನೆಲೆಸಿದೆ. ಮಹಿಳೆಯರು, ಮಕ್ಕಳು ಮತ್ತು ದುರ್ಬಲರು ಹಾಗೂ ಅಸಹಾಯಕರ ರಕ್ಷಣೆಗೆ ನಮ್ಮ ಸರ್ಕಾರ ಮೊದಲ ಆದ್ಯತೆ ನೀಡುತ್ತಿದೆ. ಪೊಲೀಸರೂ ಇದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು ಎಂದರು. ರಾಜ್ಯದ ಆರ್ಥಿಕ ಬೆಳವಣಿಗೆಗೂ, ಜಿಡಿಪಿ ಪ್ರಗತಿಗೂ ರಾಜ್ಯದ ಕಾನೂನು ಸುವ್ಯವಸ್ಥೆಗೂ ನೇರಾ ನೇರ ಸಂಬಂಧ ಇರುತ್ತದೆ.

■ 6ನೇ ಪುಟಕ್ಕೆ

ಹುಣಸೂರಿನಲ್ಲಿ 12 ಕೋಟಿ ಮೌಲ್ಯದ ಡ್ರಗ್ಸ್ ಪತ್ತೆ ಪ್ರಕರಣ

ಹೋಟೆಲ್, ಲಾಡ್ಜ್, ರೆಸಾರ್ಟ್, ಹೋಂಸ್ಟೇಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಕೆಗೆ ವಾರದ ಗಡುವು

ಮಾಲೀಕರ ಸಭೆ ನಡೆಸಿದ ಡಿವೈಎಸ್ಪಿ ರವಿ; ತಪ್ಪಿದರೆ ಕಟ್ಟುನಿಟ್ಟಿನ ಕ್ರಮದ ಎಚ್ಚರಿಕೆ

ಮೈಸೂರು, ಏ.2(ಬಿಎಲ್‌ಯು)– ಹುಣಸೂರಿನ ದಾಸನ ಪುರ ಗ್ರಾಮದಲ್ಲಿ 12 ಕೋಟಿ ಮೌಲ್ಯದ ಅಪಾರ ಪ್ರಮಾಣದ ಡ್ರಗ್ಸ್ ಪತ್ತೆಯಾದ ಹಿನ್ನೆಲೆಯಲ್ಲಿ ಹುಣಸೂರಿನ ಹೋಟೆಲ್, ಲಾಡ್ಜ್, ರೆಸಾರ್ಟ್, ಹೋಂ ಸ್ಟೇಗಳಲ್ಲಿ ವಾರದೊಳಗೆ ಸಿಸಿಟಿವಿ ಕ್ಯಾಮರಾ ಅಳವಡಿಸದಿದ್ದರೆ ಬಂದ್ ಮಾಡಿಸುವುದಾಗಿ ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಕೋಟ್ಯಾಂತರ ರೂಪಾಯಿ ಮೌಲ್ಯದ ಡ್ರಗ್ಸ್ ಪತ್ತೆಯಾಗುತ್ತಿರುವುದು ಜನರಲ್ಲಿ ಆತಂಕ ಹೆಚ್ಚಿಸಿದೆ. ಯುವಕ–ಯುವತಿಯರನ್ನು ಮಾದಕ ವಸ್ತು ವ್ಯಸನಕ್ಕೆ ತಳ್ಳಿ ಹಣ ಗಳಿಸುವ ಜಾಲ ವ್ಯಾಪಕವಾಗುತ್ತಿರುವುದು ಪೊಲೀಸರಿಗೂ ತಲೆನೋವಾಗಿ ಪರಿಣಮಿಸಿದೆ.

ಈ ಹಿನ್ನೆಲೆಯಲ್ಲಿ ಮಾದಕ ವಸ್ತು ಮಾಫಿಯಾವನ್ನು ಮಟ್ಟ ಹಾಕಲು ನಿರ್ಧರಿಸಿರುವ ಪೊಲೀಸರು, ಹಲವು ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದ್ದಾರೆ. ಹುಣಸೂರು ಡಿವೈಎಸ್ಪಿ ರವಿ ಅವರು ಹೋಟೆಲ್, ಲಾಡ್ಜ್, ರೆಸಾರ್ಟ್ ಹಾಗೂ ಹೋಂ ಸ್ಟೇ ಮಾಲೀಕರ ಸಭೆ ನಡೆಸಿ, ಮಾದಕ ವಸ್ತು ಜಾಲದ ವಿರುದ್ಧದ ಹೋರಾಟಕ್ಕೆ ಸಹಕರಿಸುವಂತೆ ಮನವಿ ಮಾಡಿದ್ದಾರೆ. ಗ್ರಾಹಕರ ಸುರಕ್ಷತೆ ಹಾಗೂ ಅಪರಾಧ ಪ್ರಕರಣಗಳ ತಡೆಯುವ ನಿಟ್ಟಿನಲ್ಲಿ ವಾರದೊಳಗೆ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಬೇಕು.

■ 6ನೇ ಪುಟಕ್ಕೆ

ಮೈಸೂರು ಪಾಲಿಕೆ ವ್ಯಾಪ್ತಿ ಆಸ್ತಿ ತೆರಿಗೆಯಲ್ಲಿ ಶೇ.5ರಷ್ಟು ರಿಯಾಯಿತಿ ಕೊಡುಗೆ

- ಏಪ್ರಿಲ್ 1ರಿಂದ 30 ರವರೆಗೆ ಈ ಆಫರ್ ಲಭ್ಯವಿದೆ
- ಮೊದಲ ದಿನವೇ 1,69,45,352 ರೂ. ತೆರಿಗೆ ಸಂಗ್ರಹ
- ಮೇ–ಜೂನ್‌ವರೆಗೆ ದಂಡವಿಲ್ಲದೆ ಪಾವತಿಗೆ ಅವಕಾಶ
- ಜುಲೈನಿಂದ ಮಾಸಿಕ ಶೇ.2ರಷ್ಟು ದಂಡ ವಸೂಲಿಗೆ ನಿರ್ಧಾರ

ಮೈಸೂರು, ಏ.2(ಎಂಟಿವೈ)– ಮೈಸೂರು ಮಹಾನಗರ ಪಾಲಿಕೆಯು ಆರ್ಥಿಕ ವರ್ಷದ ಮೊದಲ ಮಾಸದಲ್ಲಿ ನೀಡುವ 'ಆಸ್ತಿ ತೆರಿಗೆಯಲ್ಲಿ ಶೇ.5 ರಷ್ಟು ರಿಯಾಯಿತಿ' ಅಭಿಯಾನಕ್ಕೆ ಮೊದಲ ದಿನವೇ ಉತ್ತಮ ಸ್ಪಂದನೆ ವ್ಯಕ್ತವಾಗಿದೆ.

ಏ.1ರಂದು 1,69,45,352 ರೂ. ಆಸ್ತಿ ತೆರಿಗೆ ಸಂಗ್ರಹವಾಗಿದ್ದು, ಏಪ್ರಿಲ್ 30 ರವರೆಗೂ ಶೇ.5ರಷ್ಟು ರಿಯಾಯಿತಿ ಕೊಡುಗೆ ಲಭ್ಯವಿದೆ. ಪ್ರಸಕ್ತ, 2026–27ನೇ ಸಾಲಿನಲ್ಲಿ 265 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ಹೊಂದಲಾಗಿದ್ದು, ಈ ನಿಟ್ಟಿನಲ್ಲಿ ಅಭಿಯಾನದ ಬಗ್ಗೆ ವ್ಯಾಪಕ ಪ್ರಚಾರ ನಡೆಸಲಾಗುತ್ತಿದೆ. ನೂತನ ಆರ್ಥಿಕ ವರ್ಷಾರಂಭದೊಂದಿಗೆ



ಈ ಬಾರಿ ಆಸ್ತಿ ಮೌಲ್ಯಕ್ಕೆ ಅನುಗುಣವಾಗಿ ಶೇ.3ರಷ್ಟು ತೆರಿಗೆ ಹೆಚ್ಚಳ ಮಾಡ ಲಾಗಿದೆ. ಏ.1ರಿಂದ 30ರವರೆಗೆ ತೆರಿಗೆಯಲ್ಲಿ ಶೇ.5ರಷ್ಟು ರಿಯಾಯಿತಿ ನೀಡಿರುವ ಪಾಲಿಕೆ, ತೆರಿಗೆದಾರರಿಗೆ ಅನುಕೂಲವಾಗುವಂತೆ ಹೆಚ್ಚುವರಿ ಕೌಂಟರ್ ತೆರೆದಿದೆ. ಪಾಲಿಕೆಯ ಎಲ್ಲಾ 9 ವಲಯ ಕಚೇರಿಗಳಲ್ಲೂ ಆಸ್ತಿ ತೆರಿಗೆ ಸ್ವೀಕರಿಸಲು ಹೆಚ್ಚುವರಿ ಕೌಂಟರ್ ಸೇರಿದಂತೆ ತಲಾ ಎರಡು ಕೌಂಟರ್‌ಗಳನ್ನು ತೆರೆಯಲಾಗಿದೆ. ಶೇ.5ರಷ್ಟು ರಿಯಾಯಿತಿ ಸೌಲಭ್ಯ ಪಡೆದುಕೊಳ್ಳಲು ತೆರಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಮುಂದಾಗುತ್ತಿರುವುದರಿಂದ ವಲಯ ಕಚೇರಿಗಳ ಬಳಿ ಪೆಂಡಾಲ್,

■ 6ನೇ ಪುಟಕ್ಕೆ

ಚುನಾಯಿತ ಪ್ರತಿನಿಧಿಗಳು ಜನರ ಗುಲಾಮರಾಗಿರಬೇಕೇ ಹೊರತು ಜನರೇ ಅವರ ಗುಲಾಮರಾಗಬಾರದು...!

● ಪ್ರಜಾಪ್ರಭುತ್ವದ ಮೂಲ ಸಾರ ಸಾರಿದ ಹಿರಿಯ ರಾಜಕೀಯ ಮುತ್ಸದ್ದಿ–ನಟ ಮುಖ್ಯಮಂತ್ರಿ ಚಂದ್ರು ● ಆಯ್ಕೆಯಾದ ನಂತರ ಐದು ವರ್ಷ ಏನು ಮಾಡಿದರೂ ಕೇಳುವಂತಿಲ್ಲ ಎಂಬಂತಾಗಿದೆ

ಮೈಸೂರು, ಏ.2(ಎಂಕೆ)– ಚುನಾಯಿತ ಪ್ರತಿನಿಧಿಗಳು ಜನರ ಗುಲಾಮರಾಗಿರಬೇಕೇ ಹೊರತು ಜನರೇ ಅವರ ಗುಲಾಮರಾಗಬಾರದು ಎಂದು ಹಿರಿಯ ನಟ ಹಾಗೂ ರಾಜಕಾರಣಿ ಮುಖ್ಯಮಂತ್ರಿ ಚಂದ್ರು ಹೇಳಿದರು.

ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಸಭಾಂಗಣದಲ್ಲಿ ದಾರಿ ಫೌಂಡೇಷನ್ ಸಹಯೋಗದೊಂದಿಗೆ ಆಂಯೋಜಿಸಿದ್ದ



ಮುಖ್ಯಮಂತ್ರಿ ಚಂದ್ರು

'ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ ಜವಾಬ್ದಾರಿ ಯುವ ಶಕ್ತಿಯ ಕೈಯ್ಯಲ್ಲಿ' ಮುಕ್ತ–ಸಂವಾದದಲ್ಲಿ ಮಾತನಾಡಿದ ಅವರು, ಈಗ ಆಯ್ಕೆಯಾದ ನಂತರ ಐದು ವರ್ಷ ಚುನಾಯಿತ ಪ್ರತಿನಿಧಿಗಳು ಏನು ಮಾಡಿದರೂ ಕೇಳುವಂತಿಲ್ಲ ಎಂಬಂತಾಗಿದೆ. ಇದು ಹೋಗಬೇಕು. ಅವರು ಮತದಾರರಿಗೆ ಉತ್ತರದಾಯಿಗಳಾಗಿರಬೇಕು. ವಾಪಸ್ ಕರೆಸಿಕೊಳ್ಳುವ ಅಧಿಕಾರ ಇದ್ದಲ್ಲಿ ಭಯದಿಂದ ಜನರ ಕೆಲಸ ಮಾಡುತ್ತಾರೆ ಎಂದು ಮಾರ್ಮಿಕವಾಗಿ ಹೇಳಿದರು.

ಕಡ್ಡಾಯ ಮತದಾನದ ಮೂಲಕ ಪ್ರಜಾ ಪ್ರಭುತ್ವ ಉಳಿಸುವುದರ ಜೊತೆಗೆ ನಾಡು ಕಟ್ಟುವ, ನಾಡ ಭಾಷೆ ಉಳಿಸುವ ಕಾರ್ಯದಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಬೇಕು. ಎಲ್ಲಾ ದಾನಗಳಿಗಿಂತಲೂ ಮತದಾನ ಶ್ರೇಷ್ಠ ದಾನವಾಗಿದೆ. ಈ ನಿಟ್ಟಿನಲ್ಲಿ ಯೋಗ್ಯರಿಗೆ ಮತ ನೀಡುವ ಮೂಲಕ ದೇಶ ಮತ್ತು ದೇಶದ ಸಂವಿಧಾನವನ್ನು ಉಳಿಸಲು ಕೈಜೋಡಿಸಬೇಕು ಎಂದು ತಿಳಿಸಿದರು.

ಉಚಿತ ಗ್ಯಾರಂಟಿ ಬದಲು ಉಚಿತ ಶಿಕ್ಷಣ: ಸರ್ಕಾರ ಉಚಿತ ಗ್ಯಾರಂಟಿಗಳನ್ನು ನೀಡುವ ಬದಲು ಎಲ್ಲರಿಗೂ ಉಚಿತ ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯ ಕಲ್ಪಿಸಬೇಕು. ಸರ್ಕಾರಿ ಶಾಲಾ–ಕಾಲೇಜು ಹಾಗೂ ಆಸ್ಪತ್ರೆಗಳನ್ನು ಬಲಪಡಿಸಬೇಕು.

■ 6ನೇ ಪುಟಕ್ಕೆ

ಹುಣಸೂರು ಬಳಿ ಪತ್ತೆಯಾದ ಡ್ರಗ್ಸ್ ತಯಾರಿಕಾ ಘಟಕದ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ಎಬಿವಿಪಿ ಪ್ರತಿಭಟನೆ



ಮೈಸೂರಿನ ಅಗ್ರಹಾರ ಸರ್ಕಲ್‌ನಲ್ಲಿ ಎಬಿವಿಪಿ ವತಿಯಿಂದ ಹುಣಸೂರು ಬಳಿ ಪತ್ತೆಯಾದ ಡ್ರಗ್ಸ್ ತಯಾರಿಕಾ ಘಟಕದ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಏ.2(ಜಿಎ)–ಇತ್ತೀಚೆಗೆ ಮೈಸೂರು ಜಿಲ್ಲೆ ಹುಣಸೂರು ತಾಲೂಕಿನಲ್ಲಿ ಪತ್ತೆಯಾಗಿರುವ ಡ್ರಗ್ಸ್ ಘಟಕದ ಪ್ರಕರಣದಲ್ಲಿ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಆಗಹ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್(ಎಬಿವಿಪಿ) ವತಿಯಿಂದ ಅಗ್ರಹಾರ ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಸಲಾಯಿತು.


ಪ್ರತಿಭಟನೆಗೆ ವಿದ್ಯಾರ್ಥಿಗಳು ಜಮಾವಣೆಗೊಳ್ಳುತ್ತಿದ್ದಂತೆ ಪೊಲೀಸರು ಆಕ್ಷೇಪ ವ್ಯಕ್ತಪಡಿಸಿ, ಪ್ರತಿಭಟನೆಗೆ ಅವಕಾಶವಿಲ್ಲ ಎಂದು ತಿಳಿಸಿದರು. ಈ ವೇಳೆ ಪೊಲೀಸರೊಂದಿಗೆ ವಿದ್ಯಾರ್ಥಿಗಳು ವಾಗ್ವಾದ ನಡೆಸಿದರು. ನಂತರ ಕೆಲವೇ ನಿಮಿಷದಲ್ಲಿ ಪ್ರತಿಭಟನೆ ಅಂತ್ಯಗೊಳಿಸಿದರು.

ಎಬಿವಿಪಿ ರಾಜ್ಯ ಕಾರ್ಯಕಾರಿಣಿ ಸದಸ್ಯೆ ಮೇಘನಾ ಕೋಡಬಾಳ ಮಾತನಾಡಿ, ಡ್ರಗ್ಸ್ ಮಾಫಿಯಾ, ಮಾದಕ ವಸ್ತು ಸೇವನೆ ಹಾಗೂ ಮಾರಾಟ ನಿಯಂತ್ರಣ ಕುರಿತಂತೆ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹಿಸಿದರು. ಅಲ್ಲದೆ ಹುಣಸೂರು ತಾಲ್ಲೂಕಿನ ದಾಸನಹಳ್ಳಿ ಗ್ರಾಮದಲ್ಲಿ ಇತ್ತೀಚಿಗೆ ಕಂಡುಬಂದ ಡ್ರಗ್ಸ್ ತಯಾರಿಕ ಘಟಕದಿಂದ ಯುವ ಜನತೆಯಲ್ಲಿ ಆಘಾತವಾಗಿದೆ ಎಂದರು.

ಈ ಘಟನೆ ಗ್ರಾಮೀಣ ಪ್ರದೇಶದಲ್ಲಿಯೂ ಮಾದಕ ವಸ್ತುಗಳ ಜಾಲ ವ್ಯಾಪಕವಾಗುತ್ತಿರುವುದನ್ನು ಸೂಚಿಸುತ್ತದೆ. ಯುವಕರನ್ನು ಗುರಿಯಾಗಿಸಿಕೊಂಡು ಈ ರೀತಿಯ ಅಕ್ರಮ ಚಟುವಟಿಕೆಗಳು ನಡೆಯುತ್ತಿರುವುದು ಸಮಾಜದ ಭವಿಷ್ಯಕ್ಕೆ ದೊಡ್ಡ ಅಪಾಯವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಮಾದಕ ವಸ್ತುಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ. ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಅವಶ್ಯವಾಗಿದೆ. ಇಂತಹ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು ಪೊಲೀಸ್ ಇಲಾಖೆ ಇನ್ನಷ್ಟು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ಅದರೊಂದಿಗೆ ಸ್ಥಳೀಯ ಆಡಳಿತ ಮತ್ತು ಸಾರ್ವಜನಿಕರು ಸಹಕಾರ ನೀಡಿದರೆ ಮಾತ್ರ ಈ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಸಾಧ್ಯವಾಗುತ್ತದೆ. ಸಮಾಜದ ಪ್ರತಿಯೊಬ್ಬರೂ ಜವಾಬ್ದಾರಿಯನ್ನು ಅರಿತು ಮಾದಕ ವಸ್ತುಗಳ ನಿರ್ಮೂಲನೆಗೆ ಒಗ್ಗಟ್ಟಿನಿಂದ ಹೋರಾಡಬೇಕು ಎಂದು ತಿಳಿಸಿದರು. ಪ್ರತಿಭಟನೆಯಲ್ಲಿ ಮಂದಾರ ಬಾಳುಗೋಡು, ಸಂಜಿತ್, ಗೌರವ್, ತುಷಾರ್, ಸೂರ್ಯ ನಾರಾಯಣ, ನಮ್ರತಾ, ಶ್ರೀದತ್ತ,ಪ್ರಜ್ವಲ್ ಬಿ.ಎಸ್, ಶಿವಾನಂದ್, ಪಟೇಲ್ ನಾರಾಯಣ್ ರೆಡ್ಡಿ ಮತ್ತಿತರರು ಪಾಲ್ಗೊಂಡಿದ್ದರು.

ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶ್ರದ್ಧಾ–ಭಕ್ತಿಯ ಹನುಮ ಜಯಂತಿ



ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿರುವ ಕಾರ್ಯಸಿದ್ಧಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿ ಆಚರಿಸಲಾಯಿತು.

ಮೈಸೂರು, ಏ.2(ಎಂಕೆ)– ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿರುವ ಕಾರ್ಯಸಿದ್ಧಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಚೈತ್ರ ಶುದ್ಧ ಹುಣ್ಣಿಮೆ ಅಂಗವಾಗಿ ಶ್ರದ್ಧಾ–ಭಕ್ತಿಯಿಂದ ಹನುಮ ಜಯಂತಿ ಆಚರಿಸಲಾಯಿತು.

ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ನೇತೃತ್ವದಲ್ಲಿ ವಜ್ರಾಲಂಕಾರದೊಂದಿಗೆ ಅಲಂಕೃತ ಕಾರ್ಯಸಿದ್ಧಿ ಹನುಮಂತನಿಗೆ ಪಂಚಾಮೃತ ಅಭಿಷೇಕ ಹಾಗೂ ವಿಶೇಷ ಪೂಜಾ ಕೈಂಕರ್ಯ ನೆರವೇರಿಸಲಾಯಿತು.

ನಂತರ ಭಕ್ತಾದಿಗಳನ್ನುದ್ದೇಶಿಸಿ ಮಾತನಾಡಿದ ಶ್ರೀಗಳು, ಭಜರಂಗಿ ಎಂದರೆ ವಜ್ರಾಂಗಿ ಎಂದರ್ಥ. ಭಕ್ತಿಗೆ ವಜ್ರದಂತಹ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯ, ಹೂವಿನಂತಹ ಮೃದುವಾದ ಮನಸ್ಸನ್ನು ಕರುಣಿಸಲಿ ಎಂದು ಪ್ರಾರ್ಥಿಸಲಾಗಿದೆ ಎಂದು ಹೇಳಿದರು.

ವೀಳ್ಯದೆಲೆಯು ನಮ್ಮ ಹೃದಯದ ಸಂಕೇತವಾಗಿದ್ದು, ನಮ್ಮ ಮನಸ್ಸು ಮತ್ತು ಹೃದಯವನ್ನು ಸ್ವಾಮಿಗೆ ಅರ್ಪಿಸುವುದೇ ವೀಳ್ಯೆದೆಲೆ ಅರ್ಚನೆಯಾಗಿದೆ. ಸೀತಾಮಾತೆಯು ಅಶೋಕ ವನದಲ್ಲಿದ್ದಾಗ ಹನುಮಂತನಿಗೆ ವೀಳ್ಯೆದೆಲೆಯಿಂದ ಆಶೀರ್ವದಿಸಿದ ನೆನಪಿಗಾಗಿ ಈ ಪದ್ಧತಿ ಬೆಳೆದು ಬಂದಿದೆ. ಇದು ಭಕ್ತರ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ವೃದ್ಧಿಸುತ್ತದೆ ಎಂದರು. ಇದೇ ವೇಳೆ ಸೇವಾರ್ಥಿಗಳಿಗೆ 13 ಗಂಟುಗಳಿರುವ ಕಾರ್ಯಸಿದ್ಧಿ ರಕ್ಷೆ ವಿತರಿಸಿದ ಶ್ರೀಗಳು, 13 ಎಂಬ ಸಂಖ್ಯೆಯು 'ಶ್ರೀರಾಮ ಜಯರಾಮ ಜಯ ಜಯ ರಾಮ' ಮಂತ್ರದ ಸಂಕೇತವಾಗಿದೆ. ಸೀತಾಮಾತೆಯು ಸುಂದರ ಕಾಂಡದಲ್ಲಿ ಹೇಳಿರುವ ಮಂತ್ರವನ್ನೇ ಜಪಿಸುತ್ತಾ ಈ ರಕ್ಷೆ ಧರಿಸಿ 16 ದಿನಗಳ ಕಾಲ ಸ್ವಾಮಿಗೆ ಪ್ರದಕ್ಷಿಣೆ ಹಾಕುವುದರಿಂದ ಸಕಲ ಕಷ್ಟಗಳು ನಿವಾರಣೆಯಾಗಿ ಕಾರ್ಯಸಿದ್ದಿಸಲಿದೆ ಎಂದರು.

ಎತ್ತಿನಹೊಳೆ ಯೋಜನೆಗೆ ಕೇಂದ್ರ ಅರಣ್ಯ ಸಚಿವಾಲಯದಿಂದ ತಾತ್ವಿಕ ಅನುಮೋದನೆ

ನವದೆಹಲಿ: ಎತ್ತಿನಹೊಳೆ ಯೋಜನೆಗೆ ಹಾಸನ ಹಾಗೂ ತುಮಕೂರು ಜಿಲ್ಲೆಗಳ 272 ಎಕರೆ ಅರಣ್ಯಗಳಲ್ಲಿ ಕಾಮಗಾರಿ ನಡೆಸಲು ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯವು ತಾತ್ವಿಕ ಅನುಮೋದನೆ ನೀಡಿದೆ.

ಈ ಸಂಬಂಧ ಸಚಿವಾಲಯದ ಅರಣ್ಯ ಸಂರಕ್ಷಣಾ ವಿಭಾಗವು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ತಾತ್ವಿಕ ಅನುಮೋದನೆ ಪತ್ರವನ್ನು ಬುಧವಾರ ನೀಡಿದೆ. ಇದರಲ್ಲಿ ಸಾಮಾನ್ಯ 28 ಹಾಗೂ ಆರು ವಿಶೇಷ ಷರತ್ತುಗಳನ್ನು ವಿಧಿಸಲಾಗಿದ್ದು, ಈ ಷರತ್ತುಗಳನ್ನು ಪಾಲಿಸಿದ ಬಳಿಕ ಅಂತಿಮ ಅನುಮೋದನೆ ನೀಡಲಾಗುವುದು ಎಂದು ಸಚಿವಾಲಯ ಸ್ಪಷ್ಟಪಡಿಸಿದೆ. ರಾಜ್ಯ ಸರ್ಕಾರದ ಪ್ರಸ್ತಾವಕ್ಕೆ 2025ರ ಜೂನ್ 24 ಹಾಗೂ 27ರಂದು ನಡೆದ ಕೇಂದ್ರ ಪರಿಸರ ಸಚಿವಾಲಯದ ಸಲಹಾ ಸಮಿತಿ ಸಭೆಗಳಲ್ಲಿ ಒಪ್ಪಿಗೆ ಸಿಕ್ಕಿರಲಿಲ್ಲ. ಬಳಿಕ ಪರಿಷ್ಕೃತ ಪ್ರಸ್ತಾವದೊಂದಿಗೆ ಅರಣ್ಯ ಇಲಾಖೆಯಿಂದ ಮತ್ತಷ್ಟು ಮಾಹಿತಿಯನ್ನು ಸಚಿವಾಲಯಕ್ಕೆ ಸಲ್ಲಿಸಲಾಗಿತ್ತು. ಪರಿಸರ ಸಚಿವಾಲಯದ ಅರಣ್ಯ ಸಲಹಾ ಸಮಿತಿಯು ಕಳೆದ ತಿಂಗಳು ಷರತ್ತುಬದ್ಧ ಒಪ್ಪಿಗೆ ನೀಡಿತ್ತು. ಇದೀಗ ಸಚಿವಾಲಯದ ತಾತ್ವಿಕ ಅನುಮೋದನೆ ದೊರೆತಿದ್ದು, ವರ್ಷದಿಂದ ಸ್ಥಗಿತಗೊಂಡಿದ್ದ ಎತ್ತಿನಹೊಳೆ ಯೋಜನೆಗೆ ಮತ್ತೆ ಚಾಲನೆ ಸಿಕ್ಕಂತಾಗಿದೆ.

ಸನ್ಮಾನ...



ಮೈಸೂರಿನ ಗಾಂಧಿನಗರದ ಶ್ರೀ ದುರ್ಗಾದೇವಿ ಯುಗಾದಿ ಜಾತ್ರಾ ಮಹೋತ್ಸವದ ಮರುಪೂಜೆಯಲ್ಲಿ ಸಿವಿಲ್ ಕೋರ್ಟ್ ಜಡ್ಜ್ ಆಗಿ ಆಯ್ಕೆಯಾಗಿರುವ ಸ್ಥಳೀಯ ನಿವಾಸಿ ಶ್ರೀಮತಿ ರೋಹಿಣಿ (ಪಂಕಜ) ಅವರನ್ನು ಶ್ರೀ ದುರ್ಗಾದೇವಿ ಸೇವಾ ಸಮಿತಿ ವತಿಯಿಂದ ಸನ್ಮಾನಿಸಲಾಯಿತು. ಚಿತ್ರದಲ್ಲಿ ರೋಹಿಣಿ ಅವರ ತಂದೆ ಜವರಾಯಿ, ತಾಯಿ ನೀಲಮ್ಮ, ಸಮಿತಿಯ ಆರ್.ಸೂರ್ಯ ನಾರಾಯಣ್, ಪಿ.ಪ್ರಸನ್ನ, ಎಲ್.ದಿಲೀಪ್‌ಕುಮಾರ್, ಡಿ.ನಾಗೇಶ್ ಮತ್ತಿತರರು ಇದ್ದಾರೆ.

ಬರಡನಪುರ ಮಠದಲ್ಲಿ ಬಸವ ಜಯಂತಿ ಪೂರ್ವಭಾವಿ ಸಭೆ



ಬರಡನಪುರ ಮಠದಲ್ಲಿ ಬಸವ ಜಯಂತಿ ಸಂಬಂಧ ಸಭೆ ನಡೆಸಲಾಯಿತು.

ಮೈಸೂರು, ಏ. 2– ಮೈಸೂರು ತಾಲೂಕಿನ ಜಯಪುರ ಹೋಬಳಿಗೆ ಸೇರಿದ ಎಲ್ಲಾ ಗ್ರಾಮಗಳ ವೀರಶೈವ ಲಿಂಗಾಯತ ಸಮಾಜದ ಮುಖಂಡರ ಸಭೆಯು ಬರಡನಪುರ ಮಠದಲ್ಲಿ ಕಿರಿಯ ಸ್ವಾಮೀಜಿಗಳ ಸಮ್ಮುಖದಲ್ಲಿ ನಡೆಯಿತು. ತಾಲೂಕು ಪ್ರಚಾರ ಸಮಿತಿ ಅಧ್ಯಕ್ಷ ಲೋಹಿತ್ ದೊರೆಸ್ವಾಮಿ, ಜಯಪುರ ಹೋಬಳಿ ಸಮಿತಿ ಅಧ್ಯಕ್ಷ ಮಹೇಶ್ ತಳೂರು ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಸಭೆಯ ವೇಳೆ ಬಸವ ಜಯಂತಿ ಸಮಿತಿ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, ಬಸವ ಜಯಂತಿ ಕಾರ್ಯಕ್ರಮದ ರೂಪುರೇಷೆಗಳನ್ನು ಮಂಡಿಸಿದರು. ಸಮಾಜದ ಎಲ್ಲ ವರ್ಗಗಳ ಸಹಕಾರದಿಂದ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಹಾಗೂ ಯಶಸ್ವಿಯಾಗಿ ನೆರವೇರಿಸಬೇಕೆಂದು ಮನವಿ ಮಾಡಿದರು.

ಬಸವ ತತ್ವಗಳ ಪ್ರಚಾರ ಮತ್ತು ಸಮಾಜದಲ್ಲಿ ಏಕತೆ ಬಲಪಡಿಸುವ ಉದ್ದೇಶದಿಂದ ಈ ಬಾರಿ ಆಚರಣೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ರೂಪಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಚರ್ಚೆ ನಡೆಯಿತು. ಸಭೆಯಲ್ಲಿ ಭಾಗವಹಿಸಿದ ಮುಖಂಡರು ಸಹ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸುವ ಭರವಸೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಕೆ.ವಿ. ಮಲ್ಲೇಶ್, ಎ.ಪಿ.ವಿರುಪಾಕ್ಷ, ಚಿಕ್ಕಹಳ್ಳಿ ದೇವರಾಜು, ಗೆಜ್ಜಗಳ್ಳಿ ನಂಜಪ್ಪ, ಶಿವಕುಮಾರ್ ಚಿಕ್ಕಾನ್ಯ, ಮಾರ್ಬಳ್ಳಿ ಗಿರೀಶ್, ಕಿರಣ್, ಶಿವ ಮಲ್ಲಿಕಾರ್ಜುನ, ಗ್ಯಾಸ್ ಮಹೇಶ್, ಬರಡನಪುರ ಗಿರೀಶ್ ಮತ್ತಿತರರು ಉಪಸ್ಥಿತರಿದ್ದರು.

ನಟ ಪ್ರಥಮ್ ಅಭಿನಯದ 'ಫಸ್ಟ್ ನೈಟ್ ವಿತ್ ದೆವ್ವ' ಇಂದು ತೆರೆಗೆ



ಮೈಸೂರು, ಏ.2– ಒಳ್ಳೆ ಹುಡುಗ ಪ್ರಥಮ್ ನಟಿಸಿರುವ 'ಫಸ್ಟ್‌ನೈಟ್ ವಿತ್ ದೆವ್ವ' ಸಿನಿಮಾ ಈ ವಾರ ರಾಜ್ಯಾದ್ಯಂತ ತೆರೆಕಾಣುತ್ತಿದೆ.

ಸುಬ್ಬ ಸುಬ್ಬಿ ಹಾರರ್ ಸ್ಟೋರಿ ಟ್ಯಾಗ್ ಲೈನ್ ಒಳಗೊಂಡ ಈ ಚಿತ್ರವನ್ನು ಸಾರ್ಥ್ಯ ಸಿನಿ ಕ್ರಿಯೇಷನ್ಸ್ ಸಂಸ್ಥೆ ನಿರ್ಮಿಸಿದ್ದು, ಪ್ರಥಮ್ ನಟನೆಯೊಂದಿಗೆ ಕಥೆ–ಚಿತ್ರಕಥೆ ಜವಾಬ್ದಾರಿಯನ್ನೂ ನಿರ್ವಹಿಸಿದ್ದಾರೆ. ಪಿವಿಆರ್ ಸ್ವಾಮಿ ಗೂಗಾರದೊಡ್ಡಿ ಛಾಯಾಗ್ರಹಣದೊಂದಿಗೆ ನಿರ್ದೇಶನ ಮಾಡಿದ್ದಾರೆ.

ಮೈಸೂರಿನ ಪ್ರಭಾ, ಪಿವಿಆರ್ ಐನಾಕ್ಸ್, ಡಿಆರ್‌ಸಿ, ವಿಷನ್ ಸಿನಿಮಾಸ್ ಸೇರಿದಂತೆ ರಾಜ್ಯಾದ್ಯಂತ ಅನೇಕ ಚಿತ್ರಮಂದಿರಗಳಲ್ಲಿ ಶುಕ್ರವಾರದಿಂದ ಈ ಸಿನಿಮಾ ಪ್ರದರ್ಶನಗೊಳ್ಳಲಿದೆ.

ಜೆಎಸ್‌ಎಸ್ ಮೆಡಿಕಲ್ ಕಾಲೇಜಲ್ಲಿ ನಾಳೆ ಪದವೀಧರರ ದಿನಾಚರಣೆ

11 ಚಿನ್ನ, 12 ನಗದು ಸೇರಿ 195 ಮಂದಿಗೆ ಪದವಿ ಪ್ರದಾನ



ಮೈಸೂರು,ಏ.2(ಎಂಟಿವೈ)–ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಪದವೀಧರರ ದಿನಾಚರಣೆಯನ್ನು ಏ.4ರಂದು ಸಂಜೆ 4 ಗಂಟೆಗೆ ಜೆಎಸ್‌ಎಸ್ ವೈದ್ಯಕೀಯ ಸಂಸ್ಥೆಗಳ ಆವರಣದಲ್ಲಿ ಆಯೋಜಿಸಲಾಗಿದ್ದು, ಈ ಬಾರಿ ಆರು ಮಂದಿಗೆ 11 ಚಿನ್ನ ಮತ್ತು 12 ನಗದು ಬಹುಮಾನ ಒಳಗೊಂಡಂತೆ 195 ಮಂದಿಗೆ ಪದವಿ ಪ್ರಮಾಣ ಪತ್ರ ವಿತರಿಸಲಾಗುತ್ತಿದೆ ಎಂದು ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲ ಡಾ.ಡಿ.ನಾರಾಯಣಪ್ಪ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಪದವೀಧರರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ್ ಮಠ್ ವಹಿಸಲಿದ್ದಾರೆ. ಜೆಎಸ್‌ಎಸ್–ಎಹೆಚ್‌ಇಆರ್ ಸಮ ಕುಲಾಧಿಪತಿ ಡಾ.ಬಿ.ಸುರೇಶ್, ಕುಲಪತಿ ಡಾ.ಹೆಚ್. ಬಸವನಗೌಡಪ್ಪ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ನವದೆಹಲಿಯ ರಾಷ್ಟ್ರೀಯ ವೈದ್ಯಕೀಯ ಆಯೋಗದ ಮೆಡಿಕಲ್ ಅಸೆಸ್ಮೆಂಟ್ ಮತ್ತು ರೇಟಿಂಗ್ ಬೋರ್ಡ್ ಅಧ್ಯಕ್ಷ ಡಾ.ಎಂ.ಕೆ.ರಮೇಶ್ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪದಕ ಹಾಗೂ ಬಹುಮಾನ ವಿತರಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಅಧ್ಯಾಪಕರ ಸಾಧನೆಯನ್ನು ಗುರುತಿಸಿ ಉತ್ತಮ ಬೋಧಕ ಪ್ರಶಸ್ತಿ, ಅತ್ಯುನ್ನತ ಸಂಶೋಧನಾ ಪ್ರಶಸ್ತಿ, ವೈ.ಟಿ.ತಾತಾಚಾರಿ ದತ್ತಿ ಪ್ರಶಸ್ತಿಯನ್ನು ನೀಡಲಾಗುತ್ತದೆ ಎಂದು ತಿಳಿಸಿದರು.

ಜೆಎಸ್‌ಎಸ್ ವೈದ್ಯಕೀಯ ಕಾಲೇಜು 9 ವರ್ಷಗಳಿಂದ ಎನ್‌ಐಆರ್‌ಎಫ್ ಶ್ರೇಯಾಂಕದಲ್ಲಿ ದೇಶದ ಟಾಪ್ 40 ವೈದ್ಯಕೀಯ ಕಾಲೇಜುಗಳಲ್ಲಿ ಸ್ಥಾನ ಪಡೆದಿದೆ. 2025ರ ಕ್ಯೂಎಸ್ ಗೇಜ್ ಮೌಲ್ಯಮಾಪನದಲ್ಲಿ ಪ್ಲಾಟಿನಂ ಪ್ಲಸ್ ರೇಟಿಂಗ್ ಪಡೆದಿದ್ದು, 2025ನೇ ಶೈಕ್ಷಣಿಕ ವರ್ಷದಲ್ಲಿ ಸಂಸ್ಥೆ 721ಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಅಂತರರಾಷ್ಟ್ರೀಯ ಮಟ್ಟದ ಜರ್ನಲ್‌ಗಳಲ್ಲಿ ಪ್ರಕಟಿಸಿದೆ. ಈ ಸಂಸ್ಥೆಯಿಂದ ಒಟ್ಟು 6010 ಎಂಬಿಬಿಎಸ್, 2629 ಪಿಜಿ ವಿದ್ಯಾರ್ಥಿಗಳು ವೈದ್ಯಕೀಯ ವೃತ್ತಿಪರರಾಗಿ ಹೊರಬಂದಿದ್ದು, ಅವರು ಕ್ಲಿನಿಕಲ್ ಪರಿಣಿತಿ, ನೈತಿಕ ಮೌಲ್ಯಗಳು ಹಾಗೂ ರೋಗಿ ಸೇವೆಯ ಬದ್ಧತೆಯೊಂದಿಗೆ ದೇಶದ ವಿವಿಧ ಭಾಗಗಳಲ್ಲಿ ಹಾಗೂ ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದರು.

ಗೋಷ್ಠಿಯಲ್ಲಿ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪರೀಕ್ಷಾ ನಿಯಂತ್ರಕ ಸುಧೀಂದ್ರ ಭಟ್, ಉಪಪ್ರಾಂಶುಪಾಲರಾದ ಡಾ.ಸುಮಾ, ಡಾ.ಮಾಂತಪ್ಪ, ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ.ಸಿ.ಪಿ.ಮಧು, ಆಡಳಿತಾಧಿಕಾರಿ ಎಸ್.ಆರ್.ಸತೀಶ್ಚಂದ್ರ ಇದ್ದರು.

ನಕ್ಸಲ್ ಅಧ್ಯಾಯ ಅಂತ್ಯ: ದೇಶಕ್ಕೆ ನೆಮ್ಮದಿ




ಹೇಮ ನಂದೀಶ್

ಮೈಸೂರು, ಏ.2–ಭಾರತದಲ್ಲಿ ನಡೆದ ನಕ್ಸಲರ ರಕ್ತಸಿಕ್ತ ಅಧ್ಯಾಯವು ಕೊನೆಗೂ ಅಂತ್ಯಗೊಂಡಿರುವುದು ದೇಶಕ್ಕೆ ನೆಮ್ಮದಿ ತರುವ ಸಂಗತಿಯಾಗಿದೆ ಎಂದು ಬಿಜೆಪಿ ಮುಖಂಡರಾದ ಹೇಮ ನಂದೀಶ್ ಅಭಿಪ್ರಾಯಪಟ್ಟಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಹಲವು ದಶಕಗಳ ಕಾಲ ದೇಶದಲ್ಲಿ ವ್ಯಾಪಿಸಿದ್ದ ನಕ್ಸಲ್ ಚಟುವಟಿಕೆಯನ್ನು ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಮುಕ್ತಗೊಳಿಸಿದೆ. ಈ ಮಹತ್ತರ ಸಾಧನೆಗೆ ಕಾರಣೀಭೂತರಾದ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಅಭಿನಂದಿಸಲೇಬೇಕಿದೆ. 1959ರಲ್ಲಿ ಬಡವರ, ಶೋಷಿತರ ಪರ ಎಂಬ ಸೋಗಿನಲ್ಲಿ ಆರಂಭವಾದ ಈ ನಕ್ಸಲ್ ಚಳವಳಿ, ದಿನಗಳೆದಂತೆ ದೇಶದಲ್ಲಿ ರಕ್ತಸಿಕ್ತ ಅಧ್ಯಾಯವಾಗಿ ರೂಪುಗೊಂಡಿತು. 57 ವರ್ಷ ನಡೆದು ಬಂದ ಈ ಚಳವಳಿಗೆ ಕಾಂಗ್ರೆಸ್ ಬೆಂಬಲ ಕೊಟ್ಟಿದ್ದನ್ನು ನೋಡಿದ್ದೇವೆ. ನಕ್ಸಲ್ ಹಿಂಸಾಚಾರದಲ್ಲಿ 5 ಸಾವಿರ ಯೋಧರು, 15 ಸಾವಿರ ಅಮಾಯಕ ನಾಗರಿಕರು ಬಲಿಯಾಗಿದ್ದು ನೋವಿನ ಸಂಗತಿ ಎಂದು ಹೇಳಿದ್ದಾರೆ.

ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಕೇಂದ್ರ ಸರ್ಕಾರವು ಬ್ಯಾಂಕಿಂಗ್, ರಸ್ತೆ ಸಂಪರ್ಕ, ಮಹಿಳಾ ಸಬಲೀಕರಣ, ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡುವ ಮೂಲಕ ನಕ್ಸಲ್‌ವಾದವನ್ನು ನಿರ್ಮೂಲನೆ ಮಾಡಿದೆ. ಆದರೆ, ಇವರನ್ನೆಲ್ಲ ಬೆಂಬಲಿಸುವ ನಕ್ಸಲ್ ಮನಸ್ಥಿತಿ ಇವತ್ತಿಗೂ ಇದೆ. ಇದರ ವಿರುದ್ಧವೂ ದೊಡ್ಡ ಮಟ್ಟದ ಕಾರ್ಯ ಆಗಬೇಕಾಗಿದೆ ಎಂದರು.

ವಾಣಿಯರ್ ಮಾರಮ್ಮ ಜಾತ್ರಾ ಮಹೋತ್ಸವ



ಮೈಸೂರಿನ ವೀಣೆಶೇಷಣ್ಣ ರಸ್ತೆಯಲ್ಲಿ ವಾಣಿಯರ್ ಮಾರಮ್ಮ ಜಾತ್ರಾ ಮಹೋತ್ಸವದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಭಾಗವಹಿಸಿದ್ದರು. ಈ ವೇಳೆ ಮುಖಂಡರಾದ ರಾಜು, ಮಂಜುನಾಥ್, ಶ್ರೀನಿವಾಸ್ ಉಪಸ್ಥಿತರಿದ್ದರು. ಖ್ಯಾತ ಗಾಯಕ ವೀರಮಣಿಯವರ ತಂಡ ಗೀತಾ ಗಾಯನ ನಡೆಸಿಕೊಟ್ಟರು.

ದ್ವಿಚಕ್ರ ವಾಹನ ಮುಖಾಮುಖಿ ಡಿಕ್ಕಿ: ಓರ್ವ ಸಾವು

ಮೈಸೂರು, ಏ.2(ಜಿಎ)–ಎರಡು ದ್ವಿಚಕ್ರ ವಾಹನಗಳ ಮುಖಾಮುಖಿ ಡಿಕ್ಕಿಯಾಗಿ ಯುವಕನೋರ್ವ ಸಾವನ್ನಪ್ಪಿರುವ ಘಟನೆ ಗುರುವಾರ ಮೈಸೂರಿನ ಸರ್ದಾರ್ ವಲ್ಲಭಬಾಯಿ ಪಟೇಲ್‌ನಗರ ಜಂಕ್ಷನ್‌ನ ಬಸ್ ನಿಲ್ದಾಣದ ಬಳಿ ನಡೆದಿದೆ.

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲೂಕಿನ ಮಾದಾಪುರದ ಪವನ್ (16) ಮೃತ ಯುವಕ. ಹೋಂಡಾ ಆಕ್ಟಿವಾದಲ್ಲಿ ಪವನ್ ಪ್ರಕೃತಿ ಬಡಾವಣೆಯಿಂದ ನಾಡನಹಳ್ಳಿ ಕಡೆ ಬರುತ್ತಿದ್ದು, ಮತ್ತೊಂದೆಡೆ ನಾಡನಹಳ್ಳಿ ಕಡೆಯಿಂದ ಪ್ರಕೃತಿ ಬಡಾವಣೆ ಕಡೆ ಹೋಂಡಾ ಶೈನ್ ವಾಹನದಲ್ಲಿ ಕೆಂಪರಾಜು ಮತ್ತು ಗಿರೀಶ್ ಬರುವಾಗ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಡಿಕ್ಕಿ ಹೊಡೆದ ರಭಸಕ್ಕೆ ಪವನ್ ಹಾಗೂ ಕೆಂಪರಾಜುಗೆ ಗಂಭೀರವಾಗಿ ಪೆಟ್ಟು ಬಿದಿದ್ದು, ತಕ್ಷಣ ಖಾಸಗಿ ಆಸ್ಪತ್ರೆಗೆ ರವಾನಿಸಲಾಗಿದೆ. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಪವನ್ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾನೆ. ಕೆಂಪರಾಜು ಸ್ಥಿತಿ ಗಂಭೀರವಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.4.2026 ಗುರುವಾರ, ಮಳೆ ನಕ್ಷತ್ರ: ರೇವತಿ 31.03.2026 ರಿಂದ 13.04.2026
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಯೋಗ ತರಗತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 6.30 ರಿಂದ.

■ **ವ್ಯವಸ್ಥಾಪಕರು :** ಬಿಗ್ ಜ್ಯುವೆಲ್ಲರಿ ಶೋ, ವಿವಿಧ ರಾಜ್ಯಗಳ ಪ್ರಮುಖ ಆಭರಣ ವಿನ್ಯಾಸಗಾರರ ವಿನೂತನ ಆಭರಣಗಳ ಸಂಗ್ರಹ ಪ್ರದರ್ಶನ ಮತ್ತು ಮಾರಾಟ, ಉದ್ಘಾಟನೆ : ಬ್ರಾಂಡ್ ಅಂಬಾಸಿಡರ್ ನಟಿ ಅಮೃತಾ, ಸ್ಥಳ: ರ್‍ಯಾಡಿಸನ್ ಪ್ಲಾಜಾ ಹೋಟೆಲ್, ಎಂ.ಜಿ. ರಸ್ತೆ, ಬೆಳಗ್ಗೆ 10 ರಿಂದ.

■ **ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್:** ನಿಚ್ಚಂ ಪೊಸತು ಹಾಗೂ ಸರ್ವಕಾಲಕ್ಕೂ ಪಂಪ ಕೃತಿಗಳ ಬಿಡುಗಡೆ, ನಾಡೋಜ ಡಾ.ಹಂಪ ನಾಗರಾಜಯ್ಯ ಸಾರಸ್ವತಲೋಕ ಅನುಸಂಧಾನ ಕಾರ್ಯಕ್ರಮ, ಅಧ್ಯಕ್ಷತೆ: ವಿದ್ವಾಂಸ ಡಾ.ಹಂಪ ನಾಗರಾಜಯ್ಯ, ಉದ್ಘಾಟನೆ: ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್, ಕೃತಿಗಳ ಬಿಡುಗಡೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ಎನ್.ಕೆ.ಲೋಲಾಕ್ಷಿ, ಪ್ರಾಸ್ತಾವಿಕ ನುಡಿ: ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ, ಮುಖ್ಯ ಅತಿಥಿಗಳು: ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಉಷಾ ನರಸಿಂಹನ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ವಿಮರ್ಶಕರಾದ ಡಾ.ಎಂ.ಎಸ್. ಆಶಾದೇವಿ, ಹಾ.ವೀ. ಮಂಜುಳಾ ಶಿವಾನಂದ, ಸ್ಥಳ: ಸಾಹಿತ್ಯ ಭವನ ಸಭಾಂಗಣ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ :** 17ನೇ ಚಿತ್ರಕಲಾ ಶಿಬಿರ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಶಾಲಾ ಶಿಕ್ಷಣ ವಿಭಾಗದ ಸಹ ನಿರ್ದೇಶಕ ಎಂ. ಶಿವಮಾದಪ್ಪ, ಉದ್ಘಾಟನೆ : ಚಿತ್ರಕಲಾ ವಿಷಯ ಪರಿವೀಕ್ಷಕ ಲಿಂಗಪ್ಪ ಪೂಜಾರ್, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಹಿರಿಯ ಕಲಾವಿದ ಎಸ್.ಎಂ. ಜಂಬುಕೇಶ್ವರ, ಸ್ಥಳ: ಜೆಎಸ್‌ಎಸ್ ಬಾಲಜಗತ್ ಶಾಲಾ ಆವರಣ, ಬೆಳಗ್ಗೆ 10.30ಕ್ಕೆ.

■ **ನಿರಂತರ ಫೌಂಡೇಷನ್ :** ನಿರಂತರ ರಂಗ ತಂಡದ ಕಲಾವಿದರಿಂದ ಮಹೇಶ್ ಎಲಕುಂಚವಾರ್ ಅವರ ಪಾರ್ಟಿ ನಾಟಕ ಪ್ರದರ್ಶನ, ಅನುವಾದ : ಪ್ರಸಾದ್ ಕುಂದೂರು, ನಿರ್ದೇಶನ : ಚಿದಂಬರರಾವ್ ಜಂಬೆ, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ.

ಶ್ರೀರಾಮ ನವಮಿ ಕಾರ್ಯಕ್ರಮಗಳು

■ **ಶ್ರೀ ರಾಮ ಮಂದಿರ, ಜಯನಗರ ಮೈಸೂರು:** 60ನೇ ವರ್ಷದ ರಾಮೋತ್ಸವ, ಶ್ರೀರಾಮಚಂದ್ರಸ್ವಾಮಿಯವರ ಸೀತಾಕಲ್ಯಾಣ, ಪಟ್ಟಾಭಿಷೇಕ, ಶ್ರೀ ಆದಿತ್ಯಾದಿ ನವಗ್ರಹಗಳ ವಾರ್ಷಿಕೋತ್ಸವ, ಹನಮಂತೋತ್ಸವ ಮತ್ತು ವಸಂತೋತ್ಸವ ಕಾರ್ಯಕ್ರಮ, ಬೆಳಗ್ಗೆ 7 ರಿಂದ ಶ್ರೀ ರಾಮಚಂದ್ರಸ್ವಾಮಿಯವರಿಗೆ ಷೋಡಷ ದ್ರವ್ಯಗಳಿಂದ ಅಭಿಷೇಕ ಮತ್ತು ಪಟ್ಟಾಭಿಷೇಕ, ಬೆಳಗ್ಗೆ 10ಕ್ಕೆ ಸಭಾ ಕಾರ್ಯಕ್ರಮ, ಶ್ರೀ ಜಗದ್ಗುರು ಶಂಕರಾಚಾರ್ಯ ಶ್ರೀ ಗೋವಿಂದಾನಂದ ಸರಸ್ವತಿ ಸ್ವಾಮೀಜಿ, ಶ್ರೀ ಬಾಲಕೃಷ್ಣಾನಂದ ಮಹಾಸಂಸ್ಥಾನಂ, ಶುಕಶಂಕರಪೀಠ, ತಲಕಾಡು ಇವರಿಂದ ಅನುಗ್ರಹ ಭಾಷಣ, ಫಲಮಂತ್ರಾಕ್ಷತೆ, ಸಂಜೆ 6 ರಿಂದ ಶ್ರೀ ಪರಿವಾರ ಸಮೇತ ಹನುಮಂತೋತ್ಸವ ಕಾರ್ಯಕ್ರಮ, ಸ್ಥಳ: ಶ್ರೀರಾಮ ಮಂದಿರ ಜಯನಗರ



■ **ಶ್ರೀರಾಮ ಸೇವಾ ಮಂಡಳಿ :** 73ನೇ ವರ್ಷದ ಶ್ರೀರಾಮೋತ್ಸವ, ಸಂಜೆ 6.30 ರಿಂದ ವಿದ್ವಾನ್ ಶ್ರೀ ಉಮಾಕಾಂತ್ ಭಟ್ ಶಿರಸಿ ಮತ್ತು ವೃಂದದವರಿಂದ ಯಕ್ಷಗಾನ ತಾಳಮದ್ದಳೆ, ವಿಷಯ : ಪಾದುಕಾ ಪ್ರಧಾನ, ಸ್ಥಳ: ಶ್ರೀ ಅವನಿಶಂಕರ ಮಠ 4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ವಿದ್ಯಾರಣ್ಯಪುರಂ, ಮೈಸೂರು.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ ಮೈಸೂರು:** ಶ್ರೀ ಪರಾಭವ ಸಂವತ್ಸರದ 136ನೇ ವರ್ಷದ ಶ್ರೀ ರಾಮೋತ್ಸವ, ಶ್ರೀ ಪರಾಭವ ಸಂವತ್ಸರದ ಶ್ರೀ ರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿದುಷಿ ಗಿರಿಜಾ ಶಂಕರ್ ಸುಂದರೇಶನ್ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ಜ್ಯೋತ್ಸ್ನ ಶ್ರೀಕಾಂತ್–ಪಿಟೀಲು, ವಿದ್ವಾನ್ ಜಯಚಂದ್ರ ರಾವ್–ಮೃದಂಗ, ವಿದುಷಿ ಸುಕನ್ಯಾ ರಾಮ್‌ಗೋಪಾಲ್–ಘಟಂ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30 ರಿಂದ

■ **ಅರಳಿಕಟ್ಟೆ ಶ್ರೀರಾಮ ಧಾರ್ಮಿಕ ಮತ್ತು ದಾನದತ್ತಿ:** ಶ್ರೀ ಪರಾಭವನಾಮ ಸಂವತ್ಸರ ಶ್ರೀರಾಮ ನವಮಿ ಪ್ರಯುಕ್ತ ವಿದ್ಯಾರಣ್ಯಪುರಂನ ಸ್ಕಂದ ಭಜನಾ ಮಂಡಳಿ ಮತ್ತು ಮೀರಾ ಸಂಗೀತಾ ಕಲಾ ನಿಕೇತನದವರಿಂದ ಭಜನೆ. ಸ್ಥಳ: ಜಯಲಕ್ಷ್ಮಿ ವಿಲಾಸ ರಸ್ತೆ, ಚಾಮರಾಜಪುರಂ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಜ್ಞಾನ ಜ್ಯೋತಿ ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ :ಬಿ.ಕೆ. ಮೀನಾಕ್ಷಿ, 6.40 ಭಾವಗೀತೆ, 6.45 ಪ್ರಾಯೋಜಿತ ಕಾರ್ಯಕ್ರಮ–ಕೃಷಿ ಕ್ಷೇತ್ರದಲ್ಲಿ ಕೋರಮಂಡಲ್ ಅಂತಾರಾಷ್ಟ್ರೀಯ ನಿಗಮದ ಪಾತ್ರ, ಪ್ರಾಯೋಜಕರು–ಕೋರಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಅರೋಗ್ಯ, 9.30 ಗಾಂಧೀ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಸಾಕೇತ ರಾಮನ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ: ಜಿ. ಎನ್. ಮಂಜುನಾಥ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು, ಪ್ರಸ್ತುತಿ: ಜಿ ಶಾಂತಕುಮಾರ್, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ –ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಪಲ್ಲದಮ್ ಎಸ್. ವೆಂಕಟರಮಣ ರಾವ್– ಹಾರ್ಮೋನಿಯಂ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ತೋಟಗಾರಿಕಾ ಬೆಳೆಗಳ ಬೇಸಾಯದಲ್ಲಿ ಕೃತಕ ಬುದ್ಧಿಮತ್ತೆ ಬಳಕೆ ಕುರಿತು ಮಾತನಾಡುತ್ತಾರೆ, ಗುಂಡ್ಲುಪೇಟೆ ತಾಲೂಕು ಶಿವಪುರದ ಕೃಷಿಕ ಎಸ್. ಎಂ. ನಾಗಾರ್ಜುನ ಕುಮಾರ್, ಪ್ರಸ್ತುತಿ–ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ವಿಜ್ಞಾನ ಭಾರತಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಗೀತಾ ವೈ ಪುಟ್ಟಿ – ಹಾಡುಗಾರಿಕೆ, 10.00 ತತ್ವ ಸಂಚಾರ– ಜನಪದ ಗಾಯಕರ ತತ್ವಗಾಯನ, 10.30 ಸವಿನೆನಪು

ಮೈಸೂರಿನ ಕರ್ನಾಟಕ ಮುಕ್ತ ವಿವಿ ಕುಲಪತಿ ಸ್ಥಾನಕ್ಕೆ ಅರ್ಜಿ ಆಹ್ವಾನ!

● ರಾಜ್ಯಪಾಲರ ಸಚಿವಾಲಯದಿಂದ ಜಾಹೀರಾತು ಪ್ರಕಟಣೆ ● ಜೂನ್ 30ಕ್ಕೆ ಹಾಲಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಅವರ ಅಧಿಕಾರಾವಧಿ ಅಂತ್ಯ ● ಪಾರದರ್ಶಕ ಆಯ್ಕೆಗೆ ಸೆಂಟ್ರಲ್ ಯೂನಿವರ್ಸಿಟಿ ಮಾದರಿ ಅನುಸರಣೆ ● ಅರ್ಜಿ ಸಲ್ಲಿಕೆಗೆ ಮೇ 10 ಕಡೆ ದಿನ; ಪ್ರಾಧ್ಯಾಪಕರಾಗಿ ಕನಿಷ್ಠ 10 ವರ್ಷ ಸೇವಾ ಅನುಭವ ಅವಶ್ಯ

ಮೈಸೂರು, ಏ.2(ಬಿಎಲ್‌ಯು)– ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ನೇಮಕಕ್ಕೆ ರಾಜ್ಯಪಾಲರ ಸಚಿವಾಲಯವು ಪತ್ರಿಕಾ ಜಾಹೀರಾತು ಮೂಲಕ ಅರ್ಹ ಪ್ರಾಧ್ಯಾಪಕರಿಂದ ಅರ್ಜಿ ಆಹ್ವಾನಿಸಿದೆ.

ಈ ಮೊದಲು ಕುಲಪತಿಗಳ ಆಯ್ಕೆ ಪ್ರಕ್ರಿಯೆ ಗೌಪ್ಯವಾಗಿ ನಡೆಯುತ್ತಿತ್ತು. ಈ ನಿಟ್ಟಿನಲ್ಲಿ ಸರ್ಚಿಂಗ್ ಕಮಿಟಿ, ಸ್ಕ್ರೀನಿಂಗ್ ಕಮಿಟಿ ರಚನೆ ಸೇರಿದಂತೆ ಯಾವುದೇ ಪ್ರಕ್ರಿಯೆ ಸಾರ್ವಜನಿಕರಿಗೆ ತಿಳಿಯುತ್ತಿರಲಿಲ್ಲ. ಕೆಲವೊಮ್ಮೆ ಅರ್ಜಿ ಸಲ್ಲಿಸಿದವರಿಗೂ ಮಾಹಿತಿ ಸಿಗುತ್ತಿರಲಿಲ್ಲ. ಆದರೆ ಈಗ ಸೆಂಟ್ರಲ್ ಯೂನಿವರ್ಸಿಟಿಗಳ ಕುಲಪತಿ ಆಯ್ಕೆ ಮಾದರಿಯನ್ನು ಅನುಸರಿಸುತ್ತಿರುವುದು ಗಮನಾರ್ಹವಾಗಿದೆ. ಇದು ಪಾರದರ್ಶಕ ಆಯ್ಕೆ ಪ್ರಕ್ರಿಯೆಯ ಭಾಗವಾಗಿರಬಹುದು ಎನ್ನಲಾಗುತ್ತಿದೆ.

ಮಾನದಂಡವೇನು?: ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಹುದ್ದೆಗೆ ಅರ್ಜಿ ಸಲ್ಲಿಸುವವರು ವಿಶ್ವವಿದ್ಯಾನಿಲಯ ಧನ ಸಹಾಯಗಳ ಆಯೋಗ(ಯುಜಿಸಿ)ದ ಮಾರ್ಗಸೂಚಿಗಳು ಹಾಗೂ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಅಧಿನಿಯಮ 1992ರನ್ವಯ ಕನಿಷ್ಠ 10 ವರ್ಷಗಳ ಕಾಲ ಪ್ರಾಧ್ಯಾಪಕರಾಗಿ ಅಥವಾ ತತ್ಸಮಾನ ಹುದ್ದೆಯ ಕಾರ್ಯಾನುಭವ ಹೊಂದಿರಬೇಕು. ವಿದ್ಯಾರ್ಹತೆ, ಸಂಶೋಧನೆ, ಶೈಕ್ಷಣಿಕ ಮತ್ತು ಆಡಳಿತಾತ್ಮಕ ಅನುಭವ ಸೇರಿದಂತೆ ಇತರೆ ವಿವರಗಳೊಂದಿಗೆ ವೆಬ್‌ಸೈಟ್ www.ksoumysoru.ac.in ನಲ್ಲಿ ಲಭ್ಯವಿರುವ ನಿಗದಿತ ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಣೆಯೊಂದಿಗೆ 'ರಾಜ್ಯಪಾಲರ ವಿಶೇಷ ಕಾರ್ಯದರ್ಶಿ'ಗಳಿಗೆ ಮೇ 10, 2026ರೊಳಗೆ ಅರ್ಜಿ ಸಲ್ಲಿಸಬೇಕು ಎಂದು ರಾಜ್ಯಪಾಲರ ಸಚಿವಾಲಯ ಸೂಚಿಸಿದೆ. ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್.ಪ್ರಭುಶಂಕರ್ ಅವರ ಹೆಸರಿನಲ್ಲಿ ಇಂದು(ಏಪ್ರಿಲ್ 2) ಜಾಹೀರಾತು ಪ್ರಕಟಿಸಲಾಗಿದೆ.

ಮಾಹಿತಿಗಾಗಿ ಜಾಹೀರಾತು: ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್)ದ ಸಿದ್ಧಾಂತವಾದಿ ಪಂಡಿತ್ ದೀನ ದಯಾಳ್ ಉಪಾಧ್ಯಾಯ ಅವರ 60ನೇ ವರ್ಷದ ಸ್ಮರಣಾರ್ಥ 'ಏಕಾತ್ಮ ಮಾನವ ದರ್ಶನ' ಕಾರ್ಯಕ್ರಮ ಆಯೋಜಿಸಲು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅನುಮತಿ ನೀಡಿದ್ದಕ್ಕಾಗಿ ಕುಲಪತಿ ಹುದ್ದೆಗೆ ನೇಮಕಾತಿ ಪ್ರಕ್ರಿಯೆ ಆರಂಭಿಸಲಾಗಿದೆ ಎಂಬ ಚರ್ಚೆ ನಡೆದಿದ್ದು, ಇದನ್ನು ಹಾಲಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ನಿರಾಕರಿಸಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಸ್ಪಷ್ಟನೆ ನೀಡಿದ ಅವರು, ಜೂನ್ 30ಕ್ಕೆ ನನ್ನ ಅಧಿಕಾರಾವಧಿ ಪೂರ್ಣಗೊಳ್ಳಲಿದ್ದು, ರಾಜ್ಯಭವನದಿಂದ ಮುಂದಿನ ಆದೇಶ ಬರುವ ತನಕ ನಾನು ಅಧಿಕಾರದಲ್ಲಿ ಇರುತ್ತೇನೆ. ಕುಲಪತಿಗಳ ಆಯ್ಕೆ ಬಗ್ಗೆ ಅಭ್ಯರ್ಥಿಗಳಿಗೆ ಮಾಹಿತಿ ನೀಡಲು ಜಾಹೀರಾತು ನೀಡಿ, ಅರ್ಜಿ ಸಲಿಕೆಗೆ ತಿಂಗಳ ಕಾಲಾವಕಾಶ ನೀಡಲಾಗಿದೆ. ತರುವಾಯ ರಾಜ್ಯಪಾಲರು ನಿಯೋಜಿಸುವ ತಜ್ಞರ ಸಮಿತಿ ಪರಾಮರ್ಶಿಸಿ, ವರದಿ ನೀಡಲು ಎರಡು ತಿಂಗಳು ಬೇಕಾಗಬಹುದು. ತರುವಾಯ ರಾಜ್ಯಪಾಲರು ನೂತನ ಕುಲಪತಿಯನ್ನು ನೇಮಕ ಮಾಡಲಿದ್ದಾರೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.





ಮುಕ್ತ ವಿವಿ ಬ್ಯಾಂಕ್ ಅಕೌಂಟ್ ಫ್ರೀಜ್ ಮಾಡಿಸಲು ರಾಜ್ಯ ಸರ್ಕಾರಕ್ಕೆ ಆಗಿಲ್ಲ

ಮೈಸೂರು: ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕೋಟ್ಯಾಂತರ ರೂಪಾಯಿಗಳ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಬ್ಯಾಂಕ್ ಖಾತೆಗಳನ್ನು ತಾತ್ಕಾಲಿಕವಾಗಿ ಸ್ಥಗಿತ(ಫ್ರೀಜ್)ಗೊಳಿಸುವಂತೆ ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ಸಂಬಂಧಪಟ್ಟ ಬ್ಯಾಂಕ್‌ಗಳಿಗೆ ಪತ್ರ ಬರೆದು ಸೂಚಿಸಿತ್ತು.

ಹಗರಣಗಳ ಆರೋಪದ ಬಗ್ಗೆ ತನಿಖೆ ನಡೆಸುವಂತೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ಬಿ.ಎ.ಪಾಟೀಲ್ ನೇತೃತ್ವದ ಏಕ ಸದಸ್ಯ ಆಯೋಗವನ್ನು ನೇಮಕ ಮಾಡಿದರು. ಪಾಟೀಲ್ ಅವರು ಈಗಾಗಲೇ ಮೂರ್ನಾಲ್ಕು ಬಾರಿ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ, ದಾಖಲಾತಿ ಪರಿಶೀಲನೆ ನಡೆಸಿ ಕೆಲವರ ವಿಚಾರಣೆಯನ್ನೂ ಮಾಡಿದರು.

ಈ ಮಧ್ಯೆ ವಿಶ್ವವಿದ್ಯಾನಿಲಯ ಖಾತೆ ಹೊಂದಿರುವ ಬ್ಯಾಂಕ್‌ಗಳಿಗೆ ಪತ್ರ ಬರೆದಿದ್ದ ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ಬ್ಯಾಂಕ್ ಖಾತೆಯನ್ನು ಫ್ರೀಜ್ ಮಾಡುವಂತೆ ಸೂಚಿಸಿತ್ತು. ಹೀಗಾದರೆ ವಿಶ್ವವಿದ್ಯಾನಿಲಯದ ಬ್ಯಾಂಕ್‌ನ ಹಣಕಾಸು ವ್ಯವಹಾರವೇ ಸ್ಥಗಿತಗೊಂಡು ವೇತನ ಸೇರಿದಂತೆ ಇತರೆ ಆಡಳಿತಾತ್ಮಕ ಪ್ರಕ್ರಿಯೆಗೆ ಅಡಚಡಣೆಯಾಗುವ ಆತಂಕ ಸೃಷ್ಟಿಯಾಗಿತ್ತು. ಆದರೆ ಬ್ಯಾಂಕ್‌ಗಳು ವಿಶ್ವವಿದ್ಯಾನಿಲಯದ ಯಾವುದೇ ಖಾತೆಗಳನ್ನು ರದ್ದು ಮಾಡಿಲ್ಲ.

ಬ್ಯಾಂಕ್‌ಗಳು ಕೇಳಿದ ಹಲವು ಸ್ಪಷ್ಟನೆಗೆ ಉನ್ನತ ಶಿಕ್ಷಣ ಇಲಾಖೆ ಯಾವುದೇ ರೀತಿಯ ಉತ್ತರ ನೀಡದ ಕಾರಣ ವಿಶ್ವವಿದ್ಯಾನಿಲಯದ ಬ್ಯಾಂಕ್ ಖಾತೆಗಳನ್ನು ಫ್ರೀಜ್ ಮಾಡಲು ಬ್ಯಾಂಕ್‌ಗಳು ಒಪ್ಪಿಲ್ಲ. ಇದರಿಂದ ವಿಶ್ವವಿದ್ಯಾನಿಲಯದ ಬ್ಯಾಂಕ್ ಹಣಕಾಸಿನ ವ್ಯವಹಾರ ಎಂದಿನಂತೆ ನಡೆಯುತ್ತಿದೆ. ಬ್ಯಾಂಕ್ ಖಾತೆ ಫ್ರೀಜ್ ಆಗದ ಕಾರಣ ನೌಕರರ ವೇತನ ಸೇರಿದಂತೆ ಯಾವುದೇ ಆಡಳಿತಾತ್ಮಕ ಪ್ರಕ್ರಿಯೆಗಳಿಗೆ ತೊಂದರೆ ಆಗಿಲ್ಲ.

–ಪ್ರೊ.ಶರಣಪ್ಪ ವಿ.ಹಲಸೆ, ಕುಲಪತಿ, ಕರಾಮುವಿ

ರಾಜ್ಯಪಾಲರಾಗಿ ನೇಮಕ!

"ಕರ್ನಾಟಕ ರಾಜ್ಯ ಮುಕ್ತ ವಿವಿ ಹಾಲಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಅವರು ಅಧಿಕಾರಾವಧಿ ಪೂರ್ಣಗೊಳ್ಳುವ ಮುನ್ನವೇ 'ರಾಜ್ಯಪಾಲ'ರಾಗಿ ನೇಮಕಗೊಳ್ಳುವ ಸಾಧ್ಯತೆಗಳಿವೆ ಎಂದು ಉನ್ನತ ಮೂಲಗಳು ತಿಳಿಸಿವೆ!!! ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಇದೆಲ್ಲಾ ಅಷ್ಟು ಸರಳವಲ್ಲ. ನನಗಂತೂ ಈ ಬಗ್ಗೆ ತಿಳಿದಿಲ್ಲ. ಅದೆಲ್ಲವೂ ಅದೃಷ್ಟ. ಏನೇನಾಗುತ್ತದೋ ಗೊತ್ತಿಲ್ಲ, ನೋಡೋಣ ಎಂದರು.

ರಂಗಭೂಮಿ ಮಕ್ಕಳಲ್ಲಿ ಹೊಸ ಚಿಂತನೆ ಮೂಡಿಸಲಿದೆ : ಹಿರಿಯ ರಂಗಕರ್ಮಿ ಪ್ರಸನ್ನ

ಮೈಸೂರು,ಏ.2(ಪಿಎಂ)– ರಂಗಭೂಮಿಯು ಮಕ್ಕಳಲ್ಲಿ ಹೊಸ ಚಿಂತನೆ ಮೂಡಿಸಲಿದೆ. ಆ ಮೂಲಕ ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ರಂಗಭೂಮಿ ಸಹಕಾರಿ ಎಂದು ಹಿರಿಯ ರಂಗಕರ್ಮಿ ಹಾಗೂ ಇಂಡಿಯನ್ ಥಿಯೇಟರ್ ಫೌಂಡೇಷನ್‌ನ ವ್ಯವಸ್ಥಾಪಕ ಟ್ರಸ್ಟಿ ಪ್ರಸನ್ನ ಹೇಳಿದರು.

ನಗರದ ಹಾರ್ಡ್ವಿಕ್ ಶಾಲೆ ಆವರಣದಲ್ಲಿರುವ ಇಂಡಿಯನ್ ಥಿಯೇಟರ್ ಫೌಂಡೇಷನ್‌ನ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಹಾಗೂ ಸದರಿ ಸಂಸ್ಥೆ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿರುವ ರಾಷ್ಟ್ರೀಯ ನಟನಾ ಕಾರ್ಯಾಗಾರದ ಉದ್ಘಾಟನಾ ಸಮಾರಂಭದಲ್ಲಿ ಗುರುವಾರ ಅವರು ಮಾತನಾಡಿದರು.



ರಾಷ್ಟ್ರೀಯ ನಟನಾ ಕಾರ್ಯಾಗಾರದ ಉದ್ಘಾಟನಾ ಸಮಾರಂಭ ನಡೆಯಿತು.

ರಂಗಭೂಮಿಗೆ ಸಂಸ್ಥೆಯು 4 ವರ್ಷಗಳಿಂದ ಸೇವೆ ಸಲ್ಲಿಸುತ್ತಿದೆ. ಆದರೆ ಬಹಳಷ್ಟು ಕೆಲಸ ಮಾಡಿದರೂ, ಹವ್ಯಾಸಿ ರಂಗ ತಂಡಗಳಿಗಿಂತ ಅರ್ಧದಷ್ಟು ಕಡಿಮೆ ಅನುದಾನವನ್ನು ನಮ್ಮ ಸಂಸ್ಥೆಗೆ ರಾಜ್ಯ ಸರ್ಕಾರ ನೀಡಿತ್ತು. ಇದನ್ನು ಗೌರವ ಹಾಗೂ ವಿನಯದಿಂದ ಸಂಸ್ಥೆಯು ತಿರಸ್ಕರಿಸಿದೆ ಎಂದರು. ಮೊಬೈಲ್ ಮೋಹಕ್ಕೆ ಸಿಲುಕಿರುವ ಮಗುವನ್ನು ಹೊರಗೆಳೆದು ನೈಜ ಜಗತ್ತಿಗೆ ತರುವ ಹಾಗೂ ದೇಶದ ಸಿನಿಮಾ ನಗರಿಗಳ ಹಿತ್ತಲಿಲ್ಲಿ ಸಿಲುಕಿಕೊಂಡಿರುವ ಕಲಾವಿದರನ್ನು ಕರೆತರುವ ಕೆಲಸವನ್ನು ನಮ್ಮ ಸಂಸ್ಥೆ ಮಾಡುತ್ತಿದೆ. ರಂಗ ಸಂಸ್ಕೃತಿ ಬೆಳೆಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಲ್ಲಿ ಭಿಕ್ಷೆ ಬೇಡುವ ಅಗತ್ಯ ನನಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ದೆಹಲಿ ಮೂಲದ ಖ್ಯಾತ ರಂಗಭೂಮಿ ನಿರ್ದೇಶಕ ರಜನೀಶ್ ಬಿಸ್ತ್ ಇತರರು ಹಾಜರಿದ್ದರು.

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ನಕ್ಕರೆ ಅದೇ ಸ್ವರ್ಗ

ಪ್ರತಿಯೊಂದು ಹೆಣ್ಣಿನಲ್ಲೂ 9 ದೇವಿಯರ ಸ್ವರೂಪ ಅಡಗಿರುತ್ತೆ. ಮದುವೆ ಆದ ಮೇಲೆ ಯಾವ ರೂಪ ಆಕ್ಟಿವೇಟ್ ಆಗುತ್ತೆ ಅನ್ನೋದು ಗಂಡನ ಪಾಪ-ಪುಣ್ಯಕ್ಕೆ ಅನುಗುಣವಾಗಿ ನಿರ್ಧಾರವಾಗುತ್ತೆ...!

ಮೈಸೂರು ಮಿತ್ರ

ಶುಕ್ರವಾರ, ಏಪ್ರಿಲ್ 3, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಬಡವನಾಗಿ ಹುಟ್ಟಿದ್ದು ನಿನ್ನ ತಪ್ಪಲ್ಲ,
ಆದರೆ ಬಡವನಾಗಿ ಸತ್ರೆ ಅದು ನಿನ್ನ ತಪ್ಪು.

ವೇದ ಸುಳ್ಳಾದರೂ { ಕೈಲಾದವರು ಮಾಡುತ್ತಾರೆ
ಗಾದೆ ಸುಳ್ಳಾಗದು { ಕೈಲಾಗದವರು ಆಡುತ್ತಾರೆ

ನಿಮ್ಮ ಪತ್ರಗಳು

ಮಕ್ಕಳ ಬೇಸಿಗೆ ರಜಾ ಮಜಾ ಅರ್ಥಪೂರ್ಣವಾಗಿರಲಿ!

ಮಾನ್ಯರೆ,

ಈ ಬಾರಿಯ, 2025-26ರ ಶೈಕ್ಷಣಿಕ ವರ್ಷ ಮುಗಿಯುತ್ತಾ ಬಂದಿದ್ದು, ಇದೇ ಏಪ್ರಿಲ್ 11 ರಿಂದ ಮೇ 28 ರವರೆಗೆ ಸರ್ಕಾರ ಬೇಸಿಗೆ ರಜೆಯನ್ನು ಮಕ್ಕಳಿಗೆ ಘೋಷಿಸಿದೆ. ಶಾಲೆಯಲ್ಲಿ ಮಕ್ಕಳು ಇದ್ದಾಗ ಶಾಲಾ ಪಠ್ಯ ವಿಷಯಕ್ಕೆ ಸಂಬಂಧಪಟ್ಟಂತೆ ಮಕ್ಕಳ ನಿರಂತರ ಕಲಿಕೆ ಇದ್ದೇ ಇರುತ್ತದೆ. ಆದರೆ ಬೇಸಿಗೆ ರಜೆಯ ಮಜಾವನ್ನು ಮಕ್ಕಳು ಅರ್ಥಪೂರ್ಣವಾಗಿ ಆಚರಿಸದೆ ಇದ್ದರೆ ಹೇಗೆ?

ಇಂದಿನ ಆಧುನಿಕ ಯುಗದಲ್ಲಿ ಮೊಬೈಲ್, ದೂರದರ್ಶನ ಹಾಗೂ ಕಂಪ್ಯೂಟರ್‌ಗಳ ಹಾವಳಿ ಪ್ರತಿ ಮನೆ-ಮನಗಳನ್ನು ಆವರಿಸಿವೆ. ಮಕ್ಕಳು ರಜಾ ಅವಧಿಯಲ್ಲಿ ಇವುಗಳ ಮುಂದೆ ಕೂತು ಗೇಮ್‌ಗಳನ್ನು ಆಡುತ್ತಾ ಮತ್ತಷ್ಟು ಮಾನಸಿಕ ಒತ್ತಡಕ್ಕೆ ಸಿಲುಕುತ್ತಿದ್ದಾರೆ. ಇದು ತಪ್ಪಬೇಕು. ರಜಾ ಅವಧಿಯಲ್ಲಿ ಮಕ್ಕಳಿಗೆ ಒಳಾಂಗಣ ಕ್ರೀಡೆಗಳಿಗಿಂತ ಹೊರಾಂಗಣ ಕ್ರೀಡೆಗಳಿಗೆ ಹೆಚ್ಚಿನ ಒತ್ತನ್ನು ನೀಡಬೇಕು. ಗಾಳಿಪಟ ಆಡಿಸುವುದು, ಗೋಲಿ-ಗಜ್ಜುಗ ಆಡುವುದು, ಚಿನ್ನಿದಾಂಡು, ಸಂಬಂಧಿಕರ ಊರುಗಳಿಗೆ ಸುತ್ತಾಟ, ಅಜ್ಜ ಅಜ್ಜಿಯರಿಂದ ಕಥೆ ಕಲಿಯುವುದು, ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವಿಕೆ, ಜಾತ್ರೆ ಹಾಗೂ ಉತ್ಸವಗಳಲ್ಲಿ ನಾಟಕವನ್ನು ನೋಡಿ ಸಂಭ್ರಮಿಸುವುದು... ಈ ರೀತಿಯ ಹತ್ತು ಹಲವು ಕಾರ್ಯ ಚಟುವಟಿಕೆಗಳಲ್ಲಿ ಮಕ್ಕಳು ರಜಾ ಅವಧಿಯಲ್ಲಿ ಭಾಗಿಯಾದರೆ ಎಷ್ಟೊಂದು ಚೆಂದ ಅಲ್ಲವೇ?

ಇದರಿಂದ ಮಕ್ಕಳು ಒತ್ತಡ ರಹಿತವಾಗಿ, ಮೋಜಿನ ಜೊತೆ ರಜೆಯ ಮಜಾವನ್ನು ಅನುಭವಿಸಿದಂತಾಗುತ್ತದೆ. ಮಕ್ಕಳ ಚಿಂತನಾಲಹರಿ ಬದಲಾಗಿ ಅವರ ಜ್ಞಾನ ಯೋಜನೆಯು ಮತ್ತಷ್ಟು ವಿಸ್ತಾರವಾಗುತ್ತದೆ. ಸ್ನೇಹ ಬಾಂಧವ್ಯ ಹೆಚ್ಚಾಗಿ ಮಕ್ಕಳ ಏಕಾಂಗಿತನ ದೂರವಾಗುತ್ತದೆ. ಇಷ್ಟೇ ಅಲ್ಲದೆ ಕೂಡು ಕುಟುಂಬದ ಜೊತೆ ಅನೇಕ ಸಂಬಂಧಿಕರ ಊರುಗಳಿಗೆ ಹೋಗುವುದರ ಪರಿಣಾಮ ವಿವಿಧ ಸ್ಥಳಗಳ ಪರಿಚಯ ಹಾಗೂ ವಿವಿಧ ಕುಟುಂಬಗಳ ಆರ್ಥಿಕ ಸ್ಥಿತಿಗತಿಗಳು ಮತ್ತು ಬದುಕಿನ ವೃತ್ತಿಗಳ ಅರಿವು ಮಕ್ಕಳಿಗೆ ಸಿಕ್ಕಂತಾಗುತ್ತದೆ. ಈ ಬಾರಿಯ ಬೇಸಿಗೆ ರಜಾ ಅವಧಿಯಲ್ಲಿ ಮಕ್ಕಳ ಮನಸ್ಸನ್ನು ಪ್ರಫುಲ್ಲಿತಗೊಳಿಸಲು ಪ್ರತಿಯೊಬ್ಬ ಪೋಷಕರು ಮುಂದಾಗಬೇಕಿದೆ.

-ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಸಾಧ್ಯವೇ?

ಮಾನ್ಯರೆ,

ಮೈಸೂರಿನಲ್ಲಿ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಪ್ರತಿದಿನ ಒಂದಿಲ್ಲೊಂದು ಸಮಸ್ಯೆಗಳು ಹುಟ್ಟಿಕೊಳ್ಳುತ್ತಿವೆ. ಪಾರಂಪರಿಕ ಕಟ್ಟಡಗಳು ಇರುವ ಜಾಗದಿಂದ 200 ಮೀಟರ್ ಪರಿಮಿತಿಯಲ್ಲಿ ಯಾವುದೇ ಹೊಸ ಕಟ್ಟಡ ನಿರ್ಮಿಸುವಂತಿಲ್ಲ ಎಂಬ ನಿಯಮ ಇದ್ದರೂ, ಪಾರಂಪರಿಕ ಕಟ್ಟಡವಾದ ಹಳೇ ಜಿಲ್ಲಾಧಿಕಾರಿ ಕಚೇರಿ ಮುಂಭಾಗವಿರುವ ಕ್ಯಾಂಟೀನ್ ಕಟ್ಟಡದ ಛಾವಣಿ ತೆರವುಗೊಳಿಸಿ ಎರಡು ಮಹಡಿಯ ಕಟ್ಟಡ ನಿರ್ಮಿಸಿ ಮತ್ಸ್ಯದರ್ಶಿನಿ ಆರಂಭಿಸುತ್ತಿದ್ದೇವೆ ಎಂದು ಮೀನುಗಾರಿಕೆ ಇಲಾಖೆ ಅಧಿಕಾರಿಗಳು ಹೇಳಿರುವುದು ಹಾಸ್ಯಾಸ್ಪದವೇ ಸರಿ. ಮೀನೂಟದ ಕ್ಯಾಂಟೀನ್ ಅನ್ನು ಬೇರೆ ಕಡೆ ಮಾಡಿಕೊಳ್ಳಲಿ ನಮ್ಮ ಪಾರಂಪರಿಕ ಕಟ್ಟಡಗಳ ಬಳಿ ನಿಯಮ ಬಾಹಿರವಾಗಿ ಕ್ಯಾಂಟೀನ್ ನಿರ್ಮಿಸುವುದು ಸರಿಯಲ್ಲ. ಜಿಲ್ಲಾಧಿಕಾರಿಗಳು ಈ ವಿಷಯದಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಪಾರಂಪರಿಕ ತಜ್ಞರಾದ ಎನ್.ಎಸ್.ರಂಗರಾಜು ಆಗ್ರಹಿಸಿರುವುದು ಶ್ಲಾಘನೀಯ. ಮೈಸೂರಿನಲ್ಲಿ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಹೇಗೆ ಮಾಡಬೇಕು ಎಂದು ತಿಳಿಸುವ ಪಾರಂಪರಿಕ ತಜ್ಞರು ಇದ್ದಾರೆ. ಇನ್ನು ಮುಂದಿನ ದಿನಗಳಲ್ಲಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಇವರ ಅಭಿಪ್ರಾಯ ಸಂಗ್ರಹಿಸಿ ಪಾರಂಪರಿಕ ಕಟ್ಟಡಗಳನ್ನು ಉಳಿಸಿಕೊಳ್ಳುವತ್ತ ಗಮನ ಹರಿಸುವುದು ಒಳ್ಳೆಯದು.

-ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಶಿಕ್ಷಣ ಸಚಿವರು ಆಟಕ್ಕುಂಟು ಲೆಕ್ಕಕ್ಕಿಲ್ಲ!

ಮಾನ್ಯರೆ,

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಭಾಷೆ ಆಟಕ್ಕುಂಟು ಲೆಕ್ಕಕ್ಕಿಲ್ಲವಂತೆ. ಹಿಂದಿ ಸೇರಿದಂತೆ ತೃತೀಯ ಭಾಷೆಗಳಿಗೆ ಅಂಕವೂ ಇಲ್ಲ...ಪಾಸು-ಫೇಲೂ ಪರಿಗಣನೆಯೇ ಇಲ್ಲ... ಎಂದಿದ್ದಾರೆ ಶಿಕ್ಷಣ ಸಚಿವ ಮಧು ಬಂಗಾರಪ್ಪ. ಮಾರ್ಚ್ 31 ರ ಮಂಗಳವಾರ ನಡೆದ ಎಸ್‌ಎಸ್‌ಎಲ್‌ಸಿ ಹಿಂದಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಯನ್ನು ನೋಡಿದಾಗ ಶಿಕ್ಷಣ ಸಚಿವರು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬುದರ ಸತ್ಯ ಅರಿವಾಗುತ್ತದೆ. ಕಾರಣ ಈ ಹಿಂದಿ ಪ್ರಶ್ನೆ ಪತ್ರಿಕೆಯಲ್ಲಿ ಗರಿಷ್ಠ ಅಂಕಗಳು 80 ಎಂದೇ ನಮೂದಾಗಿದೆ.

ವಿದ್ಯಾರ್ಥಿಗಳು ಟಿವಿ, ನ್ಯೂಸ್ ಪೇಪರ್, ಮೊಬೈಲ್ ಮುಂತಾದ ಮೂಲಗಳಿಂದ ಶಿಕ್ಷಣ ಸಚಿವರ ಮಾತುಗಳನ್ನು ಕೇಳಿದ ಬಳಿಕ ಪರೀಕ್ಷೆಗೆ ಹಾಜರಾದರೆ ಪ್ರಶ್ನೆ ಪತ್ರಿಕೆಯಲ್ಲಿ **ಶಿಕ್ಷಣ ಸಚಿವರ ಮಾತು ಲೆಕ್ಕಕ್ಕಿಲ್ಲ** ಎಂಬುದು ಮನವರಿಕೆಯಾಗುತ್ತದೆ. ವಿದ್ಯಾರ್ಥಿಗಳು ಯಾರ ಮಾತನ್ನು ನಂಬುವುದು? ಶಿಕ್ಷಣ ಸಚಿವರ ಮಾತನ್ನೋ ಅಥವಾ ಪ್ರಶ್ನೆ ಪತ್ರಿಕೆಯಲ್ಲಿರುವ ಸೂಚನೆಯನ್ನೋ?

-ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

ರಸ್ತೆಗೆ ಮುಕ್ತಿ ಯಾವಾಗ?

ಮಾನ್ಯರೆ,

ಶ್ರೀರಂಗಪಟ್ಟಣ-ಬೀದರ್ ಹೆದ್ದಾರಿ ಕಾಮಗಾರಿ ಆರಂಭವಾಗಿ ಸುಮಾರು ವರ್ಷವಾಯಿತು. ಇನ್ನೂ ಅಂತಿಮ ಹಂತ ತಲುಪಲಿಲ್ಲ. ಪ್ರತಿದಿನ ಶ್ರೀರಂಗಪಟ್ಟಣದಿಂದ ಪಾಂಡವಪುರದತ್ತ ಓಡಾಡುವ ಜನರಿಗೆ ತುಂಬಾ ಕಿರಿ ಕಿರಿ ಉಂಟಾಗುತ್ತಿದೆ. ಜೊತೆಗೆ ಭಾನುವಾರ ಈ ರಸ್ತೆಯಲ್ಲಿ ಓಡಾಡಲು ತುಂಬಾ ಯಾತನೆ ಅನುಭವಿಸಬೇಕಾಗಿದೆ. ಅದೆಷ್ಟು ಜನ ಬಿದ್ದು ಗಾಯ ಮಾಡಿಕೊಂಡಿದ್ದರೋ ಗೊತ್ತಿಲ್ಲ. ವಾಹನಗಳಂತೂ ಪ್ರತಿದಿನ ಹೆಚ್ಚುತ್ತಲೇ ಇವೆ. ಕಾಮಗಾರಿ ಕುಂಟುತ್ತಾ ಸಾಗಿದೆ. ಆದುದರಿಂದ ಈ ರಸ್ತೆ ಕಾಮಗಾರಿ ಆದಷ್ಟು ಬೇಗ ಮುಗಿಯಲಿ ಎಂಬುದು ನಮ್ಮ ಆಗ್ರಹ.

-ಕುಣಿಗಲ್ ಜಯಣ್ಣ, ಪಾಂಡವಪುರ.

ಬಸ್ ವ್ಯವಸ್ಥೆ ಕಲ್ಪಿಸಿ

ಮಾನ್ಯರೆ,

ಹೆಚ್.ಡಿ.ಕೋಟೆ ತಾಲೂಕಿನ ಹ್ಯಾಂಡ್‌ಪೋಸ್ಟ್ ಮಾರ್ಗವಾಗಿ ಮಾದಾಪುರ ಕಡೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್‌ಗಳು ಬೆಳಗ್ಗೆ 6.30ಕ್ಕೆ, ಮಧ್ಯಾಹ್ನ 2.30ಕ್ಕೆ ಹಾಗೂ ರಾತ್ರಿ 8.25 ರಿಂದ ಲಂಕೆ ಗ್ರಾಮದವರೆಗೂ ಸಂಚರಿಸುತ್ತವೆ.

ಆದರೆ ಲಂಕೆ ಗ್ರಾಮದಿಂದ ರಾಜೂರು ಗ್ರಾಮಕ್ಕೆ ಯಾವುದೇ ಬಸ್ ಸೌಲಭ್ಯ ಇಲ್ಲದೆ ಈ ಗ್ರಾಮದ ಜನರಿಗೆ ತುಂಬಾ ತೊಂದರೆಯಾಗಿದೆ. ಲಂಕೆ ಗ್ರಾಮದಿಂದ ರಾಜೂರು ಗ್ರಾಮಕ್ಕೆ ಸುಮಾರು 4 ರಿಂದ 5 ಕಿ.ಮೀ. ಆಗುತ್ತದೆ. ರಸ್ತೆ ಸಾರಿಗೆ ನಿಗಮದ ಮೈಸೂರು ವಿಭಾಗದ ಅಧಿಕಾರಿಗಳು ಮಾದಾಪುರದಿಂದ ರಾಜೂರುವರೆಗೂ ಬಸ್ ಸೌಲಭ್ಯ ಕಲ್ಪಿಸುವ ಮೂಲಕ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

-ಸಿದ್ದಲಿಂಗೇಗೌಡ, ಹೈರಿಗೆ ಗ್ರಾಮ, ಹೆಚ್.ಡಿ. ಕೋಟೆ ತಾ.



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

ಅನುಭಾವದ ಚಿಂತನೆಗಳು

ಒಳಗೂಡಿಸಿಕೊಳ್ಳುವಿಕೆಯೇ ಜೀವನ...

ಕೊಡುವುದು ಮತ್ತು ಪಡೆಯುವುದು ಎಲ್ಲ ವ್ಯವಹಾರಗಳ ಮೂಲ. ಯಾವ ಪರಸ್ಪರ ಕ್ರಿಯೆಯೂ ಇವೆರಡಿಲ್ಲದೆ ನಡೆಯಲಾರದು. ಈಗಿನ ದಿನಗಳಲ್ಲಿ ನಾವು ಸದಾಕಾಲ ಒಂದನ್ನು ಪರಮ ಪವಿತ್ರ ಸ್ಥಾನಕ್ಕೆ ಏರಿಸಲು, ಮತ್ತೊಂದನ್ನು ಅಧೀನಕ್ಕೆ ತರಲು ಪ್ರಯತ್ನಿಸುತ್ತಿದ್ದೇವೆ. ಒಂದು ಶ್ರೇಷ್ಠ, ಮತ್ತೊಂದು ಕನಿಷ್ಠ ಎನ್ನುವಂತಿದೆ. ಇಂದು ನಮಗೆ ಕೊಡುವುದರ ಮಹತ್ವದ ಬಗ್ಗೆ ಒತ್ತಿ ಹೇಳಬೇಕು ಎನಿಸುತ್ತದೆ, ಏಕೆಂದರೆ ಪಡೆಯುವುದು ಬಹಳ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದ್ದು ಕೊಡುವುದು ವಿರಳವಾಗಿದೆ.


ಅದೇನೇ ಇದ್ದರೂ, ವಾಸ್ತವದಲ್ಲಿ ಕೊಡುವುದು, ಪಡೆಯುವುದು ಎಂದೇನು ಇಲ್ಲ. ಜೀವನವನ್ನು ಸ್ವಲ್ಪ ಆಳವಾಗಿ ಗ್ರಹಿಸಿದಲ್ಲಿ ನಾವು ಕೊಡುವುದು ಮತ್ತು ಪಡೆಯುವುದು ಎಂದೇನು ಇಲ್ಲ ಎನ್ನುವುದನ್ನು ನೋಡಬಹುದು. ಜೀವನವು ತನ್ನನ್ನು ತಾನೇ ಸದಾಕಾಲ ಸರಿಪಡಿಸಿಕೊಳ್ಳುತ್ತಿರುತ್ತದೆ. ಆಧುನಿಕ ವಿಜ್ಞಾನವು ಇವತ್ತು ಇದನ್ನು ಒಪ್ಪುತ್ತದೆ. ಕೊಡುವುದು-ಪಡೆಯುವುದು, ಕೂಡುವುದು-ಕಳೆಯುವುದು ಎಂದೇನೂ ಇಲ್ಲ; ಅದೊಂದು ಚೈತನ್ಯದ ಪುನರ್ವ್ಯವಸ್ಥೆ ಅಷ್ಟೆ. ನೀವು ಎಲ್ಲವನ್ನು ನಿಮ್ಮದೇ ಎಂದುಕೊಂಡರೆ, ನೀವು ಅಗತ್ಯವಿದ್ದ ಹಾಗೆ ಸರಿಪಡಿಸಿಕೊಳ್ಳುತ್ತೀರಿ ಅಷ್ಟೇ.

ಜೀವನದ ಪ್ರಮುಖ ಪ್ರಕ್ರಿಯೆಯು ಒಂದು ನಿರಂತರ ವ್ಯವಹಾರ ಎಂದು ನೀವು ಮನಗಂಡಾಗ ನಿಮಗೆ ತಿಳಿಯುವುದೇನೆಂದರೆ, ನೀವು ಮಾಡಿದ ಲವಲೇಶದ ಕೊಡುಗೆಯ ಪ್ರತಿಯಾಗಿ, ನೀವು ಟ್ರಿಲಿಯನ್ನಗಳಷ್ಟು ಸದಾಕಾಲ ಪಡೆಯುತ್ತೀರಿ. ಇರುವಿಕೆಯ ಶಕ್ತಿ-ಬಲಗಳು, ಕೋಟ್ಯನುಕೋಟಿ ಜೀವಿಗಳು ಗೊತ್ತಿದ್ದೋ, ಗೊತ್ತಿಲ್ಲದೆಯೋ, ನಿಮ್ಮೊಳಗೂ ಹೊರಗೂ ಜೀವನವು ನಡೆಯುವಂತೆ ಮಾಡಲು ಕೆಲಸ ಮಾಡುತ್ತಿವೆ. ಇರುವಿಕೆಯಲ್ಲಿನ ಸಕಲವೂ ನಿಮ್ಮನ್ನು ಹೇಗಾದರೂ ಜೀವಂತವಾಗಿ ಹಾಗೂ ಚೆನ್ನಾಗಿ ಇಡಲು ಹೇಗೋ ಸಹಯೋಗ ಮಾಡುತ್ತಿವೆ. ಒಬ್ಬ ಮೂರ್ಖ ಮಾತ್ರ ತನ್ನನ್ನು ತಾನು ಕೊಡುಗೆದಾರ ಎಂದುಕೊಳ್ಳಬಲ್ಲ. ನಾವು ಕೇವಲ ಬದುಕಿರುವುದೇ ಹೇರಳವಾಗಿ ಪಡೆಯುತ್ತಿರುವುದರಿಂದ.

ಇದು ಗೊತ್ತಿಲ್ಲದ ಜನರು ಬಗೆ ಬಗೆಯ ಕಾರಣ ಕೊಡುತ್ತಾರೆ. ಅದು ಅಹಂಭಾವವೋ, ಹಿಂದಿನ ಅಥವಾ ಇಂದಿನ ಅಪರಾಧಿ ಪ್ರಜ್ಞೆಯನ್ನು ಮುಚ್ಚುವುದೋ ಆಗಿರಬಹುದು. ಕೆಲವರಿಗೆ ಇದು ಸ್ವರ್ಗಕ್ಕಿರುವ ಟಿಕೆಟ್‌ನಂತೆ ಕಾಣಬಹುದು. ಅದೇನಿದ್ದರೂ ಮುಖ್ಯವಲ್ಲ, ನಾನು ಅವರಿಗೆ ಕೊಡುಗೆ ನೀಡಲು ಪ್ರೇರೇಪಿಸುತ್ತೇನೆ. ಏಕೆಂದರೆ ಕೊಡುವ ಮತ್ತು ಪಡೆಯುವ ಪ್ರಕ್ರಿಯೆಯು ಮಾನವ ಸಮಾಜದಲ್ಲಿ ಬಹಳ ತಿರುಚಿ ಹೋಗಿದೆ.

ಕೊಡುವ ಕ್ರಿಯೆಯು ತಾನಾಗಿಯೇ ಒಂದು ಆಧ್ಯಾತ್ಮಿಕ ಪ್ರಕ್ರಿಯೆ. ವೈಯಕ್ತಿಕ ಮಟ್ಟದಲ್ಲಿ ಈ ಒಂದು ಸರಳ ಕ್ರಿಯೆಯೇ ಒಬ್ಬ ಮನುಷ್ಯ ನನ್ನು ಸಂಪನ್ನನಾಗಿಸಿ ಬದಲಾವಣೆ ತರುತ್ತದೆ, ಇನ್ನಷ್ಟು ಜೀವ ಗ್ರಹಿಸುವಂತೆ ಮಾಡುತ್ತದೆ. ಜನರು ಒಂದು ಸಹಜ, ಸತ್ಯ ಸಂಗತಿಯನ್ನು ನೆನಪಿಡಬೇಕು: ನಿಮ್ಮ ಕೈಗಳನ್ನು ಕೊಡುವುದಕ್ಕಾಗಿ ಚಾಚಿದಾಗ, ಹಾಗೆಯೇ ಪಡೆಯುವುದಕ್ಕೂ ನಿಮ್ಮ ಕೈಗಳು ತೆರೆದುಕೊಳ್ಳುತ್ತವೆ. ಪಡೆಯುವ ರೂಪ ಮಾತ್ರ ಬೇರೆಯಾಗಿರಬಹುದು. ಪಡೆಯುವುದು ಖಚಿತ.

ಸಮಾಜದ ಮಟ್ಟದಲ್ಲೂ, ಕೊಡುವುದು ಬಹಳ ಮುಖ್ಯ ಪ್ರಕ್ರಿಯೆಯಾಗಿದೆ. ಒಂದು ಸಮಾಜದ ಅಸ್ಥಿರತೆಯ ಎಲ್ಲಕ್ಕಿಂತ ದೊಡ್ಡ ಮೂಲವೆಂದರೆ, ಅದರಲ್ಲಿರುವ ಅತ್ಯಂತ ದೊಡ್ಡ ಆರ್ಥಿಕ ಅಸಮಾನತೆ. ಸಮಾಜದಲ್ಲಿನ ಕಟ್ಟಳೆಯ ಮೇಲೆ ಕೈವಾಡ ಮಾಡುವ



> “ಯಾವುದೇ ಪ್ರಾಮಾಣಿಕ ಆಧ್ಯಾತ್ಮಿಕ ಪ್ರಕ್ರಿಯೆಯು ತನ್ನ ಅಂತರಾಳದಲ್ಲಿ ಒಳಗೂಡಿಸಿಕೊಳ್ಳುವುದನ್ನೇ ಒತ್ತಿ ಹೇಳುತ್ತದೆ. ಒಳಗೂಡಿಸಿಕೊಳ್ಳುವ ಪ್ರಬಲವಾದ ಪ್ರಜ್ಞೆಯಿಂದಲೇ ಜನರು ಮತ್ತು ಸಂಸ್ಥೆಗಳು ಮುಂದೆ ಬಂದು, ಅವುಗಳಿಗೆ ಸಮಾಜವು ಆರ್ಥಿಕ, ಮತ್ತಿತರ ಸಂಪನ್ಮೂಲಗಳಿಂದ ಶಕ್ತಿ ತುಂಬಿದಾಗ ನಡೆಯುವ ಕ್ರಿಯೆಯು ನಿಶ್ಚಿತವಾಗಿ ಕ್ಷೇಮಾಭಿವೃದ್ಧಿಗಳನ್ನು ತರುತ್ತದೆ-ಸರ್ವರಿಗೂ, ಈ ಭೂಮಿಗೂ. ಇದೇ ಕಾರಣದಿಂದ ಐತಿಹಾಸಿಕವಾಗಿ ಆಧ್ಯಾತ್ಮಿಕತೆ, ಮತ್ತು ಲೋಕೋಪಕಾರವು ಜೊತೆ ಜೊತೆಯಲ್ಲೇ ಸಾಗುತ್ತವೆ.

ಸಾಮರ್ಥ್ಯದಿಂದ ಕೆಲ ಜನರು ಅಸಹ್ಯ ಎನ್ನಿಸುವಷ್ಟು ಶ್ರೀಮಂತರಾಗಿದ್ದು, ಸಮಾಜದ ಬಹಳಷ್ಟು ಭಾಗಗಳಿಗೆ ಏನೂ ಉಳಿಸಿಲ್ಲ. ಇದು ಯಾವುದೇ ಸಮಾಜಕ್ಕೆ ಟಿಕ್ ಟಿಕ್ ಎನ್ನುತ್ತಿರುವ ಟೈಮ್ ಬಾಂಬ್.

ಆದರ್ಶವಾದಿಗಳು ಯಾವತ್ತೂ ಇರುವ ರಚನೆಗಳನ್ನು ಕೆಡವಿ, ಮತ್ತೆ ಕ್ಷೇಮಾಭ್ಯುದಯ ರಾಷ್ಟ್ರದೆಡೆಗೆ ಹೋಗಬೇಕೆನ್ನುತ್ತಾರೆ. ಪ್ರಪಂಚದೆಲ್ಲೆಡೆಯಲ್ಲೂ ಕ್ಷೇಮಾಭ್ಯುದಯ ರಾಷ್ಟ್ರಗಳು ನಿರಂಕುಶ ಗೊಂದಲಕ್ಕೆ ತಿರುಗಿದ್ದು ಅದರಿಂದ ಯಾರಿಗೂ ನೆಮ್ಮದಿ ಸಿಕ್ಕಿಲ್ಲದಿರುವುದನ್ನು ನಾವು ನೋಡಿದ್ದೇವೆ. ನೀವು ಜನರನ್ನು ಕೊಡಲು ಒತ್ತಾಯಿಸಿದಾಗ ನಿಮಗೆ ಸಿಗುವುದೇ ಕಮ್ಯುನಿಸಂ. ಜನರು ಸ್ವಯಂಪ್ರೇರಿತರಾಗಿ ಕೊಡುವ ಮನಸ್ಸುಳ್ಳವರಾಗಿದ್ದರೆ ಕಮ್ಯುನಿಸಂ ಒಂದು ಅದ್ಭುತ ಕಲ್ಪನೆ. ಮಾರ್ಕ್ಸ್ ಮುನ್ಸೂಚಿಸಿದಂತೆ ಪ್ರಪಂಚದ ಎಲ್ಲ ಶ್ರೀಮಂತ ರಾಷ್ಟ್ರಗಳು ಕಮ್ಯುನಿಸಂಗೆ ತಿರುಗಿದ್ದರೆ ಇದೊಂದು ಅದ್ಭುತ ಪ್ರಪಂಚವಾಗಬಹುದಿತ್ತು. ವಿಡಂಬನೆಯ ವಿಚಾರವೆಂದರೆ ಏನೂ ಇರದ ಜನರೇ ಹಂಚಿಕೊಳ್ಳುವುದರ ಬಗ್ಗೆ ಮಾತಾಡುತ್ತಾರೆ, ಶ್ರೀಮಂತರಲ್ಲ. ಕಮ್ಯುನಿಸಂ ಎಂದರೆ ಎಲ್ಲರಿಗಾಗಿ ಸಮೃದ್ಧಿ. ಆದರೆ ದುರದೃಷ್ಟವಶಾತ್ ಅದನ್ನು ಎಲ್ಲರಿಗಾಗಿ ದಾರಿದ್ರ್ಯ ಎಂದು ತಪ್ಪಾಗಿ ಅರ್ಥೈಸಲಾಗಿದೆ. ಹಾಗಾಗಿಯೇ, ಇದೊಂದು ದುರಂತ.

ಮಾನವೀಯತೆಯನ್ನೂ, ಕಾಯ್ದುಕೊಂಡು, ಸರ್ವಸಮ್ಮತಿಯನ್ನೂ ಪಡೆದು, ಈ ಅಸಮಾನತೆಯನ್ನು ಸಂಬೋಧಿಸುವುದರಲ್ಲಿ ಆಧ್ಯಾತ್ಮಿಕ ಚಳುವಳಿಗಳು ಬಹು ದೊಡ್ಡ ಪಾತ್ರ ನಿರ್ವಹಿಸಬಲ್ಲವು. ಏಕೆಂದರೆ ಯಾವುದೇ ಪ್ರಾಮಾಣಿಕ ಆಧ್ಯಾತ್ಮಿಕ ಪ್ರಕ್ರಿಯೆಯು ತನ್ನ ಅಂತರಾಳದಲ್ಲಿ ಒಳಗೂಡಿಸಿಕೊಳ್ಳುವುದನ್ನೇ ಒತ್ತಿ ಹೇಳುತ್ತದೆ. ಒಳಗೂಡಿಸಿಕೊಳ್ಳುವ ಪ್ರಬಲವಾದ ಪ್ರಜ್ಞೆಯಿಂದಲೇ ಜನರು ಮತ್ತು ಸಂಸ್ಥೆಗಳು ಮುಂದೆ ಬಂದು, ಅವುಗಳಿಗೆ ಸಮಾಜವು ಆರ್ಥಿಕ, ಮತ್ತಿತರ ಸಂಪನ್ಮೂಲಗಳಿಂದ ಶಕ್ತಿ ತುಂಬಿದಾಗ ನಡೆಯುವ ಕ್ರಿಯೆಯು ನಿಶ್ಚಿತವಾಗಿ ಕ್ಷೇಮಾಭಿವೃದ್ಧಿಗಳನ್ನು ತರುತ್ತದೆ -ಸರ್ವರಿಗೂ, ಈ ಭೂಮಿಗೂ. ಇದೇ ಕಾರಣದಿಂದ ಐತಿಹಾಸಿಕವಾಗಿ ಆಧ್ಯಾತ್ಮಿಕತೆ ಹಾಗೂ ಲೋಕೋಪಕಾರವು ಜೊತೆಜೊತೆಯಲ್ಲೇ ಸಾಗುತ್ತವೆ.

ನಾವು ಧಾರ್ಮಿಕ ಸಂಸ್ಥೆಗಳಾದ ದೇವಸ್ಥಾನ, ಚರ್ಚು ಮಸೀದಿಗಳಿಗೆ ಕೊಡಬೇಕೋ ಅಥವಾ ತಾವೇ ಕ್ಷೇಮಾಭಿವೃದ್ಧಿಯನ್ನು ನೋಡಿಕೊಳ್ಳಬೇಕೋ ಎನ್ನುವ ಪ್ರಶ್ನೆಗಳು ಜನರ ಮನಸ್ಸಿನಲ್ಲಿ ಏಳುತ್ತಿವೆ. ಇದಕ್ಕೆ ಕಾರಣ, ಕೆಲವು ಸಂಸ್ಥೆಗಳು ಅನುಸರಿಸುತ್ತಿರುವ; ಸಮಾಜದ ಹೊರಗಿನಿಂದ ಹಣ ಮತ್ತು ಸಂಪನ್ಮೂಲಗಳನ್ನು ಒದಗಿಸುವಂಥ ರೂಢಿಗಳು.

ಭಾರತದ ಹೊರಗಿನ ಶಕ್ತಿಗಳು ಸಂಶಯಾಸ್ಪದ ರೀತಿಯಲ್ಲಿ ಧನ ಸಂದಾಯ ಮಾಡುತ್ತಾ, ಬೇಕಂತಲೇ ಧಾರ್ಮಿಕ ಮತಾಂತರ ಮತ್ತು ಧಾರ್ಮಿಕ ಮೂಲಭೂತವಾದವನ್ನು ಹರಡುತ್ತಾ ಇರುವುದು ಸರ್ಕಾರಕ್ಕೆ ಗೊತ್ತಾಗಿದೆ. ಆದರೆ ನಮ್ಮ ದೇಶದ ಬೇರೆಲ್ಲ ಸಂಸ್ಥೆಗಳಂತೆಯೇ ಈ ಸಂಸ್ಥೆಗಳ ಚಟುವಟಿಕೆ ಹಾಗೂ ಲೆಕ್ಕಪತ್ರಗಳು ಇಲ್ಲಿನ ಕಾನೂನಿಗೆ ಒಳಗಾಗುತ್ತವೆ. ನಮ್ಮ ದೇಶದಲ್ಲಿನ ಸಮಸ್ಯೆಯೆಂದರೆ ಹಲವು ಬಾರಿ ನಮ್ಮಲ್ಲಿ ಅತ್ಯುತ್ತಮ ಕಾನೂನುಗಳಿರುತ್ತವೆ. ಆದರೆ ಬಹಳ ಕಳಪೆ ಮಟ್ಟದಲ್ಲಿ ಜಾರಿಗೊಳಿಸಲಾಗುತ್ತದೆ. ಹಾಗಾಗಿ, ನಮಗೆ ಬೇಕಿರುವುದು ಹೆಚ್ಚಿನ ಪರಿಶೀಲನೆಯೇ ಹೊರತು ಸಂಪೂರ್ಣ ತಡೆಯೊಡ್ಡುವುದಲ್ಲ.

ಈಗ, ಲೋಕೋಪಕಾರವೇ ನಮ್ಮೆಲ್ಲ ಸಮಸ್ಯೆಗಳ ಪರಿಹಾರವೇ? ಪರಿಸ್ಥಿತಿ ನಿಜಕ್ಕೂ ಹದಗೆಟ್ಟಾಗ ನಾವು ಕೈದಾನ ನೀಡಬೇಕಾಗುವುದು. ಆದರೆ ನಿಮಗೆ ಸುಸ್ಥಿರ ಪರಿಹಾರ ಬೇಕಿದ್ದಲ್ಲಿ, ಅದೂ ಇಂದಿನ ಪ್ರಪಂಚದಲ್ಲಿ, ಅದೊಂದು ವ್ಯಾವಹಾರಿಕ ಮಾದರಿಯೇ ಆಗಿರಬೇಕು. ಏಕೆಂದರೆ ದಾನ ಕೊಡುವುದು ದೀರ್ಘ ಕಾಲದಲ್ಲಿ ನಡೆಯುವುದೂ ಇಲ್ಲ, ಅದೊಂದು ಪರಿಹಾರವೂ ಅಲ್ಲ. ಈ ವಿಷಯದಲ್ಲಿ ನಾನು ಹೇಳುವುದೇನೆಂದರೆ ಒಂದು ಮೃದು ಆರ್ಥಿಕತೆಯನ್ನು ನಿರ್ಮಿಸುವುದು ಮುಖ್ಯವಾಗುತ್ತದೆ. ಸೂಕ್ಷ್ಮ ಸ್ವಭಾವದ ಆರ್ಥಿಕತೆ. ದಾನ ಕೊಡುವುದಲ್ಲ.

ಪ್ರಪಂಚದ 90%ರಷ್ಟು ಸಂಪತ್ತನ್ನು ಕೇವಲ 10%ರಷ್ಟು ಜನರು ಅನುಭವಿಸುತ್ತಿರುವುದು ನಿಜವಿದ್ದರೂ, ಮನುಕುಲದ ಇತಿಹಾಸದಲ್ಲಿ ಹಿಂದೆಂದೂ ಇಲ್ಲದಷ್ಟು ಸಂಪತ್ತು ಹರವಿಕೊಂಡಿದೆ. ಇದು ಖಾಸಗಿ ಉದ್ಯಮದ ಕೊಡುಗೆ. ಮಾನವ ಚಮತ್ಕಾರ, ಉದ್ಯಮದ ಕ್ಷೇತ್ರವನ್ನು ಲೋಕೋಪಕಾರವೂ ಸೇರಿದಂತೆ ನಮ್ಮ ಜೀವನದ ಎಲ್ಲ ವಿಷಯಗಳಿಗೂ ವಿಸ್ತರಿಸಬೇಕು, ಒಂದೇ ಬಗೆಯ ವ್ಯವಹಾರ ಮಾಡುವುದಕ್ಕಲ್ಲ. ಈ ಚಮತ್ಕಾರವನ್ನು ಕೊಡುಗೆ ನೀಡುವುದರಲ್ಲೂ ತರಬೇಕಿದೆ. ಎಲ್ಲೋ ಕೆಲವು ದುರುಪಯೋಗ ನಡೆದದ್ದಕ್ಕೆ ಅದನ್ನು ಮೊಟಕುಗೊಳಿಸಬಾರದು.

ಶುಭ ಶುಕ್ರವಾರ; ಯೇಸುವಿನ ಸತ್ಯ ಸಂದೇಶ




ಪರಮ ಪೂಜ್ಯ ಫ್ರಾನ್ಸಿಸ್ ಸೆರಾವೊ, ಧರ್ಮಾಧ್ಯಕ್ಷರು, ಮೈಸೂರು ಧರ್ಮಕ್ಷೇತ್ರ

ಶುಭ ಶುಕ್ರವಾರ' ಅರ್ಥಾತ್ 'ಗುಡ್ ಫ್ರೈಡೇ'ಯನ್ನು ಆಚರಿಸುತ್ತಿದ್ದೇವೆ. ಪ್ರಭು ಯೇಸು ಕ್ರಿಸ್ತರು ಮಾನವಕುಲದ ರಕ್ಷಣೆಗಾಗಿ ಮತ್ತು ಸತ್ಯದ ಹಾದಿಗಾಗಿ ತಮ್ಮನ್ನು ತಾವೇ ಶಿಲುಬೆಯ ಮೇಲೆ ಅರ್ಪಿಸಿಕೊಂಡ ಪವಿತ್ರ ದಿನ. ಯೇಸುವಿನ ಈ ತ್ಯಾಗವು ನಮಗೆ ಕಲಿಸುವುದು ಕೇವಲ ಧಾರ್ಮಿಕ ಆಚರಣೆಯನ್ನಲ್ಲ, ಬದಲಾಗಿ ಅನ್ಯಾಯ ಮತ್ತು ದ್ವೇಷದ ವಿರುದ್ಧ ಅಚಲವಾದ ಪ್ರೀತಿಯಿಂದ ಜಯಗಳಿಸುವುದನ್ನು ಸಾರುತ್ತದೆ.

ಶುಭ ಶುಕ್ರವಾರದ ದಿನದಂದೂ ಸುತ್ತಲೂ ಕತ್ತಲಾಗಿದೆ. ಕಾರ್ಮೋಡ ಕವಿದಿದೆ. ಯಾವುದೇ ಪ್ರಶ್ನೆಗಳಿಗೆ ಉತ್ತರವಿಲ್ಲ. ಆದರೆ ಶಿಲುಬೆಗೇರಿದ ಪ್ರಭುಯೇಸುವಿನಿಂದ ನಮ್ಮ ಹೃದಯಗಳಿಗೆ ಭರವಸೆಯ ಬೀಜ ಬಿತ್ತನೆಯಾಗಿದೆ. ಪ್ರಭು ಯೇಸುವಿಗೆ ಮಾತ್ರ ಭಕ್ತರ ಹೃದಯ ಹೃನನಗಳು ಹಸಿರಾಗುವ ಎಲ್ಲಾ ಸೂಚನೆಗಳ ಅರಿವಿದೆ.

ಶುಭಶುಕ್ರವಾರ ದ್ವಂದ್ವ ಭಾವಗಳನ್ನು ಮೂಡಿಸುವಂತಹ ದಿನ. ಭರವಸೆಯನ್ನು ಕಳೆದುಕೊಂಡಂತಹ ಜನತೆ ಒಂದೆಡೆಯಾದರೆ, ಭರವಸೆ ಮೂಡಿಸುವಂತಹ ವ್ಯಕ್ತಿ ಇನ್ನೊಂದೆಡೆಯಿದ್ದಾರೆ. ಮನುಜನಿಗೆ ಕತ್ತಲು ಮಾತ್ರ ಕಾಣಿಸುತ್ತಿದ್ದರೆ, ಪ್ರಭು ಕ್ರಿಸ್ತರಿಗೆ ಭರವಸೆಯ ಬೆಳಕು ಮನೆ ಮಾಡಿದೆ. ಶುಭ ಶುಕ್ರವಾರದಂದು ನೋವಿದೆ. ಕಷ್ಟ-ಸಂಕಷ್ಟಗಳೇ ತುಂಬಿವೆ. ಭರವಸೆ ಕಳೆದುಕೊಂಡಂತಹ ಮನೋಭಾವನೆಯೂ ಇದೆ. ಅಸಮಾಧಾನ, ಅಶಾಂತಿ ಎಲ್ಲೆಲ್ಲೂ ಮನೆ ಮಾಡಿದೆ. ಆದರೂ ಯಾವುದೋ ಒಂದು ಶಕ್ತಿ, ತನ್ನ ಅದಮ್ಯ ಪ್ರೀತಿಯಿಂದ ಮನುಜನಿಗೆ ಭರವಸೆಯನ್ನು ಮೂಡಿಸುತ್ತಿದೆ.

ಪ್ರಭು ಯೇಸುವನ್ನು ಕೊಂದಂತಹ ಶತ್ರುಗಳು ಎಲ್ಲವೂ ಮುಗಿದಿದೆ ಎಂದು ಭಾವಿಸಿದ್ದಾರೆ. ತಮ್ಮ ಬದುಕಿಗೆ ಅಡ್ಡ ಬಂದ ವ್ಯಕ್ತಿ ನಾಶವಾಗಿದ್ದಾರೆ. ಇನ್ನು ಮುಂದೆ ತಮ್ಮನ್ನು ಎದುರಿಸುವವರು ಯಾರೂ ಇಲ್ಲ. ಬಡವರನ್ನು, ನಿರ್ಗತಿಕರನ್ನು ಯಾವ ರೀತಿ ಬೇಕಾದರೂ ಶೋಷಣೆ ಮಾಡಬಹುದು, ದೌರ್ಜನ್ಯ ನಡೆಸಬಹುದು ಎಂಬುದಾಗಿ ಆಲೋಚನೆ ಮಾಡುತ್ತಿದ್ದಾರೆ. ಆದರೆ ಶುಭ ಶುಕ್ರವಾರದ ಮೌನ ಭಾನುವಾರದ ಮಾತಾಗಿ, ಸಂಭ್ರಮವನ್ನು ಸೂಸಲಿದೆ. ಮೃತ್ಯೋರ್ಮ ಅಮೃತಂಗಮಯ ಸಾವಿನಿಂದ ಜೀವದೆಡೆಗೆ ಎಂಬ ಸತ್ಯವನ್ನು ಸಾರಲಿದೆ. ಆತ್ಮೀಯರೇ, ಶುಭ ಶುಕ್ರವಾರ ಸಾರುವ ಪ್ರೀತಿಯ ಸಂದೇಶ, ತನ್ನ ದೇಹ ರಕ್ತವನ್ನೇ ಧಾರೆಯೆರೆದು ಶಿಲುಬೆಯ ಮೇಲೆ ಮರಣ ಹೊಂದಿದ ಪ್ರಭು ಯೇಸು ಕ್ರಿಸ್ತರು ಪ್ರೀತಿಯಿಂದ ಅಮೂಲ್ಯ ಸತ್ಯಗಳನ್ನು ನಿವೇದಿಸುತ್ತಿದ್ದಾರೆ.



ದೇವರು ನಮ್ಮನ್ನು ನಿರಂತರವಾಗಿ ಪ್ರೀತಿಸುತ್ತಾರೆ.
ದೇವರು ನಮ್ಮಲ್ಲಿ ನಿರಂತರವಾಗಿ ಜೀವಿಸುತ್ತಾರೆ.
ದೇವರು ನಮ್ಮನ್ನು ನಿರಂತರವಾಗಿ ಪೋಷಿಸುತ್ತಾರೆ.
ದೇವರು ನಮ್ಮನ್ನು ನಿರಂತರವಾಗಿ ಮುನ್ನಡೆಸುತ್ತಾರೆ.

ಪ್ರಭು ಕ್ರಿಸ್ತರ ಶಿಲುಬೆಯಿಂದ ಹರಿಯುವ ಈ ಸತ್ಯದ ಭರವಸೆಯ ಬೆಳಕು ನಮ್ಮಲ್ಲಿರುವ ಕಷ್ಟ-ನೋವುಗಳನ್ನು ನೀಗಿಸಿ, ಪ್ರಭು ಯೇಸು ಕ್ರಿಸ್ತರಂತೆ ದೇವರ ಚಿತ್ತಕ್ಕೆ ತಲೆಬಾಗಲು ಅನುವು ಮಾಡಿಕೊಡುತ್ತದೆ. ಪ್ರಭು ಯೇಸು ಕ್ರಿಸ್ತರು, ಶುಭ ಶುಕ್ರವಾರದಂದು ಕಷ್ಟ-ನೋವುಗಳಿಗೆ ಹೊಸ ಅರ್ಥವನ್ನು ಕಲ್ಪಿಸಿ, ಭರವಸೆಯ ಬದುಕಿಗೆ ಮುನ್ನುಡಿ ಬರೆಯುತ್ತಾರೆ. ತನ್ನ ಸ್ನೇಹಿತನಿಗಾಗಿ ಪ್ರಾಣ ಕೊಡುವ ಪ್ರೀತಿ ಇನ್ನೊಂದಿಲ್ಲ ಎಂದು ನುಡಿದ ಪ್ರಭು ಯೇಸು ಕ್ರಿಸ್ತರು ಪ್ರೀತಿಗೆ ಹೊಸ ಅರ್ಥವನ್ನೇ ಕಲ್ಪಿಸುತ್ತಾರೆ. ಪ್ರೀತಿ, ಸಾವು ನೋವಿಗೂ ಸಿದ್ಧ ಎಂಬುದಾಗಿ ಕಲಿಸಿಕೊಡುತ್ತಾರೆ.

ಶುಭ ಶುಕ್ರವಾರ ಅವರ ಜೊತೆಗಿದ್ದವರ ಬದುಕಿಗೆ ಬೇರೆ ಬೇರೆ ಅರ್ಥವನ್ನು ಕಲ್ಪಿಸಿದೆ. ಶಿಲುಬೆ ಒಂದೇ ಆದರೂ, ಶಿಲುಬೆಯಲ್ಲಿ ಮಡಿದ ವ್ಯಕ್ತಿ ಪ್ರಭುವಾದರೂ ಮನುಜರ ಬದುಕಿನಲ್ಲಿ ನಾನಾ ರೀತಿಯ ಕಂಪನಗಳನ್ನು ಮೂಡಿಸಿದೆ. ಯಹೂದ್ಯ ಮುಖಂಡರು ದೈವ ವಾಕ್ಯದ ಪುಸ್ತಕಗಳ ಸಂಪೂರ್ಣ ಅರಿವಿದ್ದರೂ ದೇವರ ವಾಕ್ಯವಾದ ಪ್ರಭು ಯೇಸುವನ್ನು ಅರಿತುಕೊಳ್ಳುವುದಿಲ್ಲ. ದೇವ ಕುವರ ಶಿಲುಬೆ ಮೇಲೆ ಕಷ್ಟ-ಸಂಕಷ್ಟಗಳನ್ನು ಅನುಭವಿಸುವಾಗ ಅವರ ಕಣ್ಣು ಕುರುಡಾಗುತ್ತವೆ. ಶಿಷ್ಯರ ಬಾಳಿನಲ್ಲಿ ಪ್ರಭು ಯೇಸು ಕ್ರಿಸ್ತರೆಂಬ ದೈವೀ ವಾಕ್ಯದ ಬೀಜ ಕಲ್ಲು ಮುಳ್ಳುಗಳಲ್ಲಿ ಬಿದ್ದ ಬೀಜದಂತಿದೆ. ಆ ಬೀಜ ಬೇಗನೆ ಮೊಳೆತು ಬಾಡಿದಂತಿದೆ. ಬೇರುಗಳು ಸತ್ವವನ್ನು ಕಳೆದುಕೊಂಡಿವೆ. ಆದರೆ ಪ್ರಭು ಯೇಸು ಕ್ರಿಸ್ತರ ಸ್ಪರ್ಶ ಮತ್ತೊಮ್ಮೆ ಅವನ್ನು ಚಿಗುರಿಸಲಿದೆ. ಮಾತೆ ಮರಿಯ ಶಿಲುಬೆಯ ಬುಡದಲ್ಲಿ ನಿಂತು ಎಲ್ಲವನ್ನೂ ಮೌನವಾಗಿ ಧ್ಯಾನಿಸುತ್ತಿದ್ದಾಳೆ. ದೇವರ ಚಿತ್ತಕ್ಕೆ ತಲೆಬಾಗಿದ್ದಾಳೆ. ಮಾತೆಯ ಹೃದಯ ಪುತ್ರನ ಮೇಲಿನ ಪ್ರೀತಿಯಿಂದ ಕಂಪಿಸುತ್ತಿದೆ. ಆಧ್ಯಾತ್ಮಿಕವಾಗಿ, ಆಕೆ ತನ್ನ ಮಗನ ಶಿಲುಬೆಯೊಂದಿಗೆ ಒಂದಾಗಿದ್ದಳು. ತನ್ನ ಮಗನ ದುಃಖ, ನೋವು, ವೇದನೆ ಮಾತೆ ಮರಿಯಳದ್ದಾಗಿತ್ತು. ಪ್ರಭು ಯೇಸು ತನ್ನ ದೇಹದಲ್ಲಿ ಅನುಭವಿಸಿದ್ದನ್ನು, ಮಾತೆ ಮರಿಯ ಹೃದಯದಲ್ಲಿ ಅನುಭವಿಸಿದಳು. ಶಿಲುಬೆಯಡಿಯಲ್ಲಿ ಮಾತೆ ಮರಿಯ ಸಮ ಚಿತ್ತದಿಂದ ಎಲ್ಲವನ್ನೂ ಸ್ವೀಕರಿಸಿದಳು, ಪ್ರಭುವಿನ ಯೋಗ್ಯ ಶಿಷ್ಯಳಾದಳು. ಅಕೆಯೊಂದಿಗೆ ನಮ್ಮ ಬಾಳು ಸಮಚಿತ್ತದ, ದೈವೀ ಚಿತ್ತಕ್ಕೆ ಅನುಗುಣದ ಪಾವನ ಬದುಕಾಗಬೇಕು.

ಶುಭ ಶುಕ್ರವಾರದ ಸುದಿನದಲ್ಲಿ ನಾವು, ಯೇಸುವಿನ ಶಿಲುಬೆಗೆ ಹತ್ತಿರವಾಗೋಣ. ಎರಡು ವಿಷಯಗಳು ವಿಭಿನ್ನವಾದರೂ ಬೇರ್ಪಡಿಸಲು ಅಸಾಧ್ಯವಾದುದು. ನಮ್ಮ ಕಷ್ಟ ಸಂಕಷ್ಟಗಳಲ್ಲಿ, ದುಃಖ ಮತ್ತು ಮೌನದಲ್ಲಿ ಶಿಲುಬೆಯ ಹತ್ತಿರ ಇರುವುದು ಒಳಿತು ಅದರೇ ನಮ್ಮ ಬದುಕು ಇಷ್ಟಕ್ಕೆ ಸೀಮಿತವಾಗಬಾರದು. ನಮ್ಮ ಬದುಕಿನ ಶಿಖರ ನಮ್ಮ ಶಿಲುಬೆಯಲ್ಲ, ಬದಲಾಗಿ ಪ್ರಭು ಕ್ರಿಸ್ತನ ಶಿಲುಬೆ. ನಮ್ಮ ಕಷ್ಟ ನೋವುಗಳೆಂಬ ಶಿಲುಬೆಯಲ್ಲಿ ಲೀನವಾಗುವುದಲ್ಲ, ಬದಲಾಗಿ ಪ್ರಭು ಕ್ರಿಸ್ತನ ಶಿಲುಬೆಯಲ್ಲಿ ವಿಶ್ವಾಸವಿರಿಸಿ, ತಲೆಬಾಗಿ ಕ್ರಿಸ್ತನ ನೋವನ್ನು ನಮ್ಮದಾಗಿಸಿಕೊಳ್ಳುವುದು. ಇದುವೇ ನೈಜ ಕ್ರಿಸ್ತೀಯ ಬದುಕು.

ಯೇಸು ಕ್ರಿಸ್ತರು ಶಿಲುಬೆಯ ಮೇಲೆ ಮರಣದ ಅಂಚಿನಲ್ಲಿದ್ದಾಗಲೂ ತಮಗೆ ಹಿಂಸೆ ನೀಡಿದವರನ್ನು ಉದ್ದೇಶಿಸಿ, 'ತಂದೆಯೇ ಇವರನ್ನು ಕ್ಷಮಿಸು' ಎಂದು ಪ್ರಾರ್ಥಿಸಿದರು. ಈ ಕ್ಷಮಾಗುಣವೇ ಇಂದಿನ ಜಗತ್ತಿಗೆ ಅತೀ ಅವಶ್ಯಕವಾಗಿದೆ. ವಿಶ್ವದಲ್ಲಿ ಶಾಂತಿ ಮತ್ತು ಸೌಹಾರ್ದತೆ ನೆಲೆಸಬೇಕಾದರೆ ನಾವು ದ್ವೇಷವನ್ನು ಬಿಟ್ಟು, ಒಬ್ಬರನ್ನೊಬ್ಬರು ಗೌರವಿಸುವ ಮತ್ತು ಕ್ಷಮಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು.

ಇಂದು ಜಗತ್ತು ಹಿಂದೆಂದೂ ಕಾಣದಂತಹ ಸಂಘರ್ಷದ ಸುಳಿಯಲ್ಲಿದೆ. ಉಕ್ರೇನ್ ಮತ್ತು ಗಾಜಾ ಮಾತ್ರವಲ್ಲದೆ, ಇರಾನ್ ಮತ್ತು ಅಮೆರಿಕಾ-ಇಸ್ರೇಲ್ ನಡುವಿನ ಯುದ್ಧವು ಇಡೀ ಪಶ್ಚಿಮ ಏಷ್ಯಾವನ್ನು ತಲ್ಲಣಗೊಳಿಸಿದೆ. ವೈಮಾನಿಕ ದಾಳಿಗಳು, ಅಮಾಯಕರ ಸಾವು-ನೋವುಗಳು ಮತ್ತು ಪರಮಾಣು ಭೀತಿಯ ನಡುವೆ ಮಾನವಕುಲವು ಶಾಂತಿಗಾಗಿ ತವಕಪಡುತ್ತಿದೆ. ಇಂತಹ ಭಯಾನಕ ಕತ್ತಲೆಯ ಕಾಲದಲ್ಲಿ, ಶುಭ ಶುಕ್ರವಾರ ನಮಗೆ ಭರವಸೆಯ ಕಿರಣವಾಗಿದೆ. ಶುಭ ಶುಕ್ರವಾರದ ಶಿಲುಬೆಯ ಅಡಿಯಲ್ಲಿ ದೋಷಾರೋಪಣೆಯಿಲ್ಲ. ನಿಂದನೆ ಇಲ್ಲ.

ಶಿಲುಬೆಯ ಅಡಿಯಲ್ಲಿರುವುದು ದೇವನ ಪ್ರೀತಿ. ಕ್ರಿಸ್ತನ ಮಮತೆ. ದೇವರ ಕ್ಷಮೆ. ಕ್ರಿಸ್ತನ ಕ್ಷಮೆ. ದೇವರ ಪ್ರೀತಿಗೆ ಕ್ರಿಸ್ತನ ಕ್ಷಮೆಗೆ ತಲೆಬಾಗೋಣ. ಮಾಡೋ ಎನ್ನ ಪ್ರಭುವೇ, ಶಾಂತಿಯ ಚಿಲುಮೆ, ನೀಡೋ ಎನ್ನ ಪ್ರಭುವೇ ಶಿಲುಬೆಯ ಸಹನೆ ಎಂಬ ಪ್ರಾರ್ಥನೆ ಇಂದು ನಮ್ಮದಾಗಲಿ. ಶಾಂತಿಯ ಸಾಧನಗಳು ನಾವಾಗೋಣ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಏ.4, ವಿಶೇಷ ಸ್ವಾತಿ ಪೂಜೆ



ಮೈಸೂರು, ಏ.2–ನಗರದ ಕಾಳಿದಾಸ ರಸ್ತೆಯಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಏ.4ರಂದು ಶನಿವಾರ ಸ್ವಾತಿ ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಿಗ್ಗೆ 8.30ಕ್ಕೆ ಸಂಕಲ್ಪ, 9.30ಕ್ಕೆ ಅಭಿಷೇಕ, 11ಕ್ಕೆ ಅಲಂಕಾರ, 12ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 1ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿದೆ. ಸಂಜೆ 8ಕ್ಕೆ ಪ್ರಾಕಾರೋತ್ಸವ ಆಯೋಜಿಸಲಾಗಿದೆ ಎಂದು ದೇವಸ್ಥಾನದ ಆಡಳಿತಾಧಿಕಾರಿ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ (ಮುರುಳಿ ಅಯ್ಯಂಗಾರ್) ತಿಳಿಸಿದ್ದಾರೆ. ಮಾಹಿತಿಗೆ ಮೊಬೈಲ್ 9342188323, 7598832271 ಸಂಪರ್ಕಿಸಬಹುದು.

ಕನಿಷ್ಠ 3 ವರ್ಷ ಶ್ರಮಪಟ್ಟರೆ 30 ವರ್ಷ ಸುಖವಾಗಿರಬಹುದು

ಪರೀಕ್ಷಾರ್ಥಿಗಳಿಗೆ ಮೈಸೂರು ಮಹಾನಗರಪಾಲಿಕೆ ಹೆಚ್ಚುವರಿ ಆಯುಕ್ತೆ ಬಿ.ಎಂ.ವೀಣಾ ಕಿವಿಮಾತು

ಮೈಸೂರು, ಏ.2(ಜಿಎ)–ಪರಿಶ್ರಮ ಇಲ್ಲದಿದ್ದರೆ ಯಾವ ಪರೀಕ್ಷೆಯನ್ನು ಗೆಲ್ಲಲು ಸಾಧ್ಯವಿಲ್ಲ ಎಂದು ಮೈಸೂರು ಮಹಾನಗರಪಾಲಿಕೆ ಹೆಚ್ಚುವರಿ ಆಯುಕ್ತರಾದ ಬಿ.ಎಂ.ವೀಣಾ ತಿಳಿಸಿದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ (ಕರಾಮುವಿ) ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕಾವೇರಿ ಸಭಾಂಗಣದಲ್ಲಿ ಐಎಎಸ್ ಮತ್ತು ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ನಡೆಸಿದ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಕ್ತಭಂಡಾರ ಅಧ್ಯಯನ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು.

ಓದುವಾಗ ಯಾವಾಗಲೂ ಒಬ್ಬ ವ್ಯಕ್ತಿಯನ್ನು ಮಾದರಿಯನ್ನಾಗಿ ಇಟ್ಟುಕೊಳ್ಳಬೇಕು. ಆಗ ನಿಮಗೆ ಓದಲು ಆಸಕ್ತಿ ಬರುತ್ತದೆ. ನಾವೆಲ್ಲಾ ಓದುವಾಗ ಐಪಿಎಸ್ ಅಧಿಕಾರಿ ಕಿರಣ್ ಬೇಡಿ ಅವರನ್ನು ಹೆಚ್ಚಾಗಿ ಅನುಸರಿಸುತ್ತಿದ್ದೆವು. ಇದೀಗ ಅವರಂತೆ ಸಾರ್ವಜನಿಕ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿದೆ. ಕರಾಮುವಿಯ ಈ ತರಬೇತಿ



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕಾವೇರಿ ಸಭಾಂಗಣದಲ್ಲಿ ಐಎಎಸ್ ಮತ್ತು ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಗುರುವಾರ ನಡೆಸಿದ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಕ್ತ ಭಂಡಾರ ಅಧ್ಯಯನ ಪುಸ್ತಕ ಬಿಡುಗಡೆಗೊಳಿಸಲಾಯಿತು.

ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಿ ನಿಮಗೂ ಸಾರ್ವಜನಿಕ ಸೇವೆ ಸಲ್ಲಿಸುವ ಅವಕಾಶ ಸಿಗಲಿದೆ ಎಂದರು.

ನಿರಂತರ ಪ್ರಯತ್ನಿಸಿ: ಕನಿಷ್ಠ ಮೂರು ವರ್ಷ ನೀವು ಕಷ್ಟಪಟ್ಟರೆ, ಮುಂದಿನ ಮೂವತ್ತು ವರ್ಷ ಸುಖವಾಗಿರಬಹುದು. ನಿಮಗೆಲ್ಲರಿಗೂ ಸಾರ್ವಜನಿಕ ಸೇವೆ ಸಲ್ಲಿಸಲು ಅವಕಾಶ ಸಿಗಲಿ. ಸೇವೆಗೆ ಆಯ್ಕೆಯಾದಾಗ ಜನಪರವಾಗಿ ಕಾರ್ಯನಿರ್ವಹಿಸಬೇಕು. ಹೀಗಾಗಿ ಮಾನವೀಯತೆಯನ್ನು ಈಗಿನಿಂದಲೇ ಅಳವಡಿಸಿಕೊಳ್ಳಿ. ವಿದ್ಯಾರ್ಥಿ ಜೀವನದಲ್ಲಿ ಕಷ್ಟಪಡಬೇಕು. ಗೆಲುವು ಸೋಲು ಎನ್ನುವುದು ಇಲ್ಲಿಲ್ಲ. ಸೋತರೆ ತಲೆಕೆಡಿಸಿಕೊಳ್ಳಬಾರದು. ನಿರಂತರ ಪ್ರಯತ್ನ ಪಡಬೇಕು. ಆವಾಗ ಗೆಲುವು ನಿಶ್ಚಿತ ಎಂದು ಕಿವಿಮಾತು ಹೇಳಿದರು.

ವಾಣಿಜ್ಯ ತೆರಿಗೆ ಇಲಾಖೆ ಮೈಸೂರು ವಿಭಾಗದ ಜಂಟಿ ಆಯುಕ್ತ ಎಂ.ಬಾಲಸುಬ್ರಹ್ಮಣ್ಯ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆ ಎನ್ನುವುದು ದೂರದ ಪಯಣ ಇದ್ದಂತೆ. ಇಲ್ಲಿ ಪರಿಶ್ರಮ ಮುಖ್ಯ.

> ಸ್ಪರ್ಧಾತ್ಮಕ ಜಗತ್ತು ಸಾಗರದಂತೆ. ಇವತ್ತಿನ ಸ್ಪರ್ಧಾತ್ಮಕ ಪರೀಕ್ಷೆ ಮೊದಲಿನಂತಿಲ್ಲ. ಪ್ರಶ್ನೆ ಪತ್ರಿಕೆ ಮಾದರಿ ಬದಲಾಗಿದೆ. ಇದೆಲ್ಲದಕ್ಕೂ ನೀವು ಸಿದ್ಧರಾಗಿರಬೇಕು. ನಿರಂತರ ಅಭ್ಯಾಸ ಇಟ್ಟುಕೊಂಡು, ಸತತವಾಗಿ ಕಠಿಣ ಪರಿಶ್ರಮ ಹಾಕಿ. ಓದುವಾಗ ಯಾವುದನ್ನೂ ಓದಬೇಕು, ಯಾವುದನ್ನು ಓದಬಾರದು ಎನ್ನುವುದನ್ನು ತಿಳಿದು ಕೊಂಡರೆ ಉತ್ತಮ. ನಿತ್ಯ ದಿನಪತ್ರಿಕೆ ಓದಿ. ನಾಲ್ಕೈದು ವರ್ಷಗಳ ಸಾಮಾನ್ಯ ಜ್ಞಾನ ನಿಮಗೆ ತಿಳಿದಿರಲಿ. –ಬಿ.ಎಂ.ವೀಣಾ

ಪರೀಕ್ಷೆಗೆ ತಯಾರಿ ನಡೆಸುವಾಗ ಓದುವುದರ ಜತೆಗೆ ನೋಟ್ಸ್ ಮಾಡಿಟ್ಟುಕೊಳ್ಳಿ. ಹಳೆಯ ಪ್ರಶ್ನೆ ಪತ್ರಿಕೆಗಳನ್ನು ಓದಿ, ವಿಶ್ಲೇಷಿಸಿ. ನಿಮಗೆ ಹೇಗೆ ಅನುಕೂಲವಾಗುತ್ತದೆಯೋ ಹಾಗೆಯೇ ಅಭ್ಯಾಸ ಮಾಡಿ ಜತೆಗೆ ಸಂವಹನ ಕೌಶಲ್ಯ ಅಳವಡಿಸಿಕೊಳ್ಳಿ. ಇಲ್ಲಿನ ತರಬೇತಿಯು ನಿಮಗೆ ಸಾಕಷ್ಟು ಕಲಿಸಿದೆ, ಅದನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಿ ಎಂದು ಅಭ್ಯರ್ಥಿಗಳಿಗೆ ಶುಭಾಶಯ ಕೋರಿದರು. ಎಷ್ಟು ಗಂಟೆಗಳ ಕಾಲ ಓದುತ್ತೀರ, ಹೇಗೆ ಓದುತ್ತೀರ ಎನ್ನುವುದು ಮುಖ್ಯ ಎಂದ ಅವರು ಅಭ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ತಯಾರಿ ಬಗ್ಗೆ ತಿಳಿಸಿಕೊಟ್ಟು ಶುಭಕೋರಿದರು.

ಕುಲಪತಿ ಪ್ರೊ.ಶರಣಪ್ಪ ಹಲಸೆ ಮಾತನಾಡಿ, ಈಗಾಗಲೆ ತಮಗೆಲ್ಲಾ ಓದುವ ತಯಾರಿ ಗೊತ್ತಾಗಿದೆ. ಧೈರ್ಯ ಇಟ್ಟುಕೊಳ್ಳಿ. ಧೈರ್ಯ ಇದ್ದರೆ ಏನನ್ನಾದರೂ ಸಾಧಿಸಬಹುದು. ಸಮಾಜದಲ್ಲಿ ನ್ಯಾಯಯುತ ಬದುಕು ಕಟ್ಟಿಕೊಳ್ಳಬೇಕು. ಇದಕ್ಕೆ ಗುರಿ ಇಟ್ಟುಕೊಳ್ಳಿ, ನಂತರ ತಯಾರಿ ನಡೆಸಿ. ಏನನ್ನಾದರೂ ಸಾಧಿಸಲು ಸತತ ಪ್ರಯತ್ನ ಮಾಡಬೇಕು ಎಂದರು. ಈ ವೇಳೆ ಕಾರ್ಯಕ್ರಮದಲ್ಲಿ ವಿವಿ ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್, ಶೈಕ್ಷಣಿಕ ಡೀನ್ ರಾಮನಾಥಂನಾಯ್ಡು, ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ, ಸಿದ್ದೇಶ್ ಹೊನ್ನೂರು, ಗಣೇಶ್ ಕೆ.ಜಿ. ಕೊಪ್ಪಲ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಈ ಸಲದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಅಂತ್ಯ

ಎಲ್ಲಿಯೂ ಅಕ್ರಮಕ್ಕೆ ಆಸ್ಪದವಿಲ್ಲ

ಮೈಸೂರು, ಏ.2(ಎಂಟಿವೈ)– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮೈಸೂರು ಜಿಲ್ಲೆಯ 136 ಕೇಂದ್ರಗಳಲ್ಲಿ ಸುಸೂತ್ರವಾಗಿ ನೆರವೇರಿದ್ದು, ಪರೀಕ್ಷೆ ನೋಂದಾಯಿಸಿದ್ದ ವಿದ್ಯಾರ್ಥಿಗಳಲ್ಲಿ ಶೇ.99ರಷ್ಟು ಹಾಜರಾದರೆ, ಶೇ.1ರಷ್ಟು ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ 277 ಸರ್ಕಾರಿ ಶಾಲೆ, 122 ಅನುದಾನಿತ ಶಾಲೆ, 304 ಖಾಸಗಿ ಶಾಲೆ ಸೇರಿದಂತೆ ಒಟ್ಟು 703 ಶಾಲೆಗಳ 36,179 ವಿದ್ಯಾರ್ಥಿಗಳು ಈ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ನೊಂದಾಯಿಸಿಕೊಂಡಿದ್ದರು. ಅಲ್ಲದೆ, ಶಾಲಾ ರೆಗ್ಯುಲರ್ ಪುನರಾವರ್ತಿತ 2,458 ವಿದ್ಯಾರ್ಥಿಗಳು, 728 ಖಾಸಗಿ ವಿದ್ಯಾರ್ಥಿಗಳು, 133 ಖಾಸಗಿ ಪುನರಾವರ್ತಿತ ವಿದ್ಯಾರ್ಥಿಗಳು ಸೇರಿದಂತೆ ಈ ಬಾರಿ 39,498 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಲು ಸಜ್ಜಾಗಿದ್ದರು. ಎಲ್‌ಎಸ್‌ಎಲ್‌ಸಿ ಪರೀಕ್ಷೆಗಾಗಿ ಜಿಲ್ಲೆಯಲ್ಲಿ 76 ಸರ್ಕಾರಿ ಶಾಲೆ, 25 ಅನುದಾನಿತ ಶಾಲೆ, 35 ಖಾಸಗಿ ಶಾಲೆ ಸೇರಿದಂತೆ 136 ಪರೀಕ್ಷಾ ಕೇಂದ್ರ ವ್ಯವಸ್ಥೆ ಮಾಡಲಾಗಿತ್ತು. ಅದರಲ್ಲಿ ಮೈಸೂರು ನಗರದಲ್ಲಿ 43 ಹಾಗೂ ಗ್ರಾಮಾಂತರ ಪ್ರದೇಶದಲ್ಲಿ 93 ಪರೀಕ್ಷಾ ಕೇಂದ್ರ ತೆರೆಯಲಾಗಿತ್ತು. ಒಟ್ಟು 2080 ಪರೀಕ್ಷಾ ಕೊಠಡಿಯಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಜಿಲ್ಲೆಯ 7 ತಾಲೂಕು ಹಾಗೂ ನಗರವನ್ನು ಒಟ್ಟು 9 ಬ್ಲಾಕ್‌ಗಳಾಗಿ ವಿಂಗಡಿಸಿ ಸುಸೂತ್ರ ಪರೀಕ್ಷೆ ವ್ಯವಸ್ಥೆ ಮಾಡಲಾಗಿತ್ತು.

ಮಾ.18ರಿಂದ ಏ.2ರವರೆಗೆ ನಡೆದ ಆರು ಪತ್ರಿಕೆಗಳ ಪರೀಕ್ಷೆಯಲ್ಲಿ ಶೇ.99ರಷ್ಟು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರೆ, ಶೇ.1ರಷ್ಟು ವಿದ್ಯಾರ್ಥಿಗಳು ಮಾತ್ರ ಗೈರಾಗಿದ್ದಾರೆ.

ಹಾಜರಿ, ಗೈರು ಹಾಜರಿ: ಮಾ.18ರಂದು ನಡೆದ ಪ್ರಥಮ ಭಾಷೆ ಪರೀಕ್ಷೆಯಲ್ಲಿ 35,994 ವಿದ್ಯಾರ್ಥಿಗಳಲ್ಲಿ 35,596 ವಿದ್ಯಾರ್ಥಿಗಳು ಹಾಜರಾಗಿ 398 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು. ಮಾ.23ರಂದು ನಡೆದ ವಿಜ್ಞಾನ ಪರೀಕ್ಷೆಯಲ್ಲಿ 450 ಮಂದಿ ಗೈರು, ಮಾ.25ರಂದು ನಡೆದ ದ್ವಿತೀಯ ಭಾಷೆಯಲ್ಲಿ 422 ಮಂದಿ ಗೈರಾಗಿದ್ದಾರೆ. ಮಾ.28ರಂದು ನಡೆದ ಗಣಿತ ಪರೀಕ್ಷೆಯಲ್ಲಿ 36,188 ವಿದ್ಯಾರ್ಥಿಗಳು ಪರೀಕ್ಷೆ ಬರೆದರೆ, 469 ವಿದ್ಯಾರ್ಥಿಗಳು ಗೈರಾಗಿದ್ದರು. ಮಾ.31ರಂದು ನಡೆದ ತೃತೀಯ ಭಾಷೆ ಪರೀಕ್ಷೆಯಲ್ಲಿ 35,430 ವಿದ್ಯಾರ್ಥಿಗಳು ಹಾಜರಾಗಿದ್ದರೆ, 445 ವಿದ್ಯಾರ್ಥಿಗಳು ಗೈರಾಗಿದ್ದರು.

ಏ.2ರಂದು ನಡೆದ ಕೊನೆಯ ಸಮಾಜ ವಿಜ್ಞಾನ ಪರೀಕ್ಷೆಯಲ್ಲಿ 35,600 ವಿದ್ಯಾರ್ಥಿಗಳು ಪರೀಕ್ಷೆ ಬರೆದರೆ 439 ವಿದ್ಯಾರ್ಥಿಗಳು ಗೈರಾದರು.

ಏ.8ರಿಂದ 12ರವರೆಗೆ ಮೌಲ್ಯಮಾಪನ

ಅಕ್ರಮಕ್ಕೆ ಅವಕಾಶವಾಗದಂತೆ ಪ್ರತ್ಯೇಕ ಜಿಲ್ಲೆಗಳಲ್ಲಿ ಉತ್ತರಪತ್ರಿಕೆ ಹಂಚಿಕೆ

ಮೈಸೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಗಿದಿದ್ದು, ಇದೇ ಮೊದಲ ಬಾರಿಗೆ ಡಿಕೋಡಿಂಗ್ ಪದ್ಧತಿಯಂತೆ ರಾಜ್ಯದಾದ್ಯಂತ ಏ.8ರಿಂದ 12ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಉತ್ತರ ಪತ್ರಿಕೆಗಳ ಮೌಲ್ಯಮಾಪನ ನಡೆಯಲಿದೆ ಎಂದು ಡಿಡಿಪಿಐ ಡಿ.ಉದಯ್‌ಕುಮಾರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಯಾವುದೇ ಅಕ್ರಮ ನಡೆಯದಂತೆ ಕಟ್ಟುನಿಟ್ಟಿನ ಕ್ರಮದಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಯಶಸ್ವಿಯಾಗಿ ಮುಗಿದಿದೆ. ಪರೀಕ್ಷಾ ಉತ್ತರ ಪತ್ರಿಕೆಗಳನ್ನು ಬಿಗಿ ಬಂದೋಬಸ್ತ್‌ನಿಂದ ಸರ್ಕಾರ ನೀಡಿದ ಡಿಕೋಡಿಂಗ್ ವ್ಯವಸ್ಥೆ ಮೂಲಕ ಮೌಲ್ಯಮಾಪನಕ್ಕೆ ರವಾನಿಸಲಾಗಿದೆ. ಇದೇ ಮೊದಲ ಬಾರಿಗೆ ಜಿಲ್ಲೆಯ ಉತ್ತರ ಪತ್ರಿಕೆಗಳು ಅನ್ಯ ಜಿಲ್ಲೆಗಳಲ್ಲಿ ಮೌಲ್ಯಮಾಪನಗೊಳ್ಳಲಿವೆ.

ಜಿಪಿಎಸ್‌ವುಳ್ಳ ವಾಹನಗಳಲ್ಲಿ ಉತ್ತರ ಪತ್ರಿಕೆಗಳನ್ನು ಬಿಗಿ ಭದ್ರತೆಯಲ್ಲಿ ಸಾಗಿಸಲಾಗುತ್ತಿದೆ. ಯಾವ ಜಿಲ್ಲೆಗೆ ಯಾವ ಉತ್ತರ ಪತ್ರಿಕೆ ಹೋಗುತ್ತದೆ ಎಂಬ ಮಾಹಿತಿ ಯಾರಿಗೂ ತಿಳಿದಿರುವುದಿಲ್ಲ. ನಿಗದಿತ ಜಿಲ್ಲೆಗೆ ಗೌಪ್ಯವಾಗಿ ಉತ್ತರ ಪತ್ರಿಕೆ ಕೊಂಡೊಯ್ಯುವ ಜಿಪಿಎಸ್‌ವುಳ್ಳ ವಾಹನದ ಚಾಲಕರೊಂದಿಗೆ ಇರುವ ರೂಟ್ ಆಫೀಸರ್(ಅಧಿಕಾರಿ)ಗೆ ಓಟಿಪಿ ಬರುತ್ತದೆ. ಅದನ್ನು ತೆರೆದು ನೋಡಿದಾಗ ಮಾತ್ರ ಯಾವ ಕೇಂದ್ರಕ್ಕೆ ಉತ್ತರ ಪತ್ರಿಕೆ ಕೊಂಡೊಯ್ಯಬೇಕು ಎಂದು ಆಯಾ ಜಿಲ್ಲೆಗೆ ಹೋದಾಗ ಮಾತ್ರ ಗೊತ್ತಾಗುತ್ತದೆ ಎಂದು ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ 7 ಕೇಂದ್ರಗಳಲ್ಲಿ ಏ.8ರಿಂದ 12ರವರೆಗೆ ಮೌಲ್ಯಮಾಪನ ನಡೆಯುತ್ತದೆ. ಒಂದೊಂದು ವಿಷಯ ಪತ್ರಿಕೆಯ ಮೌಲ್ಯಮಾಪನಕ್ಕೆ ಅಂದಾಜು 400 ಶಿಕ್ಷಕರನ್ನು ನಿಯೋಜಿಸಲಾಗಿದೆ. ಮೌಲ್ಯ ಮಾಪಕರೊಬ್ಬರಿಗೆ ಬೆಳಗ್ಗೆ 10, ಮಧ್ಯಾಹ್ನ 10ರಂತೆ ದಿನವೊಂದಕ್ಕೆ 20 ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನಕ್ಕೆ ನೀಡಲಾಗುತ್ತದೆ. ಒಟ್ಟಾರೆ ಓರ್ವ ಮೌಲ್ಯಮಾಪಕರು 100ರಿಂದ 120 ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಬಹುದಾಗಿದೆ. ಮೌಲ್ಯಮಾಪಕರಿಗೆ ಟಿಎ, ಡಿಎ ನೀಡಲಾಗುತ್ತದೆ ಎಂದರು.

ಸಮೀಕ್ಷೆಯಲ್ಲಿ ಬಲಗೈ ಸಮುದಾಯದವರು ಒಂದೇ ಜಾತಿ ಹೆಸರು ಬರೆಸಿ

ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಮನವಿ



ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಅಧ್ಯಕ್ಷತೆಯಲ್ಲಿ ಸಮಿತಿಯ ಕಾರವಾರ ಜಿಲ್ಲಾ ಘಟಕದ ಸಭೆ ನಡೆಯಿತು.

ಮೈಸೂರು, ಏ.2– ಕೇಂದ್ರ ಸರ್ಕಾರ ನಡೆಸುತ್ತಿರುವ ಜನಗಣತಿ ಮತ್ತು ಜಾತಿ ಗಣತಿಯಲ್ಲಿ ಬಲಗೈ ಸಮುದಾಯದವರು ಜಾತಿ ಕಾಲಂನಲ್ಲಿ ಹೊಲಯ ಎಂದು ಬರೆಸುವಂತೆ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಮನವಿ ಮಾಡಿದ್ದಾರೆ.

ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಕಾರವಾರ ಜಿಲ್ಲಾ ಘಟಕವು ಜಿಲ್ಲೆಯ ಹಳಿಯಾಳ ಗ್ರಾಮದ ಅಂಬೇಡ್ಕರ್ ಸಮುದಾಯ ಭವನದಲ್ಲಿ ಗುರುವಾರ ಏರ್ಪಡಿಸಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಜಾತಿ ಸಮೀಕ್ಷೆ ವೇಳೆ ಯಾವುದೇ ಗೊಂದಲಕ್ಕೀಡಾಗದೆ ಬಲಗೈ ಸಮುದಾಯದವರು ಜಾತಿ ಕಾಲಂನಲ್ಲಿ ಹೊಲಯ ಎಂದು ಬರೆಸಬೇಕು ಎಂದು ತಿಳಿಸಿದರು.

ಒಳಮೀಸಲಾತಿ ಹಿನ್ನೆಲೆಯಲ್ಲಿ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರ ನೇತೃತ್ವದಲ್ಲಿ ನಡೆದ ಸಮೀಕ್ಷೆಯಲ್ಲಿ ಬಲಗೈ ಸಮುದಾಯದವರು ಪೂರ್ಣ ಪ್ರಮಾಣದಲ್ಲಿ ಪಾಲ್ಗೊಳ್ಳಲಿಲ್ಲ. ಅಲ್ಲದೆ ವಿವಿಧೆಡೆ ಬೇರೆ ಬೇರೆ ಹೆಸರಿನಲ್ಲಿ ಜಾತಿ ನಮೂದಿಸಿದ್ದರಿಂದ ಹಲವು ಸಮಸ್ಯೆಗಳನ್ನು ಎದುರಿಸುವಂತಾಯಿತು. ಈ ಸಮೀಕ್ಷೆಯಲ್ಲಿ ಯಾವುದೇ ಗೊಂದಲ ಇಲ್ಲದೇ ಹೊಲಯ ಎಂದೇ ಬರೆಸಬೇಕು ಎಂದು ಕೋರಿದರು.

ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಭೇಟಿಯಾಗಿ ಅಂಬೇಡ್ಕರ್ ಸಮುದಾಯ ಭವನದ ಅಭಿವೃದ್ಧಿಗೆ ಅನುದಾನ ಬಿಡುಗಡೆಗೆ ಮನವಿ ಮಾಡುವುದಾಗಿ ಎನ್.ಭಾಸ್ಕರ್ ಇದೇ ವೇಳೆ ಭರವಸೆ ನೀಡಿದರು. ಏ.14ರಂದು ಡಾ.ಬಿ.ಆರ್.ಅಂಬೇಡ್ಕರ್ ಅವರ ಕಂಚಿನ ಪ್ರತಿಮೆ ಲೋಕಾರ್ಪಣೆ ಮಾಡುತ್ತಿರುವ ಹಿನ್ನೆಲೆಯಲ್ಲಿ ಸ್ಥಳೀಯ ಮುಖಂಡರನ್ನು ಅಭಿನಂದಿಸಲಾಯಿತು.

ಸಭೆಯಲ್ಲಿ ಸಮಿತಿಯ ರಾಜ್ಯ ಉಪಾಧ್ಯಕ್ಷ ಮಲ್ಲೇಶ ಬೆಳವಾಡಿ, ಪ್ರಧಾನ ಕಾರ್ಯದರ್ಶಿ ಎ.ಆರ್.ಕಾಂತರಾಜ್, ವಕೀಲರಾದ ತಿಮ್ಮಯ್ಯ, ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ವಿ.ಆರ್.ವಿಜಯಕುಮಾರ್, ಗ್ರಾಮದ ಮುಖಂಡರಾದ ಮಾರುತಿ ಕಲ್ಬಾವಿ, ಮಂಜುನಾಥ್ ಹೊನ್ನು, ಯಲ್ಲಪ್ಪ ಕಲ್ಬಾವಿ, ಮಹದೇವಪ್ಪ ಮಾದರ್, ಹನುಮಂತಪ್ಪ ಛಲವಾದಿ, ಮಾರುತಿ ಛಲವಾದಿ ಮತ್ತಿತರರು ಪಾಲ್ಗೊಂಡಿದ್ದರು.

ಶ್ರೀ ಶಿವಕುಮಾರ ಸ್ವಾಮೀಜಿ ಜನ್ಮ ದಿನಾಚರಣೆ...



ಮೈಸೂರಿನ ರಾಮಕೃಷ್ಣನಗರದ ಮಾಧವ ಪಾರ್ಕ್‌ನಲ್ಲಿ ಶ್ರೀ ಬಸವೇಶ್ವರ ಸೇವಾ ಸಮಿತಿ ವತಿಯಿಂದ ತ್ರಿವಿಧ ದಾಸೋಹಿ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಗಳ ಜನ್ಮ ದಿನೋತ್ಸವ ಆಚರಿಸಲಾಯಿತು. ಈ ವೇಳೆ ಸಮಿತಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಭಿನಂದನೆ...



ವಯೋ ನಿವೃತ್ತಿ ಹೊಂದಿದ ಮೈಸೂರು ಕೆ.ಆರ್.ಎಸ್ ರಸ್ತೆಯ ಭಾರತೀಯ ಜೀವ ವಿಮಾ ನಿಗಮ ಶಾಖೆ–1ರ ಉದ್ಯೋಗಿ ಸರಸ್ವತಿ ಅವರನ್ನು ಶಾಖಾಧಿಕಾರಿ ಶ್ರೀನಿವಾಸ್, ಅಖಿಲ ಭಾರತ ಜೀವ ವಿಮಾ ಪಿಂಚಣಿದಾರರ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ಸೀತಾರಾಮ್‌ಭಟ್, ವಿಭಾಗದ ಅಧ್ಯಕ್ಷ ಪಾರ್ಥಸಾರಥಿ, ಪ್ರಧಾನ ಕಾರ್ಯದರ್ಶಿ ಬಿ.ಪುಟ್ಟಸ್ವಾಮಿ, ಸಹ ಕಾರ್ಯದರ್ಶಿ ಬೂಕನಕೆರೆ ವಿಜೇಂದ್ರ ಅಭಿನಂದಿಸಿದರು.

ಡಯಾಲಿಸಿಸ್ ಚಿಕಿತ್ಸೆಗೆ ವಾಕ್‌ಮೇಟ್ 10 ಲಕ್ಷ ದೇಣಿಗೆ



ಲೂನಾರ್ಸ್ ಎಕ್ಸ್‌ಪೋರ್ಟ್ಸ್ ಪ್ರೈ ಲಿ.ನಿಂದ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಚಿಕಿತ್ಸೆಗೆ ಬರುವ ಬಡರೋಗಿಗಳಿಗೆ ನೆರವಾಗಲು 10 ಲಕ್ಷ ದೇಣಿಗೆ ನೀಡಲಾಯಿತು.

ಮೈಸೂರು: ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಸುತ್ತೂರು ಶ್ರೀಗಳ ಸಾನ್ನಿಧ್ಯದಲ್ಲಿ ನಡೆದ ಕ್ಯಾತ್‌ಲ್ಯಾಬ್, ಅತ್ಯಾಧುನಿಕ ಎಐ ಆಧಾರಿತ ಸಿಟಿ ಸ್ಕ್ಯಾನರ್, ಉನ್ನತೀಕರಿಸಿದ ಎಂಆರ್‌ಐ, ನರ ಶಸ್ತ್ರಚಿಕಿತ್ಸಾ ಸೂಕ್ಷ್ಮದರ್ಶಕಯಂತ್ರ ಹಾಗೂ ತಾಯಿ ಎದೆಹಾಲಿನ ಬ್ಯಾಂಕ್‌ಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಲೂನಾರ್ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಬಾಸ್ಟಿಯನ್ ಜೋಸೆಫ್ ಸಂಸ್ಥೆಯ ಸಿಎಸ್‌ಆರ್ ನಿಧಿಯಿಂದ ಜೆಎಸ್‌ಎಸ್ ಆಸ್ಪತ್ರೆಗೆ ಡಯಾಲಿಸಿಸ್ ಚಿಕಿತ್ಸೆಗೆ ಬರುವ ಬಡ ರೋಗಿಗಳಿಗೆ ಆರ್ಥಿಕವಾಗಿ ಸಹಾಯವಾಗಲು 10 ಲಕ್ಷ ರೂ.ಗಳ ದೇಣಿಗೆಯನ್ನು ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಸುತ್ತೂರು ಶ್ರೀಗಳು ರೋಗಿಗಳ ಅನುಕೂಲಕ್ಕಾಗಿ ಅನೇಕ ಸಂಘ ಸಂಸ್ಥೆಗಳು ಮತ್ತು ದಾನಿಗಳು ಆಸ್ಪತ್ರೆಗೆ ದೇಣಿಗೆಯನ್ನು ನೀಡುತ್ತಿದ್ದಾರೆ. ಇವರ ಸಮಾಜಮುಖಿ ಕಾರ್ಯ ಹೀಗೆಯೇ ಮುಂದುವರೆಯಲಿ ಎಂದು ಆಶಿಸಿದರು.

ಈ ಯೋಜನೆಯಡಿಯಲ್ಲಿ ಬಿಪಿಎಲ್ ಕಾರ್ಡ್ ಹೊಂದಿರುವ ಡಯಾಲಿಸಿಸ್ ಚಿಕಿತ್ಸೆಗಾಗಿ ಬರುವ ರೋಗಿಗಳನ್ನು ಫಲಾನುಭವಿಗಳಾಗಿ ಗುರುತಿಸಿ, ಅವರ ಡಯಾಲಿಸಿಸ್ ಚಿಕಿತ್ಸಾ ವೆಚ್ಚದಲ್ಲಿ ರಿಯಾಯಿತಿಯನ್ನು ನೀಡಲಾಗುವುದು. ಜೆಎಸ್‌ಎಸ್ ಆಸ್ಪತ್ರೆಯು ಡಯಾಲಿಸಿಸ್ ರೋಗಿಗಳಿಗೆ ಅತ್ಯಂತ ಕಡಿಮೆ ದರದಲ್ಲಿ ಚಿಕಿತ್ಸೆ ನೀಡುತ್ತಿದ್ದು ಸಾವಿರಾರು ರೋಗಿಗಳು ಈ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ.

ಈ ಸಂದರ್ಭದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಆರ್. ಪಾಟೀಲ, ಮಳವಳ್ಳಿ ಕ್ಷೇತ್ರದ ಶಾಸಕರೂ ಆದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ, ಶಾಸಕ ಟಿ.ಎಸ್.ಶ್ರೀವತ್ಸ, ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿ ಸಮಕುಲಾಧಿಪತಿ ಡಾ.ಬಿ.ಸುರೇಶ್, ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಪಿ.ಮಧು, ಕೆ.ಎಂ. ಭಗವಾನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಶಿಷ್ಯ ವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ಏ.2–ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ವತಿಯಿಂದ ಯುಜಿಸಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ ನಿಯಮಾವಳಿಗಳ ಪ್ರಕಾರ ಸಂಶೋಧನಾ ಕಾರ್ಯವನ್ನು ನಿರ್ವಹಿಸುವ ಸಂಶೋಧಕರಿಗೆ ಶಿಷ್ಯ ವೇತನ ನೀಡುವ ಸಲುವಾಗಿ ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳನ್ನು ಹೊರತುಪಡಿಸಿ ಸ್ನಾತಕೋತ್ತರ ಪದವಿಯಲ್ಲಿ ಶೇ.50ಕ್ಕಿಂತ ಹೆಚ್ಚು ಅಂಕ ಪಡೆದಿರುವ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿಗಳಿಂದ 2026–27ನೇ ಸಾಲಿಗೆ 20 (ಇಪ್ಪತ್ತು) ಸಂಶೋಧನಾ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಶುಲ್ಕ ರೂ.100ಗಳನ್ನು ಮೈಸೂರು ವಿವಿ ಖಾತೆಗೆ ಕ್ರಾಫರ್ಡ್ ಭವನ ಆವರಣದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿ ಜಮಾ ಮಾಡಿ ಮೂಲ ಚಲನ್ ಅನ್ನು ಉಪಕುಲಸಚಿವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವಿಶೇಷ ಘಟಕ, ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮೈಸೂರು ವಿವಿ ಇವರಿಗೆ ಸಲ್ಲಿಸಿ ಅರ್ಜಿಯನ್ನು ಬೆಳಿಗ್ಗೆ 10ರಿಂದ ಸಂಜೆ 5.30 ರೊಳಗೆ ಪಡೆದು ಏ.18ರ ಸಂಜೆ 5.30ರೊಳಗೆ ಕಚೇರಿಗೆ ಸಲ್ಲಿಸುವುದು. ಅರ್ಜಿ ಜೊತೆ ಶುಲ್ಕ ಪಾವತಿಸಿದ ಮೂಲ ಚಲನ್, ಮಾರ್ಗದರ್ಶಕರ ಒಪ್ಪಿಗೆ ಪತ್ರ, ಪಿಹೆಚ್.ಡಿ ತಾತ್ಕಾಲಿಕ, ಖಾಯಂ ನೋಂದಣಿ ಪತ್ರ ಎಸ್‌ಎಸ್‌ಎಲ್‌ಸಿಯಿಂದ ಸ್ನಾತಕೋತ್ತರ ಪದವಿವರೆಗಿನ ಎಲ್ಲಾ ಅಂಕಪಟ್ಟಿಯ ಪ್ರತಿಗಳು ದೃಢೀಕೃತವಾಗಿರಬೇಕು. ಜಾತಿ, ಆದಾಯ ಪ್ರಮಾಣ ಪತ್ರ (ರೂ.2.5 ಲಕ್ಷ ಒಳಗಿರಬೇಕು), ಆಧಾರ್ ಪ್ರತಿ ಮತ್ತು ಪಡಿತರ ಚೀಟಿ ಪ್ರತಿ, ಹೈದರಾಬಾದ್ ಕರ್ನಾಟಕ, ವಿಶೇಷ ಚೇತನರು, ತೃತೀಯ ಲಿಂಗಗಳ ಅಡಿಯಲ್ಲಿ ಮೀಸಲಾತಿ ಕೋರಿದಲ್ಲಿ ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ದಾಖಲೆಗಳನ್ನು ಲಗತ್ತಿಸಿ ಮಾರ್ಗದರ್ಶಕರು, ವಿಭಾಗದ ಅಧ್ಯಕ್ಷರು, ನಿರ್ದೇಶಕರು, ಪ್ರಾಂಶುಪಾಲರ ಮೂಲಕ ವಿಶೇಷ ಘಟಕಕ್ಕೆ ಸಲ್ಲಿಸುವುದು ಎಂದು ಪ್ರಕಟಣೆ ತಿಳಿಸಿದೆ.

ಮಂತ್ರಾಲಯ ಶ್ರೀಗಳ 55ನೇ ವರ್ಧಂತ್ಯುತ್ಸವ ಆಚರಣೆ



ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥರ 55ನೇ ವರ್ಧಂತ್ಯುತ್ಸವ ಮಹೋತ್ಸವ ಅಂಗವಾಗಿ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಸುಬ್ಬರಾಯನ ಕೆರೆಯ ರಾಘವೇಂದ್ರಸ್ವಾಮಿ ಮಠದಲ್ಲಿ ಭಕ್ತಾದಿಗಳಿಗೆ ಸಿಹಿ ವಿತರಿಸಲಾಯಿತು. ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ರಾಮಚಂದ್ರ, ಶ್ರೀ ಕನಕ ಪತ್ತಿನ ಸಹಕಾರಿ ಸಂಘದ ನಿರ್ದೇಶಕ ರವಿಚಂದ್ರ, ಎಸ್.ಎನ್.ರಾಜೇಶ್, ರಾಕೇಶ್, ಹರೀಶ್ ನಾಯ್ಡು, ದುರ್ಗಾ ಪ್ರಸಾದ್, ಲೋಕೇಶ್ ಇನ್ನಿತರರು ಹಾಜರಿದ್ದರು.

ನಿಧನ

ಜಿ.ಮಾರಳ್ಳಿ ಗುರುಸ್ವಾಮಿ



ಸುತ್ತೂರು: ನಂಜನಗೂಡು ತಾಲೂಕಿನ ಜಿ.ಮಾರಳ್ಳಿ ಗ್ರಾಮದ ಗುರುಸ್ವಾಮಿ ನಿಧನರಾದರು. ಮೃತರಿಗೆ 74 ವರ್ಷ ವಯಸ್ಸಾಗಿತ್ತು. ಇವರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ನಂಜನಗೂಡು ತಾಲೂಕಿನ ಅರ್ಚಕರ ಸಂಘದ ಅಧ್ಯಕ್ಷರಾಗಿ, ಬಿಳುಗಲಿ ಸಹಕಾರ ಸಂಘದ ನಿರ್ದೇಶಕರಾಗಿ ಇವರು ಸೇವೆ ಸಲ್ಲಿಸಿದ್ದರು. ಇವರ ಅಂತ್ಯಕ್ರಿಯೆ ನಾಳೆ(ಶುಕ್ರವಾರ) ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬವರ್ಗ ತಿಳಿಸಿದೆ.

ವಿದ್ಯುತ್, ನೀರು ದರ, ಆಸ್ತಿ ತೆರಿಗೆ ಏರಿಕೆ ಖಂಡಿಸಿ ಕರ್ನಾಟಕ ಸೇನಾ ಪಡೆ ಪ್ರತಿಭಟನೆ

ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ



ಕರ್ನಾಟಕ ಸೇನಾ ಪಡೆ ವತಿಯಿಂದ ವಿದ್ಯುತ್, ಆಸ್ತಿ ತೆರಿಗೆ, ಟೋಲ್ ಮತ್ತು ನೀರಿನ ದರವನ್ನು ಏರಿಸಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಮೈಸೂರಿನ ಹಳೇ ಜಿಲ್ಲಾಧಿಕಾರಿಗಳ ಮುಂಭಾಗ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಏ.2(ಜಿಎ)–ವಿದ್ಯುತ್, ಆಸ್ತಿ ತೆರಿಗೆ, ಟೋಲ್ ಮತ್ತು ನೀರಿನ ದರ ಏರಿಸಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಹಳೆ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಜಮಾವಣೆಗೊಂಡ ಪದಾಧಿಕಾರಿಗಳು 'ರಾಜ್ಯ ಸರ್ಕಾರಕ್ಕೆ ಧಿಕ್ಕಾರ', 'ಮೊದಲು ರಸ್ತೆ ಗುಂಡಿಗಳನ್ನು ಮುಚ್ಚಿ', ಪದೆ ಪದೇ ಬೆಲೆ ಏರಿಕೆ ಮಾಡುತ್ತಿರುವ ಸರ್ಕಾರಕ್ಕೆ ಧಿಕ್ಕಾರ' ಹೀಗೆ ವಿವಿಧ ಪ್ಲೇಕಾರ್ಡ್‌ಗಳನ್ನು ಹಿಡಿದು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಅಡುಗೆ ಅನಿಲ ಸಂಕಷ್ಟವನ್ನು ಎದುರಿಸುತ್ತಿರುವ ಜನತೆಗೆ, ರಾಜ್ಯ ಸರ್ಕಾರ ಹೊಸ ಆರ್ಥಿಕ ವರ್ಷದಿಂದ ವಿದ್ಯುತ್ ದರ 40ರಿಂದ 50 ಪೈಸೆ ಹೆಚ್ಚಳ ಮಾಡಿದ್ದು, ಜೊತೆಗೆ ನೀರಿನ ದರ ಏರಿಕೆಯನ್ನು ಅಧಿಕೃತವಾಗಿ ಪ್ರಕಟಿಸಿ, ಆಸ್ತಿ ತೆರಿಗೆಯನ್ನು ಹೆಚ್ಚಿಸಲು ನಿರ್ಧರಿಸಿರುವುದು ಅತ್ಯಂತ ವಿಷಾದದ ಸಂಗತಿಯಾಗಿದೆ. ರಾಜ್ಯದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಬಿಟ್ಟಿ ಭಾಗ್ಯಗಳಿಗಾಗಿ ರಾಜ್ಯದ ಬೊಕ್ಕಸವನ್ನು ಖಾಲಿ ಮಾಡಿ, ಅಗತ್ಯ ವಸ್ತುಗಳು ಸೇರಿದಂತೆ ಎಲ್ಲದರ ಬೆಲೆಗಳನ್ನು ಏರಿಸುತ್ತಿರುವುದು ಅತ್ಯಂತ ನಾಚಿಕೇಡಿನ ಸಂಗತಿಯಾಗಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಈಗಾಗಲೇ ರಾಜ್ಯದ ಜನತೆ ಮಧ್ಯಪ್ರಾಚ್ಯದ ಯುದ್ಧದಿಂದಾಗಿ, ಗ್ಯಾಸ್ ಸಿಲಿಂಡರ್ ಪೂರೈಕೆ ವ್ಯತ್ಯಯದಿಂದಾಗಿ ಪರಿತಪಿಸುತ್ತಿದ್ದಾರೆ. ಮುಂದೆ ಪೆಟ್ರೋಲ್, ಡೀಸೆಲ್ ಕಥೆ ಏನೋ ಎಂದು ಆತಂಕದಲ್ಲಿದ್ದಾರೆ. ಈ ಸಂಕಷ್ಟ ಸಮಯದಲ್ಲಿ ರಾಜ್ಯ ಸರ್ಕಾರ ಬೆಲೆಗಳನ್ನು ಏಕಾಏಕಿ ಏರಿಸಿ ಜನತೆಗೆ ಶಾಕ್ ನೀಡಿದೆ. ಇದರ ಜೊತೆಗೆ ಹಾಲಿನ ಬೆಲೆ ಏರಿಕೆ ಸುಳಿವು ನೀಡಿರುವುದು ರಾಜ್ಯದ ಜನತೆಗೆ ನುಂಗಲಾರದ ತುತ್ತಾಗಿದೆ ಎಂದು ಬೇಸರಿಸಿದರು.

ಮೈಸೂರು ಮಹಾನಗರ ಪಾಲಿಕೆಯು, ತನ್ನ ವ್ಯಾಪ್ತಿಯ ಪ್ರತಿ ಮನೆಗಳಿಗೆ (ಪಿಐಡಿ) ಆಸ್ತಿ ಗುರುತಿನ ಸಂಖ್ಯೆ ಆಧಾರದ ಮೇಲೆ ದ್ವಿಚಕ್ರ ವಾಹನಕ್ಕೆ 100 ರೂ. ತ್ರಿಚಕ್ರ ವಾಹನಗಳಿಗೆ 200 ರೂ. ಹಾಗೂ ನಾಲ್ಕು ಚಕ್ರದ ವಾಹನಗಳಿಗೆ 500 ರೂ. ಮೋಟಾರ್ ವಾಹನ ಉಪಕರಣ ವಿಧಿಸಲು ಹೊರಟಿರುವುದು ಅವೈಜ್ಞಾನಿಕ ಹಾಗೂ ಖಂಡನೀಯ ಎಂದರು. ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಕೃಷ್ಣಪ್ಪ, ಪ್ರಭುಶಂಕರ್, ಸಿಂಧುವಳ್ಳಿ ಶಿವಕುಮಾರ್, ಬೋಗಾದಿ ಸಿದ್ದೇಗೌಡ, ಶಿವಲಿಂಗಯ್ಯ, ಶ್ರೀನಿವಾಸ್, ನೇಹಾ, ಮಂಜುಳಾ, ಸೌಮ್ಯ, ಸುಜಾತ, ನರಸಿಂಹೇಗೌಡ, ತಾಯೂರು ಗಣೇಶ್, ವಿಜಯೇಂದ್ರ, ಪ್ರಭಾಕರ್, ರಾಧಾಕೃಷ್ಣ, ನಾರಾಯಣಗೌಡ, ದರ್ಶನ್‌ಗೌಡ, ಪ್ರದೀಪ್‌ಕುಮಾರ್, ಕುಮಾರ್‌ಗೌಡ, ಬಸವರಾಜು, ಪರಿಸರ ಚಂದ್ರು, ನಾಗರಾಜು, ಗಣೇಶ ಪ್ರಸಾದ್, ಶಿವರಾಮೇಗೌಡ, ಚಂದ್ರಶೇಖರ್, ರವಿನಾಯಕ್, ರವೀಶ್ ಮತ್ತಿತರರು ಪಾಲ್ಗೊಂಡಿದ್ದರು.

ಏ.7ಕ್ಕೆ ಪೂರ್ವಭಾವಿ ಸಭೆ

ಮೈಸೂರು, ಏ.2– ಏ.21ರಂದು ಶ್ರೀ ಶಂಕರಾಚಾರ್ಯ ಜಯಂತಿ, 23ರಂದು ಶ್ರೀ ಭಗೀರಥ ಜಯಂತಿ ಹಾಗೂ ಮೇ 1ರಂದು ಭಗವಾನ್ ಬುದ್ಧ ಜಯಂತಿ ಸಂಬಂಧ ಏ.7ರಂದು ಬೆಳಗ್ಗೆ 11 ಗಂಟೆಗೆ ಸಿದ್ಧಾರ್ಥನಗರದ ಡಿಸಿ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅವಧಿ ವಿಸ್ತರಣೆ

ಮೈಸೂರು: ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜ್, ಡೆಹರಾಡೂನ್‌ನಲ್ಲಿ ಜನವರಿ 2027ರ ವರ್ಷದ 8ನೇ ತರಗತಿಗೆ ಪ್ರವೇಶ ಬಯಸುವ ಕರ್ನಾಟಕ ರಾಜ್ಯದ ಬಾಲಕ ಮತ್ತು ಬಾಲಕಿಯರ ಪ್ರವೇಶಕ್ಕಾಗಿ ಅರ್ಹತಾ ಪ್ರವೇಶ ಪರೀಕ್ಷೆಯು ಜೂ.7ರಂದು ಬೆಂಗಳೂರು ಕೇಂದ್ರದಲ್ಲಿ ನಡೆಯಲಿದೆ.

ಈ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಏ.5ರಿಂದ ಏ.15ರವರೆಗೆ ವಿಸ್ತರಿಸಲಾಗಿದೆ. ಅಭ್ಯರ್ಥಿಗಳು 7ನೇ ತರಗತಿಯಲ್ಲಿ ಓದುತ್ತಿದ್ದು, 11 1/2 ವರ್ಷದಿಂದ 13 ವರ್ಷದೊಳಗಿರುವ ಅರ್ಹ ಅಭ್ಯರ್ಥಿಗಳು ಏ.15ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಕಾರ್ಯಾಲಯದ ದೂ.ಸಂ. 080 25589459 ಸಂಪರ್ಕಿಸಬಹುದು.

ಆಸ್ತಿ–ಪಾಸ್ತಿಗಳನ್ನು ಕಾಪಾಡಿ ಸಮುದಾಯಗಳನ್ನು ಒಗ್ಗೂಡಿಸುವುದೇ ಪೊಲೀಸ್ ಇಲಾಖೆಯ ಕರ್ತವ್ಯ



ಪೊಲೀಸ್ ಧ್ವಜ ದಿನಾಚರಣೆಯಲ್ಲಿ ಗಣ್ಯರು ಪಾಲ್ಗೊಂಡಿದ್ದರು.

ಮಂಡ್ಯ, ಏ.2–ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ, ಭದ್ರತೆಯನ್ನು ಕಾಪಾಡುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆಯು ಕಾರ್ಯ ನಿರ್ವಹಿಸುತ್ತಿದೆ. ನಾಗರಿಕ ಆಸ್ತಿಪಾಸ್ತಿಗಳನ್ನು ಕಾಪಾಡಿ ಎಲ್ಲಾ ಸಮುದಾಯಗಳನ್ನು ಒಗ್ಗೂಡಿಸುವುದು ಪೊಲೀಸ್ ಇಲಾಖೆಯ ಕರ್ತವ್ಯ ಎಂದು ನಿವೃತ್ತ ಆರಕ್ಷಕ ಉಪ ನಿರೀಕ್ಷಕರು ದಾಸಪ್ಪ ಹೇಳಿದರು.

ನಗರದ ಡಿ.ಎ.ಆರ್ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ನಡೆದ ಪೊಲೀಸ್ ಧ್ವಜ ದಿನಾಚರಣೆಯನ್ನು ಉದ್ಘಾಟಿಸಿ, ಜಿಲ್ಲೆಯು ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದುವರೆದಿದ್ದು ಜಿಲ್ಲೆಯು ಪ್ರವಾಸಿ ತಾಣವಾಗಿದೆ. ಕರ್ನಾಟಕ ಪೊಲೀಸ್ ಅಧಿಕಾರಿಗಳು ಸೈಬರ್ ಅಪರಾಧ, ನೈಸರ್ಗಿಕ ವಿಪತ್ತು ಹಾಗೂ ಕಾನೂನು ವ್ಯವಸ್ಥೆಯನ್ನು ಕಾಪಾಡುವಲ್ಲಿ ಕರ್ನಾಟಕ ಪೊಲೀಸ್ ಮಾದರಿಯಾಗಿದ್ದು, ಮಂಡ್ಯ ಜಿಲ್ಲೆಯು ಕೂಡ ಕಾನೂನು ವ್ಯವಸ್ಥೆ ಕಾಪಾಡುವಲ್ಲಿ ಯಶಸ್ವಿಯಾಗಿದೆ. ಎಂದು ತಿಳಿಸಿದರು.

ಎಸ್ಪಿ ಡಾ.ಶೋಭಾ ರಾಣಿ ಮಾತನಾಡಿ, ಸೇವೆಯಲ್ಲಿ ವಿರಾಮವಿಲ್ಲದೆ ನಿಂದನೆಗೆ ಒಳಗಾಗಿ ಅತ್ಯಂತ ಕ್ಲಿಷ್ಟಕರ ಪರಿಸ್ಥಿತಿಯನ್ನು ಅನುಭವಿಸಿ ಪೊಲೀಸ್ ಇಲಾಖೆಯ ನೌಕರರು ಹಾಗೂ ಅಧಿಕಾರಿಗಳು ಸೇವೆಗಳನ್ನು ಮುಗಿಸಿ ನಿವೃತ್ತರಾಗಿರುತ್ತಾರೆ ಆದ್ದರಿಂದ ಪ್ರತಿ ವರ್ಷ ನಿವೃತ್ತಿ ಹೊಂದಿದ ಪೊಲೀಸ್ ಅಧಿಕಾರಿಗಳಿಗೆ ಗೌರವ ಸೂಚಿಸುವ ಸಲುವಾಗಿ ಕಾರ್ಯಕ್ರಮವನ್ನು ಮಾಡಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅಪರ ಪೊಲೀಸ್ ವರಿಷ್ಠಾಧಿಕಾರಿಗಳಾದ ತಿಮ್ಮಯ್ಯ ಮತ್ತು ಗಂಗಾಧರ್ ಸ್ವಾಮಿ ಉಪಸ್ಥಿತರಿದ್ದರು.

ಕಾಳಸಂತೆಯಲ್ಲಿ ಇಂಧನ ಮಾರಾಟ ಮಾಡಿದರೆ ಕಠಿಣ ಕ್ರಮ: ಡಿಸಿ ಎಚ್ಚರಿಕೆ


ಡಿಸಿ ಡಾ.ಕುಮಾರ್ ವಿವಿಧ ಇಂಧನ ವಿತರಕ ಮಾಲೀಕರೊಂದಿಗೆ ಸಭೆ ನಡೆಸಿದರು.

ಮಂಡ್ಯ, ಏ.2– ಜಿಲ್ಲೆಯಾದ್ಯಂತ ಇಂಧನ ಪೂರೈಕೆಯಲ್ಲಿ ಯಾವುದೇ ಕೊರತೆಯಿಲ್ಲ. ಸಾಕಷ್ಟು ದಾಸ್ತಾನು ಲಭ್ಯವಿದೆ ಅನಧಿಕೃತವಾಗಿ ಕಾಳಸಂತೆಯಲ್ಲಿ ಮಾರಾಟ ಮಾಡುವುದು ಕಂಡುಬಂದರೆ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ HPC, BPC ಮತ್ತು IOC ಕಂಪನಿ ವಿತರಕ ಮಾಲೀಕರೊಂದಿಗೆ ಸಭೆ ನಡೆಸಿದ ಅವರು, ಪೆಟ್ರೋಲಿಯಂ ಉತ್ಪನ್ನಗಳಾದ ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿ ಸಿಲಿಂಡರ್‌ಗಳನ್ನು ಅಕ್ರಮವಾಗಿ ದಾಸ್ತಾನು ಮಾಡುವುದು ಕಾನೂನುಬಾಹಿರ ಮತ್ತು ಅಪಾಯಕಾರಿ. ಇದು ಶಿಕ್ಷಾರ್ಹ ಅಪರಾಧವಾಗಿದ್ದು, ಅಸುರಕ್ಷಿತ ಸಂಗ್ರಹವು ಭೀಕರ ಅಗ್ನಿ ಅವಘಡಗಳಿಗೆ ಕಾರಣವಾಗಬಹುದು ಎಂದು ಅವರು ತಿಳಿಸಿದರು.

ಜಿಲ್ಲೆಯಲ್ಲಿ 182 ಪೆಟ್ರೋಲ್ ಬಂಕ್‌ಗಳಿದ್ದು ಪ್ರತಿ ನಿತ್ಯ 2.31 ಲಕ್ಷ ಲೀಟರ್ ಇಂಧನ ಬಳಸಲಾಗುತ್ತಿದೆ. 11.81ಲಕ್ಷ ಲೀಟರ್ ಪೆಟ್ರೋಲ್ ಸಂಗ್ರಹಣೆ ಇದೆ ಹಾಗೂ 18 ಲಕ್ಷ ಲೀಟರ್ ಡೀಸೆಲ್ ಸಂಗ್ರಹಣೆ ಇದೆ ಸಾರ್ವಜನಿಕರು ಆತಂಕ ಪಟ್ಟು ಅನಗತ್ಯವಾಗಿ ಕ್ಯಾನ್, ಬಾಟಲ್‌ನಲ್ಲಿ ತುಂಬಿಸಿ ಶೇಖರಣೆ ಮಾಡಿಟ್ಟುಕೊಳ್ಳುವವರ ವಿರುದ್ಧ ಕಾನೂನು ಕ್ರಮ ಜರುಗಿಸಿ ಎಂದು ಸೂಚಿಸಿದರು.

ಜಿಲ್ಲೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂಬ ವದಂತಿಗಳಿಂದಾಗಿ ಅನೇಕ ಪೆಟ್ರೋಲ್ ಬಂಕ್‌ಗಳಲ್ಲಿ ವಾಹನ ಸವಾರರು ದೀರ್ಘ ಸಾಲಿನಲ್ಲಿ ನಿಂತು ಇಂಧನ ತುಂಬಿಸಿಕೊಳ್ಳುತ್ತಿದ್ದು, ಸಾರ್ವಜನಿಕರು ಅನಗತ್ಯವಾಗಿ ಇಂಧನವನ್ನು ಸಂಗ್ರಹಣೆ ಮಾಡದಂತೆ ಕ್ಯಾನ್‌ಗಳಿಗೆ ಇಂಧನವನ್ನು ತುಂಬಿಸದಂತೆ ಕ್ರಮ ವಹಿಸಬೇಕು ಎಂದು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ.ಶೋಭಾರಾಣಿ, ಆಹಾರ ಇಲಾಖೆ ಉಪ ನಿರ್ದೇಶಕ ಪ್ರತೀಕ್ ಹೆಗ್ಡೆ, ಪೆಟ್ರೋಲಿಯಂ ಉತ್ಪನ್ನಗಳ ಮಾಲೀಕರು ಭಾಗವಹಿಸಿದ್ದರು.

ಅಣ್ಣೂರಲ್ಲಿ ಡಾ. ಶಿವಕುಮಾರ ಸ್ವಾಮೀಜಿ 119ನೇ ಜನ್ಮ ದಿನಾಚರಣೆ


ಡಾ. ಶಿವಕುಮಾರ ಸ್ವಾಮೀಜಿ ಅವರ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು.

ಭಾರತೀನಗರ.ಏ.2– ಸಮೀಪದ ಅಣ್ಣೂರು ಗ್ರಾಮದಲ್ಲಿ ವೀರಶೈವ ಸೇವಾ ಸಮಿತಿ ವತಿಯಿಂದ ಪರಮ ಪೂಜ್ಯ ಡಾ. ಶಿವಕುಮಾರ ಸ್ವಾಮೀಜಿ ಅವರ 119ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು.

ಅಣ್ಣೂರು ಕೃಷಿಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಆರ್.ಸಿದ್ದಪ್ಪ ಮಾತನಾಡಿ, ಸಿದ್ಧಗಂಗಾ ಶ್ರೀಗಳು ನಡೆದಾಡುವ ದೇವರಾಗಿದ್ದು ಎಲ್ಲಾ ವರ್ಗದ ವಿದ್ಯಾರ್ಥಿಗಳ ಅಭ್ಯುದಯಕ್ಕೆ ನಿರಂತರವಾಗಿ ಶ್ರಮಿಸುವ ಮೂಲಕ ಅಕ್ಷರ ದಾಹವನ್ನು ನೀಗಿಸಿದ ಮಹಾನ್ ವ್ಯಕ್ತಿ ಎಂದು ಬಣ್ಣಿಸಿದರು.

ಗ್ರಾ.ಪಂ ಮಾಜಿ ಉಪಾಧ್ಯಕ್ಷ ಹೊಂಡಾ ಸಿದ್ದೇಗೌಡ, ಪತ್ರಕರ್ತ ಅಣ್ಣೂರು ಸತೀಶ್, ಯಜಮಾನ್ ಶಶಿಕುಮಾರ್, ರತ್ನಾಕರ್, ಆರ್.ಮಹೇಶ್, ಈಶಪ್ರಸಾದ್, ಮನೋಜ್, ಎ.ಆರ್.ಸಂತೋಷ, ಸುಂದರ್, ಮನೋಹರ್, ನಿಂಗರಾಜು, ಮಧು, ದೇವರಾಜು, ಕುಮಾರ, ಯೋಗಾನಂದ, ಮನೀತ್, ಲೋಕೇಶ ಸೇರಿದಂತೆ ಹಲವರಿದ್ದರು.

ಇನ್ಫೋಸಿಸ್ ಉದ್ಯೋಗಿ ನೀರಲ್ಲಿ ಮುಳುಗಿ ಸಾವು

ಕೆಆರ್‌ಎಸ್: ಸ್ನೇಹಿತರೊಂದಿಗೆ ಪ್ರವಾಸಕ್ಕೆಂದು ಬಂದಿದ್ದ ಯುವಕ ನೀರಲ್ಲಿ ಮುಳುಗಿ ಅಸು ನೀಗಿರುವ ಘಟನೆ ಗುರುವಾರ ಬೆಳಗೊಳ ಗ್ರಾಮದ ಬಲಮುರಿ ಎಡಮುರಿ ತಾಣದ ಕಾವೇರಿ ನದಿಯಲ್ಲಿ ಸಂಭವಿಸಿದೆ.

ಬೆಂಗಳೂರಿನ ರಾಮಮೂರ್ತಿ ನಗರ ಬಡಾವಣೆಯ ನಿವಾಸಿ ವಿಘ್ನೇಶ್(27) ಎಂಬಾತನೆ ಮೃತಪಟ್ಟ ದುರ್ದೈವಿ. ಬೆಂಗಳೂರಿನಲ್ಲಿ ಇನ್ಫೋಸಿಸ್ ಉದ್ಯೋಗಿಯಾಗಿರುವ ಈತ ಮೂವರು ಸ್ನೇಹಿತರ ಜೊತೆ ಪ್ರವಾಸಕ್ಕೆಂದು ಬೆಂಗಳೂರಿನಿಂದ ಬಂದಿದ್ದು, ಮಧ್ಯಾಹ್ನ ಎಡಮುರಿಗೆ ಬಂದು ಈಜಾಡುತ್ತಿದ್ದ ಸಂದರ್ಭದಲ್ಲಿ ನದಿಯಲ್ಲಿನ ಆಳವಾದ ಜಾಗದಲ್ಲಿ ಮುಳುಗಿದ್ದು, ಸ್ನೇಹಿತರು ಸಹಾಯಕ್ಕಾಗಿ ಕೂಗಿಕೊಂಡಾಗ್ಯೂ ಕೂಡ ಸಹಾಯಕ್ಕಾಗಿ ಬರುವಷ್ಟರಲ್ಲಿ ಈತ ಮುಳುಗಿದ್ದನೆನ್ನಲಾಗಿದೆ.

ಸುದ್ದಿ ತಿಳಿದು ಕೆ.ಆರ್.ಸಾಗರ ಪೊಲೀಸರು ತಕ್ಷಣಕ್ಕೆ ಸ್ಥಳಕ್ಕೆ ಧಾವಿಸಿದ್ದು ಅಗ್ನಿಶಾಮಕ ದಳ ಮತ್ತು ನುರಿತ ಈಜುಗಾರರನ್ನು ಬಳಸಿ ವಿಘ್ನೇಶ್ ಸ್ನೇಹಿತರು ನೀಡಿದ ಮಾಹಿತಿಯಂತೆ ನದಿಯಲ್ಲಿ ಹುಡುಕಾಡಿ ಶವ ಹೊರತೆಗೆದು ಮೈಸೂರು ಕೆ.ಆರ್.ಆಸ್ಪತ್ರೆಯ ಶವಗಾರಕ್ಕೆ ರವಾನಿಸಿ, ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಪತ್ರಕರ್ತ ಎ.ಬಿ.ಮಹೇಶ್‌ಕುಮಾರ್ ನಿಧನ



ಕೆ.ಆರ್.ಪೇಟೆ,ಏ.2–ತಾಲೂಕಿನ ಪ್ರತ್ರಕರ್ತರು ಹಾಗೂ ಹೋಟೆಲ್ ಉದ್ಯಮಿಯಾಗಿದ್ದ ಎ.ಬಿ.ಮಹೇಶ್‌ಕುಮಾರ್(50) ಇಂದು ನಿಧನರಾಗಿದ್ದಾರೆ.

ಮೃತರು ಪತ್ನಿ, ಪುತ್ರ ಮತ್ತು ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರು ಪತ್ರಿಕೆಗಳ ವಿತರಕರಾಗಿ ಮತ್ತು ಅಕ್ಕಿಹೆಬ್ಬಾಳು ಹೋಬಳಿಯ ವರದಿಗಾರರಾಗಿ ಸೇವೆ ಸಲ್ಲಿಸಿದ್ದರು. ಮೃತರ ಅಂತ್ಯಕ್ರಿಯೆ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಅಕ್ಕಿಹೆಬ್ಬಾಳು ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ತಂದೆ ಬಸವಣ್ಣನವರೂ ಅಕ್ಕಿಹೆಬ್ಬಾಳು ಹೋಬಳಿಯ ವರದಿಗಾರರಾಗಿ ಸೇವೆ ಸಲ್ಲಿಸಿದ್ದರು.

ಸರ್ಕಾರಿ ಸೇವೆಗಳು ಮನೆ ಬಾಗಿಲಿಗೆ; ರೈತರಿಗೆ ವರದಾನ

ಕೆ.ಆರ್.ಪೇಟೆ: ರೈತರು ವಿನಾಕಾರಣ ಸರ್ಕಾರಿ ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು 'ಸರ್ಕಾರಿ ಸೇವೆಗಳು ಮನೆ ಬಾಗಿಲಿಗೆ' ಎಂಬ ಶೀರ್ಷಿಕೆ ಅಡಿಯಲ್ಲಿ ನಡೆಯುತ್ತಿರುವ "ಜನಸ್ಪಂದನಾ" ಕಾರ್ಯಕ್ರಮವು ರೈತರಿಗೆ ವರದಾನವಾಗಿದೆ ಎಂದು ಶಾಸಕ ಹೆಚ್.ಟಿ.ಮಂಜು ಹೇಳಿದರು.


ಬೂಕನಕೆರೆ ಹೋಬಳಿ ಮಟ್ಟದ ಜನಸ್ಪಂದನ ಕಾರ್ಯಕ್ರಮದಲ್ಲಿ ಸುಮಾರು 800 ಕ್ಕೂ ಹೆಚ್ಚು ಫಲಾನುಭವಿಗಳಿಗೆ ಸೌಲಭ್ಯಗಳನ್ನು ಶಾಸಕ ಹೆಚ್.ಟಿ.ಮಂಜು ವಿತರಿಸಿದರು

ತಾಲೂಕಿನ ಬೂಕನಕೆರೆ ಹೋಬಳಿಯ ಗಂಜಿಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ, ಗಂಜಿಗೆರೆ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಆಯೋಜಿಸಿದ್ದ ಬೂಕನಕೆರೆ ಹೋಬಳಿ ಮಟ್ಟದ ಜನಸ್ಪಂದನ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಸುಮಾರು 800ಕ್ಕೂ ಹೆಚ್ಚು ಫಲಾನುಭವಿಗಳಿಗೆ ಸೌಲಭ್ಯಗಳನ್ನು ವಿತರಣೆ ಮಾಡಿ, ಪ್ರಮುಖವಾಗಿ ಕಂದಾಯ ಕೃಷಿ, ತೋಟಗಾರಿಕೆ, ಪಂಚಾಯತ್ ರಾಜ್, ನೀರಾವರಿ, ಸೆಸ್ಕ್, ಪಶುವೈದ್ಯ ಇಲಾಖೆ, ಮೀನುಗಾರಿಕೆ", ಗ್ರಾಮ ಪಂಚಾಯತ್, ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸೇರಿದಂತೆ ಎಲ್ಲಾ ಇಲಾಖೆಗಳ ತಾಲೂಕು ಅಧಿಕಾರಿಗಳು ಒಂದೇ ಸೂರಿನಡಿ ಕುಳಿತು ನೂರಾರು ರೈತರು ಮತ್ತು ಸಾರ್ವಜನಿಕರ ಸಮಸ್ಯೆಗಳನ್ನು ಇತ್ಯರ್ಥಪಡಿಸಿದ್ದಾರೆ ಎಂದರು.

ತಾಲೂಕಿನಲ್ಲಿ ಹೊಸದಾಗಿ ಆಸ್ಪತ್ರೆಗಳನ್ನು ನೀಡದಿದ್ದರೂ ಪರವಾಗಿಲ್ಲ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮುಚ್ಚಬಾರದು ಎಂದು ಶಾಸಕ ಮಂಜು ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಕಂದಾಯ ಗ್ರಾಮಗಳಾದ ಹೊಡಕೆಶೆಟ್ಟಿ ಹಳ್ಳಿ ಮತ್ತು ಕೂಡಲಕುಪ್ಪೆ ಗ್ರಾಮಗಳ 113ಮನೆಗಳಿಗೆ ಹಕ್ಕು ಪತ್ರಗಳನ್ನು ವಿತರಣೆ ಮಾಡಲಾಯಿತು. ಕಂದಾಯ ಇಲಾಖೆಯಿಂದ ಸುಮಾರು 300ಕ್ಕೂ ಹೆಚ್ಚು ಫಲಾನುಭವಿಗಳಿಗೆ ವಿವಿಧ ಸೌಲತ್ತುಗಳನ್ನು ಶಾಸಕರು ವಿತರಣೆ ಮಾಡಿದರು. ಕೃಷಿ ಇಲಾಖೆಯಿಂದ ಕೃಷಿ ಟ್ರಾಕ್ಟರ್, ಟ್ರೇಲರ್‌ಗಳನ್ನು ವಿತರಣೆ ಮಾಡಿದರು. ತೋಟಗಾರಿಕಾ ಇಲಾಖೆಯಿಂದ ಮೇವು ಕತ್ತರಿಸುವ ಯಂತ್ರ ವಿತರಣೆ ಮಾಡಿದರು. ಮೀನುಗಾರಿಕೆ ಇಲಾಖೆಯಿಂದ ಮೀನು ಹಿಡಿಯುವ ಹರಿಗೋಲು ದೋಣಿಯನ್ನು ಶಾಸಕರು ವಿತರಣೆ ಮಾಡಿದರು. ಚೆಸ್ಕಾಂ ಇಲಾಖೆಯಿಂದ ಅಕ್ರಮ ಸಕ್ರಮ ಯೋಜನೆ ಅಡಿಯಲ್ಲಿ ಕೃಷಿ ಪಂಪ್ ಸೆಟ್ ಸಕ್ರಮ ಮಾಡಿಕೊಂಡ ರೈತರಿಗೆ ಟಿಸಿ ವಿತರಣಾ ಆದೇಶಪತ್ರ ನೀಡಲಾಯಿತು. ಗ್ರಾಮ ಪಂಚಾಯತ್ ವತಿಯಿಂದ ವಿಕಲಚೇತನರಿಗೆ ಸೋಲಾರ್ ಲ್ಯಾಂಪ್‌ಗಳನ್ನು ವಿತರಣೆ ಮಾಡಲಾಯಿತು.

ಡಾ.ಎಸ್.ಯು.ಅಶೋಕ್, ಸಿದ್ದಯ್ಯ, ಸುಷ್ಮಾ ಮೋದೂರು ಶ್ರೀನಿವಾಸ್, ಪುಟ್ಟಸ್ವಾಮಿ, ಡಾ. ಅಜಿತ್,ಕೆ.ಬಿ.ನಾಗೇಶ್,ಕುಮಾರಸ್ವಾಮಿ, ರಾಮಚಂದ್ರ್, ಎಂ.ಮೋಹನ್, ಚಂದ್ರಕಲಾ ಪ್ರಕಾಶ್, ಪರಮೇಶ್, ಗೀತಾ, ರವಿಕುಮಾರ್, ಎಂ.ಎಸ್. ಸುರೇಶ್ ಜನಸ್ಪಂದನಾ ಸಭೆಯಲ್ಲಿ ಇತರರಿದ್ದರು.

ಹೊಸಹಳ್ಳಿ ಗ್ರಾಪಂ 1.93 ಕೋಟಿ ದಾಖಲೆ ತೆರಿಗೆ ಸಂಗ್ರಹ

ಶ್ರೀರಂಗಪಟ್ಟಣ: ತಾಲೂಕಿನ ಬೆಳಗೊಳ ಹೋಬಳಿಯ ಹೊಸಹಳ್ಳಿ ಗ್ರಾಮ ಪಂಚಾಯಿತಿ ದಾಖಲೆ ಪ್ರಮಾಣದಲ್ಲಿ, 1.93 ಕೋಟಿ ತೆರಿಗೆ ಸಂಗ್ರಹಿಸಿದೆ.



ಗ್ರಾಪಂ. ವ್ಯಾಪ್ತಿಯಲ್ಲಿ 6 ಗ್ರಾಮಗಳು ಇದ್ದು ಅನಗಹಳ್ಳಿ ಒಂದರಲ್ಲೇ 93.03 ಲಕ್ಷ ತೆರಿಗೆ ಸಂಗ್ರಹವಾಗಿದೆ. ಮೊಗರಹಳ್ಳಿಯಲ್ಲಿ 51.47 ಲಕ್ಷ, ಹೊಸ ಹಳ್ಳಿಯಲ್ಲಿ 30.66 ಲಕ್ಷ, ಪುರದಲ್ಲಿ 9.94 ಲಕ್ಷ, ಜಕ್ಕನಕೊಪ್ಪಲಿನಲ್ಲಿ 5.75 ಲಕ್ಷ ಹಾಗೂ ಕಾರೇಕುರದಲ್ಲಿ 2.21 ಲಕ್ಷ ತೆರಿಗೆ ಸಂಗ್ರಹವಾಗಿದೆ. ತೆರಿಗೆ ಸಂಗ್ರಹದಲ್ಲಿ ಜಿಲ್ಲೆಯಲ್ಲೇ ಪ್ರಥಮ ಸ್ಥಾನದಲ್ಲಿದೆ. ನಗುವನಹಳ್ಳಿ ಗ್ರಾ.ಪಂ. 1.5 ಕೋಟಿ ತೆರಿಗೆ ಸಂಗ್ರಹಿಸಿ ತಾಲೂಕಿನಲ್ಲಿ ಎರಡನೇ ಸ್ಥಾನ ಪಡೆದಿದೆ. ಏಪ್ರಿಲ್ ತಿಂಗಳಿನಿಂದಲೇ ತೆರಿಗೆ ಸಂಗ್ರಹ ಮಾಡುವಂತೆ ಎಲ್ಲಾ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದು ತಾ.ಪಂ. ಕಾರ್ಯ ನಿರ್ವಾಹಕ ಅಧಿಕಾರಿ ಚಂದ್ರ ತಿಳಿಸಿದ್ದಾರೆ.


ಶಶಿಕಲಾ

ಶಶಿಕಲಾ ನಮ್ಮ ಗ್ರಾ.ಪಂ.ಗೆ ಅಭಿವೃದ್ಧಿ ಅಧಿಕಾರಿಯಾಗಿ ಬಂದ ನಂತರ ತೆರಿಗೆ ಸಂಗ್ರಹ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಜಿಲ್ಲೆಯಲ್ಲೇ ಪ್ರಥಮ ಸ್ಥಾನ ಪಡೆದಿರುವುದು ನಮ್ಮ ಗ್ರಾ.ಪಂ.ಗೆ ನಿಜಕ್ಕೂ ಹೆಮ್ಮೆಯ ವಿಷಯ ಎಂದು ಗ್ರಾ.ಪಂ. ಮಾಜಿ ಅಧ್ಯಕ್ಷ ಚಲುವರಾಜು ಸಂತಸ ವ್ಯಕ್ತಪಡಿಸಿದ್ದಾರೆ.

ಹೊಸಹಳ್ಳಿ ಗ್ರಾ.ಪಂ. ವ್ಯಾಪ್ತಿಯಲ್ಲಿ ಕೈಗಾರಿಕೆಗಳು ಮತ್ತು ಹೊಸ ವಸತಿ ಬಡಾವಣೆಗಳು ಇರುವುದರಿಂದ ಹೆಚ್ಚು ತೆರಿಗೆ ಸಂಗ್ರಹವಾಗಿದೆ. ಈ ಹಿಂದಿನ ಎಲ್ಲಾ ದಾಖಲೆಗಳನ್ನು ಮೀರಿ ತೆರಿಗೆ ಸಂಗ್ರಹಿಸಿದ್ದೇವೆ. ಜಿ.ಪಂ. ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಕೆ.ಆರ್. ನಂದಿನಿ ಮತ್ತು ತಾ.ಪಂ. ಕಾರ್ಯ ನಿರ್ವಾಹಕ ಅಧಿಕಾರಿ ಚಂದ್ರ ಅವರ ಮಾರ್ಗದರ್ಶನ ಹಾಗೂ ಗ್ರಾ.ಪಂ. ಅಧ್ಯಕ್ಷರು, ಸದಸ್ಯರು ಮತ್ತು ಸಿಬ್ಬಂದಿಯ ಶ್ರಮದಿಂದ ಈ ಸಾಧನೆ ಮಾಡಲು ಸಾಧ್ಯವಾಗಿದೆ. ಮುಂದಿನ ಆರ್ಥಿಕ ವರ್ಷದಲ್ಲಿ ತೆರಿಗೆ ಸಂಗ್ರಹ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸಲು ಶಕ್ತಿ ಮೀರಿ ಕೆಲಸ ಮಾಡುತ್ತೇವೆ' ಎಂದು ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಎಸ್.ಡಿ.ಶಶಿಕಲಾ ಸಂತೋಷದಿಂದ ಹೇಳಿಕೊಂಡಿದ್ದಾರೆ.

ಒಂದನೇ ಪುಟದಿಂದ

ರಾಜ್ಯದಲ್ಲಿ ಅಪರಾಧ ಹೆಚ್ಚಳ

ಇದನ್ನು ಗಮನದಲ್ಲಿಟ್ಟುಕೊಂಡು ಪೊಲೀಸ್ ಇಲಾಖೆ ಕಾರ್ಯ ನಿರ್ವಹಿಸಿದರೆ ಆರ್ಥಿಕತೆಗೂ ದೊಡ್ಡ ಕೊಡುಗೆ ಕೊಟ್ಟಂತಾಗುತ್ತದೆ ಎಂದರು. ಕರ್ನಾಟಕ ಡ್ರಗ್ಸ್ ಮುಕ್ತ ರಾಜ್ಯ ಆಗಬೇಕು ಎನ್ನುವ ಗುರಿ ನಮ್ಮ ಸರ್ಕಾರದ್ದಾಗಿದೆ. ಇದು ಪೊಲೀಸ್ ಇಲಾಖೆಯ ಗುರಿಯೂ ಆಗಬೇಕಿದೆ ಎಂದರು. ಮುಖ್ಯಮಂತ್ರಿಗಳ ಭಾಷಣಕ್ಕೂ ಮುನ್ನ ಮಾತನಾಡಿದ ಗೃಹ ಸಚಿವರಾದ ಡಾ. ಜಿ.ಪರಮೇಶ್ವರ್, ರಾಜ್ಯ ಪೊಲೀಸ್ ವ್ಯವಸ್ಥೆಯನ್ನು ಕೊಂಡಾಡಿ ಕರ್ನಾಟಕ ಪೊಲೀಸ್ ಇಲಾಖೆ ದೇಶದಲ್ಲೇ ಅತ್ಯಂತ ಉತ್ತಮವಾದ ಪೊಲೀಸ್ ವ್ಯವಸ್ಥೆ ಎಂಬ ಖ್ಯಾತಿಗೆ ಪಾತ್ರವಾಗಿದೆ ಎಂದು ಶ್ಲಾಘಿಸಿದ್ದರು.

ನಾವೇ ನಂಬರ್ ಒನ್!: ರಾಜ್ಯದಲ್ಲಿ ಶಾಂತಿ, ನೆಮ್ಮದಿ, ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸರು ಶ್ರಮ ಪಡುತ್ತಿದ್ದಾರೆ. ಅದರಲ್ಲಿ ಯಶಸ್ವಿಯೂ ಆಗಿದ್ದಾರೆ. ಇಂಡಿಯಾ ಜಸ್ಟೀಸ್ ವರದಿ ಪ್ರಕಾರ ದೇಶದಲ್ಲಿ ನೊಂದ ವರಿಗೆ ನ್ಯಾಯ ನೀಡುವುದರಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ವಿಶೇಷವಾಗಿ ನ್ಯಾಯ ಒದಗಿಸುವುದರಲ್ಲಿ ಪೊಲೀಸ್ ಇಲಾಖೆ ಉತ್ತಮವಾಗಿ ಕೆಲಸ ಮಾಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೇಂದ್ರ ಗೃಹ ಇಲಾಖೆಯು ರಾಯಚೂರು ಜಿಲ್ಲೆಯ ಕವಿತಾಳ ಪೊಲೀಸ್ ಠಾಣೆ ದೇಶದ 3ನೇ ಅತ್ಯುತ್ತಮ ಪೊಲೀಸ್ ಠಾಣೆ ಎಂದು ಗುರುತಿಸಿದೆ. ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲ ಪೊಲೀಸ್ ಠಾಣೆಗಳು, ಕವಿತಾಳ ಪೊಲೀಸ್ ಠಾಣೆಯಂತೆಯೇ ಅತ್ಯುತ್ತಮ ಪೊಲೀಸ್ ಠಾಣೆಗಳಾಗಬೇಕು ಎಂದು ಸರ್ಕಾರ ಬಯಸುತ್ತದೆ ಎಂದರು.

ಪೊಲೀಸ್ ಇಲಾಖೆಯು ಪ್ರತಿನಿತ್ಯ ಸವಾಲುಗಳನ್ನು ಎದುರಿಸುತ್ತದೆ. ಸವಾಲುಗಳ ಮಧ್ಯೆ ಕಳೆದ ಮೂರು ವರ್ಷಗಳಿಂದ ನಮ್ಮ ಸರ್ಕಾರವು ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ರಾಜ್ಯದಲ್ಲಿ ಶಾಂತಿ ಕಾಪಾಡುವುದರಲ್ಲಿ ಯಶಸ್ವಿಯಾಗಿದೆ. ರಾಜ್ಯಕ್ಕೆ ಬಂಡವಾಳ ಹೂಡಿಕೆಗೆ ಬರುವ ಜನ ಶಾಂತಿ–ನೆಮ್ಮದಿಯನ್ನು ಬಯಸುತ್ತಾರೆ. ರಾಜ್ಯದಲ್ಲಿ ಸೌಹಾರ್ದಯುತ ವಾತಾವರಣ ಸೃಷ್ಟಿ ಮಾಡುವುದರಲ್ಲಿ ಪೊಲೀಸ್ ಇಲಾಖೆ ಯಶಸ್ವಿಯಾಗಿದೆ ಎಂದು ಹೇಳಿದರು.

ಕರ್ತವ್ಯದ ವೇಳೆ ಇಲಾಖೆಗೆ ಚ್ಯುತಿ ಬಾರದಂತೆ ಅತ್ಯಂತ ಕ್ಷಿಪ್ರವಾಗಿ ಅಪರಾಧಗಳನ್ನು ಪತ್ತೆ ಹಚ್ಚಿರುವುದನ್ನು ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ತೋರಿಸಿಕೊಟ್ಟಿದೆ. ಕಾರ್ಯ ದಕ್ಷತೆಗೆ, ಸಾಮಾರ್ಥ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತೇನೆ ಎಂದರು. ರಾಜ್ಯದಲ್ಲಿ ಡ್ರಗ್ಸ್ ಜಾಲವನ್ನು ಸಂಪೂರ್ಣವಾಗಿ ಮಟ್ಟ ಹಾಕಲು ನಮ್ಮ ಸರ್ಕಾರವು ಮುಂದಾಗಿದ್ದು, ಡ್ರಗ್ಸ್ ಮುಕ್ತ ಕರ್ನಾಟಕ ಮಾಡುವುದಾಗಿ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಸಾವಿರಾರು ಕೋಟಿ ರೂ. ಮೌಲ್ಯದ ಮಾದಕ ದ್ರವ್ಯ ಪತ್ತೆ ಹಚ್ಚುವ ಮೂಲಕ ದಂಧೆಯಲ್ಲಿ ತೊಡಗಿದ ಅನೇಕ ಆರೋಪಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗಿದೆ ಎಂದರು. ದೇಶದಲ್ಲಿ ಸೈಬರ್ ಕ್ರೈಂ ಹಾವಳಿ ಹೆಚ್ಚಾಗುತ್ತಿದೆ. ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಕರ್ನಾಟಕವು ಸೈಬರ್ ಕಮಾಂಡ್ ಯೂನಿಟ್ ಸ್ಥಾಪಿಸಿ, ಡಿಜಿ ಶ್ರೇಣಿಯ ಅಧಿಕಾರಿಯನ್ನು ನೇಮಿಸಿದೆ. ಸೈಬರ್ ಕಮಾಂಡ್ ಯೂನಿಟ್‌ಗೆ ಹೆಚ್ಚು ಪ್ರೋತ್ಸಾಹಿಸುವ ಮೂಲಕ ಸೈಬರ್ ಅಪರಾಧಗಳನ್ನು ಕಡಿಮೆ ಮಾಡುವುದರಲ್ಲಿ ಯಶಸ್ವಿಯಾಗಿದ್ದೇವೆ ಎಂದು ತಿಳಿಸಿದರು.

ನಾವು ಮೊದಲೇ ನಕ್ಸಲ್ ಮುಕ್ತ ಮಾಡಿದ್ದೇವೆ: ಕೇಂದ್ರ ಗೃಹ ಸಚಿವರು ದೇಶವನ್ನು ನಕ್ಸಲ್ ಮುಕ್ತ ಮಾಡಿದ್ದೇವೆ ಎಂದು ಹೇಳಿದ್ದಾರೆ. ಕರ್ನಾಟಕದಲ್ಲಿ ಬಹಳ ವರ್ಷಗಳ ಹಿಂದೆಯೇ ಆ್ಯಂಟಿ ನಕ್ಸಲ್ ಫೋರ್ಸ್ ಸ್ಥಾಪಿಸುವ ಮೂಲಕ ದೇಶದಲ್ಲೇ ಮೊದಲು ಕರ್ನಾಟಕವನ್ನು ನಾವು ನಕ್ಸಲ್ ಮುಕ್ತ ರಾಜ್ಯವನ್ನಾಗಿ ಮಾಡಿದ್ದೇವೆ.

ಆಧುನಿಕತೆ ಪ್ರತಿನಿತ್ಯ ಸವಾಲುಗಳನ್ನು ಒಡ್ಡುತ್ತಿದೆ. ಎಲ್ಲ ಹಂತದಲ್ಲಿಯೂ ತರಬೇತಿಯನ್ನು ಪಡೆಯುವ ಮೂಲಕ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಂಡು ಕೆಲಸ ಮಾಡಬೇಕಿದೆ ಎಂದು ಹೇಳಿದರು.

ಜನರೇ ಅವರ ಗುಲಾಮರಾಗಬಾರದು...!


ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಸಭಾಂಗಣದಲ್ಲಿ ದಾರಿ ಫೌಂಡೇಷನ್ ಸಹಯೋಗದೊಂದಿಗೆ ಆಯೋಜಿಸಿದ್ದ 'ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ ಜವಾಬ್ದಾರಿ ಯುವ ಶಕ್ತಿಯ ಕೈಯಲ್ಲಿ' ಮುಕ್ತ–ಸಂವಾದವನ್ನು ಹಿರಿಯ ನಟ, ರಾಜಕಾರಣಿ ಮುಖ್ಯಮಂತ್ರಿ ಚಂದ್ರು ಉದ್ಘಾಟಿಸಿದರು.

ರೈತರಿಗೆ ಹಣ ನೀಡುವ ಬದಲು ಬೆಂಬಲ ಬೆಲೆ ಬೆಲೆ ಹಾಗೂ ಸಮರ್ಪಕ ನೀರು ಮತ್ತು ವಿದ್ಯುತ್ ಪೂರೈಸಬೇಕು ಎಂದು ಸಲಹೆ ನೀಡಿದರು.

ಹಿಂದಿ ಸಾಮಾನ್ಯ ಭಾಷೆ: ಹಿಂದಿ ರಾಷ್ಟ್ರೀಯ ಭಾಷೆಯಲ್ಲ. ಸಂವಿಧಾನದ 9ನೇ ಶೆಡ್ಯೂಲ್‌ನಲ್ಲಿ ಹೇಳಿರುವಂತೆ ಅದು ಕೂಡ ದೇಶದ ಒಂದು ಸಾಮಾನ್ಯ ಭಾಷೆ. ಹೀಗಾಗಿ ಕರ್ನಾಟಕದಲ್ಲಿ ಎಲ್ಲಾ ಹಂತಗಳಲ್ಲೂ ಕನ್ನಡಕ್ಕೆ ಆದ್ಯತೆ ಸಿಗಬೇಕು. ಇಂಗ್ಲಿಷ್ ಅನ್ನು ಕೂಡ ಚೆನ್ನಾಗಿ ಕಲಿಯಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ದಕ್ಷಿಣ ಭಾರತದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ ಎಂಬುದನ್ನು ಮನಗಂಡು ಹಿಂದಿ ಭಾಷೆ ಕಲಿಕೆ ಕಡ್ಡಾಯವಲ್ಲ ಎಂಬ ನಿರ್ಧಾರವನ್ನು ರಾಜ್ಯ ಸರ್ಕಾರ ತೆಗೆದುಕೊಂಡಿದೆಯೇ ಹೊರತು ಭಾಷೆಯ ಮೇಲಿನ ದ್ವೇಷದಿಂದಲ್ಲ ಎಂದು ತಿಳಿಸಿದರು.

ಸಂವಿಧಾನ ಬದಲು ಸಾಧ್ಯವಿಲ್ಲ: ಕೆಲವರು ಸಂವಿಧಾನ ಬದಲಿಸುವ ಮಾತನಾಡುತ್ತಾರೆ. ಆದರೆ, ಅದು ಅಸಾಧ್ಯ. ಸಂವಿಧಾನಕ್ಕೆ ತಿದ್ದುಪಡಿ ಮಾಡಬಹುದೇ ಹೊರತು, ಸಂವಿಧಾನದ ಮೂಲ ಆಶಯವನ್ನು ಬದಲಿಸಲು ಅವಕಾಶವೇ ಇಲ್ಲ ಎಂಬುದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಪ್ರಜಾ ಪ್ರಭುತ್ವದಲ್ಲಿ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗದ ಜೊತೆಗೆ ಅನಧಿಕೃತವಾಗಿ ಮಾಧ್ಯಮ ರಂಗವೂ ಇದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಧಾರ್ಮಿಕ ಅಂಗವೂ ಸೇರ್ಪಡೆಯಾದಂತಿದೆ! ಮಠಾಧಿಪತಿಗಳು ರಾಜಕೀಯ ಮಾಡುವಂತಾಗಿದೆ ಎಂದರು. ಪ್ರಾಂಶುಪಾಲ ಪ್ರೊ.ಸಿ. ನಟರಾಜ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ದಾರಿ ಫೌಂಡೇಷನ್ ಅಧ್ಯಕ್ಷ ಎಲ್.ರಂಗಯ್ಯ, ಕಾರ್ಯದರ್ಶಿ ತಗಡೂರು ವೀರೇಶ್ ಕುಮಾರ್ ಮಹಾಮನೆ, ಸಂಚಾಲಕ ಪ್ರಭಾಕರ್, ಐಕ್ಯೂಎಸಿ ಸಂಚಾಲಕ ಡಾ.ಎಸ್.ಮುತ್ತುರಾಜ, ಖಜಾಂಚಿ ರಾಘವೇಂದ್ರ, ಮಲ್ಲಣ್ಣ, ತೋಂಟೇಶ್, ಮೈಸೂರು ಎಂ. ಮಹಾಲಿಂಗ, ವಿದ್ಯಾರ್ಥಿನಿ ಅಧ್ಯಕ್ಷೆ ಎಸ್.ಜೆ. ಸಿಂಚನಾ, ಕಾರ್ಯದರ್ಶಿ ಸೈಯದಾ ನೂರೈನ್, ತನುಶ್ರೀ, ಪಲ್ಲವಿ ಮತ್ತಿತರರಿದ್ದರು.

ಕ್ಯಾಮರಾ ಅಳವಡಿಕೆಗೆ ವಾರದ ಗಡುವು

ಈ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ ಅನಿವಾರ್ಯವಾಗಿ ಬಂದ್ ಮಾಡಿಸಬೇಕಾಗುತ್ತದೆ ಎಂದು ಖಡಕ್ ಎಚ್ಚರಿಕೆ ನೀಡಿದ್ದಾರೆ. ಈ ಬಗ್ಗೆ 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ಡಿವೈಎಸ್ಪಿ ರವಿ, ಹುಣಸೂರಿನಲ್ಲಿ ಡ್ರಗ್ಸ್ ದಂಧೆ ಮಾತ್ರವಲ್ಲದೆ ಯಾವುದೇ ಅಪರಾಧ ಕೃತ್ಯಗಳನ್ನು ನಡೆಯದಂತೆ ಹಲವು ಕಠಿಣ ಕ್ರಮ ಕೈಗೊಂಡಿದ್ದೇವೆ. ಲಾಡ್ಜ್‌ನಲ್ಲಿ ವಾಸ್ತವ್ಯ ಹೂಡುವ ಪ್ರತಿಯೊಬ್ಬರ ಆಧಾರ್ ಕಾರ್ಡ್ ಜೆರಾಕ್ಸ್ ಅನ್ನು ಕಡ್ಡಾಯವಾಗಿ ಪಡೆಯಬೇಕು. ಲೈವ್ ಕ್ಯಾಮರಾ ಮೂಲಕ ಅವರ ಭಾವ ಚಿತ್ರವನ್ನು ಸೆರೆ ಹಿಡಿದು, ಮಾಹಿತಿ ಸಂಗ್ರಹಿಸಿಟ್ಟಿರಬೇಕು. ಅಗತ್ಯವಿದ್ದಾಗ ಅವುಗಳನ್ನು ನಮಗೆ ಸಲ್ಲಿಸಬೇಕು. ಎರಡು ದಿನಕ್ಕಿಂತ ಹೆಚ್ಚು ದಿನ ವಾಸ್ತವ್ಯ ಹೂಡುವವರ ಬಗ್ಗೆ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು. ಯಾರಾದರೂ ಅನುಮಾನಾಸ್ಪದವಾಗಿ ಕಂಡು ಬಂದರೆ ಕೂಡಲೇ ಪೊಲೀಸರಿಗೆ ಕರೆ ಮಾಡಬೇಕು. ವಾರದೊಳಗೆ ಎಲ್ಲರೂ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸದಿದ್ದರೆ ಯಾವುದೇ ಮುಲಾಜಿಲ್ಲದೆ ಬಂದ್ ಮಾಡಿಸುತ್ತೇವೆ ಎಂದು ಎಚ್ಚರಿಕೆ ನೀಡಿದ್ದೇವೆ. ಹುಣಸೂರಿನಲ್ಲಿ ಡ್ರಗ್ಸ್ ಚಟುವಟಿಕೆ ಮಾತ್ರವಲ್ಲದೆ ಯಾವುದೇ ರೀತಿಯ ಅಪರಾಧ ಕೃತ್ಯ ನಡೆಯದಂತೆ ಕಠಿಣ ಕ್ರಮ ಕೈಗೊಂಡಿದ್ದೇವೆ ಎಂದು ತಿಳಿಸಿದ್ದಾರೆ.

ಕೆಕೆಆರ್ ವಿರುದ್ಧ ಸನ್ ರೈಸರ್ಸ್‌ಗೆ ಭರ್ಜರಿ ಜಯ


ನಿತೀಶ್ ಕುಮಾರ್ ರೆಡ್ಡಿ ಹಾಗೂ ಹೆನ್ರಿಚ್ ಕ್ಲಾಸೆನ್

ಕೋಲ್ಕತ್ತಾ, ಏ.2(ವಿವಿಹೆಚ್)– ಹೆನ್ರಿಚ್ ಕ್ಲಾಸೆನ್ ಅರ್ಧಶತಕ ಹಾಗೂ ನಿತೀಶ್ ಕುಮಾರ್ ರೆಡ್ಡಿ ಅವರ ಆಲ್‌ರೌಂಡರ್ ಆಟದ ನೆರವಿನಿಂದ ಅತಿಥೇಯ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವನ್ನು 65 ರನ್‌ಗಳಿಂದ ಮಣಿಸಿದ ಸನ್ ರೈಸರ್ಸ್ ಹೈದರಾಬಾದ್ ಟೂರ್ನಿಯಲ್ಲಿ ಮೊದಲ ಗೆಲುವು ದಾಖಲಿಸಿತು. ಇತ್ತ ಕೆಕೆಆರ್ ತವರಿನಲ್ಲಿ ತಾನಾಡಿದ ಮೊದಲೆರಡು ಪಂದ್ಯಗಳಲ್ಲಿಯೂ ಸೋಲನನುಭವಿಸಿತು.

ಇಲ್ಲಿನ ಈಡೆನ್ ಗಾರ್ಡನ್ ಮೈದಾನದಲ್ಲಿ ಗುರುವಾರ ನಡೆದ 19ನೇ ಆವೃತ್ತಿಯ ಐಪಿಎಲ್–2026ರ 6ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಎಸ್‌ಆರ್‌ಹೆಚ್‌ಗೆ ಉತ್ತಮ ಆರಂಭ ದೊರೆಯಿತು. ಆರಂಭಿಕ ಬ್ಯಾಟರ್‌ಗಳಾದ ಟ್ರಾವಿಸ್ ಹೆಡ್ 21 ಎಸೆತಗಳಲ್ಲಿ 46 ಹಾಗೂ ಅಭಿಷೇಕ್ ಶರ್ಮಾ 21 ಎಸೆತಗಳಲ್ಲಿ 48 ರನ್ ಗಳಿಸಿ ಮೊದಲ ವಿಕೆಟ್‌ಗೆ 82 ರನ್‌ಗಳ ಜೊತೆಯಾಟ ನೀಡಿದರು.

ಬಳಿಕ ಬಂದ ನಾಯಕ ಇಶಾನ್ ಕಿಶನ್ 14ರನ್, ಅನಿಕೇತ್ ವರ್ಮಾ 1ರನ್‌ಗೆ ವಿಕೆಟ್ ಒಪ್ಪಿಸಿ ಪೆವಿಲಿಯನ್ ಸೇರಿದರು. ಈ ವೇಳೆ ಮಧ್ಯಮ ಕ್ರಮಾಂಕದಲ್ಲಿ ಒಂದಾದ ಹೆನ್ರಿಚ್ ಕ್ಲಾಸೆನ್ ಹಾಗೂ ನಿತೀಶ್ ಕುಮಾರ್ ರೆಡ್ಡಿ ಉಪಯುಕ್ತ ಆಟವಾಡಿದರು. ಈ ಜೋಡಿ 53 ಎಸೆತಗಳಲ್ಲಿ 82 ರನ್ ಕೂಡಿಸಿದರು. ನಿತೀಶ್ ಕುಮಾರ್ ರೆಡ್ಡಿ 39 ರನ್ ಗಳಿಸಿದರೆ, ಕ್ಲಾಸೆನ್ 35 ಎಸೆತಗಳಲ್ಲಿ 4 ಬೌಂಡರಿ, 1 ಸಿಕ್ಸರ್ ಸಹಿತ 52 ರನ್ ಗಳಿಸಿದರು. ಉಳಿದಂತೆ ಸೈಲ್ ಅರೋರಾ ಗೋಲ್ಡನ್ ಡಕ್, ಶಿವಾಂಗ್ ಕುಮಾರ್ 4, ಹರ್ಷ್ ದುಬೆ ಅಜೇಯ 9 ರನ್ ಬಾರಿಸುವ ಮೂಲಕ ಎಸ್‌ಆರ್‌ಹೆಚ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 226 ರನ್ ಗಳಿಸಿತು.

ಕೆಕೆಆರ್ ಪರ ಮುಜರಬಾನಿ ಪ್ರಮುಖ 4 ವಿಕೆಟ್ ಕಬಳಿಸಿ ಮಿಂಚಿದರು. ವೈಭವ್ ಅರೋರಾ 2, ಕಾರ್ತಿಕ್ ತ್ಯಾಗಿ ಹಾಗೂ ಅಂಕುಲ್ ರಾಯ್ ತಲಾ ಒಂದೊಂದು ವಿಕೆಟ್ ಪಡೆದು ಗಮನ ಸೆಳೆದರು.

ಈ ಬೃಹತ್ ಮೊತ್ತ ಬೆನ್ನತ್ತಿದ ಕೆಕೆಆರ್‌ಗೆ ಫಿನ್ ಅಲೆನ್ ಭರ್ಜರಿ ಆರಂಭ ಒದಗಿಸಿದರು. ಮೊದಲ ಓವರ್‌ನ 5 ಎಸೆತಗಳಲ್ಲಿ ಬರೋಬ್ಬರಿ 24 ರನ್ ಚಚ್ಚಿದರು. ಕೇವಲ 7 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸರ್ ಸಹಿತ 28 ರನ್ ಗಳಿಸಿ ನಿರ್ಗಮಿಸಿದರು. ಇವರ ಬೆನ್ನಲ್ಲೆ ನಾಯಕ ಅಜಿಂಕ್ಯಾ ರಹಾನೆ 8 ರನ್‌ಗೆ ಔಟಾದರು. 2 ರನ್ ಗಳಿಸಿದ್ದ ಕ್ಯಾಮರೋನ್ ಗ್ರೀನ್ ಇಲ್ಲದ ರನ್ ಕದಿಯಲು ಹೋಗಿ ರನ್ ಔಟ್ ಆಗಿ ಪೆವಿಲಿಯನ್ ಸೇರಿದರು.

ಈ ವೇಳೆ ಏಕಾಂಗಿಯಾಗಿ ಹೋರಾಟ ನೀಡಿದ ಅಂಗ್‌ಕ್ರಿಶ್ ರಘುವಂಶಿ 29 ಎಸೆತಗಳಲ್ಲಿ 6 ಬೌಂಡರಿ, 2 ಸಿಕ್ಸರ್ ಸಹಿತ 52 ರನ್ ಗಳಿಸಿ ರನ್‌ಔಟ್ ಬಲೆಗೆ ಬಿದ್ದರು. ಇವರ ಹಿಂದೆಯೇ ಅಂಕುಲ್ ರಾಯ್ ಡಕ್‌ಔಟ್ ಆಗಿ ಹೊರ ನಡೆದರು. ಕೊನೆಯಲ್ಲಿ ಅಲ್ಪ ಹೋರಾಟ ತೋರಿದ ರಿಂಕು ಸಿಂಗ್ 25 ಎಸೆತಗಳಲ್ಲಿ 35 ರನ್ ಗಳಿಸಿ ಔಟಾದರು. ಬಳಿಕ ಮತ್ಯಾರಿಂದಲೂ ನಿರೀಕ್ಷಿತ ಆಟ ಕಂಡುಬರಲಿಲ್ಲ. ಉಳಿದಂತೆ ರಮಣ್‌ದೀಪ್ ಸಿಂಗ್ 10, ಸುನೀಲ್ ನರೈನ್ 12, ಕಾರ್ತಿಕ್ ತ್ಯಾಗಿ 5, ವರುಣ್ ಚಕ್ರವರ್ತಿ ಗೋಲ್ಡನ್ ಡಕ್ ಹಾಗೂ ವೈಭವ್ ಅರೋರಾ ಅಜೇಯ 1 ರನ್ ಗಳಿಸಿದರು.

ಅಂತಿಮವಾಗಿ ಕೆಕೆಆರ್ 16 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 161 ರನ್ ಗಳಿಸಿ 65ರನ್ ಗಳ ಭಾರೀ ಅಂತರದಿಂದ ಸೋಲೊಪ್ಪಿಕೊಂಡರು.

ಎಸ್‌ಆರ್‌ಹೆಚ್ ಪರ ಜೈದೇವ್ ಉನಾದ್ಕಟ್ ಪ್ರಮುಖ 3 ವಿಕೆಟ್ ಕಬಳಿಸಿದರು. ನಿತೀಶ್ ಕುಮಾರ್ ರೆಡ್ಡಿ ಹಾಗೂ ಇಶಾನ್ ಮಲಿಂಗಾ ತಲಾ 2 ವಿಕೆಟ್, ಹರ್ಷ್ ದುಬೆ 1 ವಿಕೆಟ್ ಪಡೆದು ಮಿಂಚಿದರು.

ಉತ್ತಮ ಆಲ್‌ರೌಂಡರ್ ಪ್ರದರ್ಶನ ನೀಡುವ ಮೂಲಕ ಎಸ್‌ಆರ್‌ಹೆಚ್ ತಂಡದ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದ ನಿತೀಶ್ ಕುಮಾರ್ ರೆಡ್ಡಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಶೇ.5ರಷ್ಟು ರಿಯಾಯಿತಿ ಕೊಡುಗೆ

ಕುಡಿಯುವ ನೀರು, ಆಸನದ ವ್ಯವಸ್ಥೆ ಸೇರಿದಂತೆ ಮೂಲ ಸೌಲಭ್ಯವನ್ನು ಕಲ್ಪಿಸಲಾಗಿದೆ.

2.31 ಲಕ್ಷ ಆಸ್ತಿ: ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2,10,770 ಅಧಿಕೃತ ಖಾತೆದಾರರು ಹಾಗೂ 20,966 ಅನಧಿಕೃತ ಖಾತೆದಾರರು ಸೇರಿದಂತೆ ಒಟ್ಟು 2,31,736 ಮಂದಿ ಆಸ್ತಿ ತೆರಿಗೆದಾರರಿದ್ದಾರೆ. ಕಳೆದ ವರ್ಷ 240 ಕೋಟಿ ರೂ. ತೆರಿಗೆ ಸಂಗ್ರಹಿಸುವ ಗುರಿ ಹೊಂದಿದ್ದ ಮೈಸೂರು ಮಹಾನಗರ ಪಾಲಿಕೆ, ವರ್ಷಾಂತ್ಯದ ವೇಳೆಗೆ ಗುರಿಗಿಂತ ಎರಡು ಕೋಟಿ ರೂ. ಹೆಚ್ಚಾಗಿ ಸಂಗ್ರಹಿಸಿತ್ತು. ಪ್ರಸಕ್ತ ಸಾಲಿನಲ್ಲಿ 265 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ಹೊಂದಿದೆ. ತೆರಿಗೆ ಸಂಗ್ರಹ ಅಭಿಯಾನದ ಮೊದಲ ದಿನವಾದ ಏ.1ರಂದು ಬ್ಯಾಂಕ್ ರಜೆಯಿದ್ದ ಕಾರಣ ಕೇವಲ ಆನ್‌ಲೈನ್ ಮೂಲಕ ತೆರಿಗೆ ಸಂಗ್ರಹಿಸಲಾಗಿದ್ದು, 5843 ತೆರಿಗೆ ದಾರರು 1,69,45,352 ರೂ. ತೆರಿಗೆ ಪಾವತಿಸಿದ್ದಾರೆ. ಎರಡನೇ ದಿನದ ತೆರಿಗೆ ಸಂಗ್ರಹದ ಮಾಹಿತಿ ಸದ್ಯ ಲಭ್ಯವಾಗಿಲ್ಲ.


ಮೈಸೂರಿನ ಶಾರದಾದೇವಿನಗರದಲ್ಲಿರುವ ಮಹಾನಗರ ಪಾಲಿಕೆಯ ವಲಯ ಕಚೇರಿ–3ರಲ್ಲಿ ತೆರಿಗೆ ಪಾವತಿದಾರರೊಂದಿಗೆ ಕಂದಾಯ ವಿಭಾಗದ ಉಪ ಆಯುಕ್ತ ಸೋಮಶೇಖರ್ ಜಿಗಣಿ ಹಾಗೂ ಸಹಾಯಕ ಆಯುಕ್ತ ಸಂದೀಪ್ ಅವರು ಸಮಾಲೋಚಿಸಿದರು.

ಮೂರು ಹಂತದಲ್ಲಿ ತೆರಿಗೆ ಸಂಗ್ರಹ: ಆಸ್ತಿ ತೆರಿಗೆ ಮೊತ್ತದಲ್ಲಿ ಶೇ.5ರಷ್ಟು ರಿಯಾಯಿತಿ ಸೌಲಭ್ಯಕ್ಕೆ ಏ.30 ಕೊನೆ ದಿನವಾಗಿದೆ. ಆ ನಂತರ ಮೇ ತಿಂಗಳಿಂದ ಜೂನ್‌ವರೆಗೆ ಎರಡು ತಿಂಗಳು ನಿಗಧಿತ ತೆರಿಗೆ ಪಾವತಿಸಬಹುದು. ಈ ಅವಧಿಯಲ್ಲೂ ತೆರಿಗೆ ಪಾವತಿಸದಿದ್ದರೆ ಪಾಲಿಕೆ ದಂಡಾಸ್ತ್ರ ಪ್ರಯೋಗಿಸಲಿದೆ. ಜುಲೈ ತಿಂಗಳಿಂದ ಪ್ರತಿ ತಿಂಗಳಿಗೂ ಆಸ್ತಿ ತೆರಿಗೆ ಮೇಲೆ ಶೇ.2ರಷ್ಟು ದಂಡ ವಿಧಿಸಿ, ಕಟ್ಟುನಿಟ್ಟಾಗಿ ಸಂಗ್ರಹಿಸಲು ಕ್ರಮ ಕೈಗೊಂಡಿದೆ.

ಆಸ್ತಿ ಮಾಲೀಕರಿಂದ ಉತ್ತಮ ಸ್ಪಂದನೆ

ಮೈಸೂರು ಮಹಾನಗರ ಪಾಲಿಕೆ ಎಂದಿನಂತೆ ಏಪ್ರಿಲ್‌ನಲ್ಲಿ ಆಸ್ತಿ ತೆರಿಗೆಯಲ್ಲಿ ಶೇ.5ರಷ್ಟು ರಿಯಾಯಿತಿ ನೀಡುವ ಅಭಿಯಾನವನ್ನು ನಡೆಸಲಾಗುತ್ತಿದೆ. ಆಸ್ತಿ ಮಾಲೀಕರು ಏ.30ರವರೆಗೂ ಈ ಸೌಲಭ್ಯ ಪಡೆದುಕೊಳ್ಳಬಹುದು. ಎಲ್ಲಾ ವಲಯ ಕಚೇರಿಗಳಲ್ಲೂ ಹೆಚ್ಚುವರಿ ಕೌಂಟರ್ ತೆರೆದು, ತೆರಿಗೆ ಸಂಗ್ರಹಿಸಲಾಗುತ್ತಿದೆ. ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ರಜಾ ದಿನ ಹೊರತುಪಡಿಸಿ ಪ್ರತಿದಿನ ಬೆಳಗ್ಗೆ 10 ರಿಂದ ಸಂಜೆ 4 ಗಂಟೆವರೆಗೆ ತೆರಿಗೆ ಪಾವತಿಸಬಹುದು. ಮೇ ಮತ್ತು ಜೂನ್‌ನಲ್ಲಿ ಯಾವುದೇ ರಿಯಾಯಿತಿ ಇರುವುದಿಲ್ಲ. ಜುಲೈನಿಂದ ಪ್ರತಿ ತಿಂಗಳಿಗೆ ಶೇ.2ರಷ್ಟು ದಂಡದೊಂದಿಗೆ ತೆರಿಗೆ ಪಾವತಿಸಬೇಕು.

- ಸೋಮಶೇಖರ್ ಜಿಗಣಿ, ಉಪ ಆಯುಕ್ತರು, ಕಂದಾಯ ವಿಭಾಗ, ಮೈಸೂರು ಮಹಾನಗರ ಪಾಲಿಕೆ

ನಾಳೆ ಹಿರಿಯ ವಿದ್ಯಾರ್ಥಿಗಳ ಸಭೆ

ಮೈಸೂರು, ಏ.2– ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸ್ನಾತಕೋತ್ತರ ವಿಭಾಗಕ್ಕೆ ನೂರು ವರ್ಷಗಳು ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಹಿರಿಯ ವಿದ್ಯಾರ್ಥಿಗಳ ವೇದಿಕೆ ಅಸ್ತಿತ್ವಕ್ಕೆ ತರುವ ಉದ್ದೇಶದಿಂದ ಏ.4 ರಂದು ಬೆಳಗ್ಗೆ 11 ಗಂಟೆಗೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ ಹಿರಿಯ ವಿದ್ಯಾರ್ಥಿಗಳ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಸಭೆಗೆ ಸಂಸ್ಥೆಯ ಎಲ್ಲಾ ಹಿರಿಯ–ಕಿರಿಯ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಆಗಮಿಸಿ ಹಿರಿಯ ವಿದ್ಯಾರ್ಥಿಗಳ ಸಂಘ ಸ್ಥಾಪನೆ ಹಾಗೂ ಆಡಳಿತ ಮಂಡಳಿ ರಚನೆ ಬಗ್ಗೆ ತಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಬೇಕೆಂದು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಾಳಿ ಮಾಡಿದ ಅಮೆರಿಕಕ್ಕೆ 'ಅವಮಾನ'ವಾಗುವವರೆಗೂ ಯುದ್ಧ ನಿಲ್ಲದು

ಟ್ರಂಪ್ ಹೇಳಿಕೆ ತಳ್ಳಿಹಾಕಿದ ಇರಾನ್ ಸೇನೆ!





ಟೆಹ್ರಾನ್, ಏ.2– ಅಮೆರಿಕಕ್ಕೆ ಶಾಶ್ವತ ಅವಮಾನ, ವಿಷಾದ ಮತ್ತು ಶರಣಾಗತಿ ಆಗುವವರೆಗೂ ಸಂಘರ್ಷ ಮುಂದು ವರಿಯುತ್ತದೆ ಎಂದು ಇರಾನ್ ಹೇಳಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ನೀಡಿದ ಹೇಳಿಕೆಗಳಿಗೆ ಗುರುವಾರ ಹೀಗೆ ಬಲವಾದ ಪ್ರತಿಕ್ರಿಯೆ ನೀಡಿರುವ ಇರಾನ್ ಸೇನೆ, ಈಸಂಘರ್ಷ ಮುಂದು ವರೆಸುವುದಾಗಿ ಸ್ಪಷ್ಟಪಡಿಸಿದೆ.

ಖತಮ್ ಅಲ್–ಅನ್ಬಿಯಾ ಕೇಂದ್ರ ಪ್ರಧಾನ ಕಚೇರಿ ವಕ್ತಾರರು ಬಿಡುಗಡೆ ಮಾಡಿದ ಹೇಳಿಕೆ ಪ್ರಕಾರ, ಇರಾನ್‌ನ ಮಿಲಿಟರಿ ಮೂಲಸೌಕರ್ಯ ಮತ್ತು ಸಾಮರ್ಥ್ಯಗಳಿಗೆ ಹಾನಿ ಮಾಡಲಾಗಿದೆ ಎಂಬ ಅಮೆರಿಕದ ಹೇಳಿಕೆಗಳನ್ನು ಇರಾನ್ ತಿರಸ್ಕರಿಸಿದ್ದು, ಇರಾನ್‌ನ ಮಿಲಿಟರಿ ಬಲದ ಬಗ್ಗೆ ಅಮೆರಿಕದ ಗುಪ್ತಚರಕ್ಕೆ ಇರುವ ಮಾಹಿತಿ ಅಪೂರ್ಣ ಎಂದು ಪ್ರತಿಪಾದಿಸಿದೆ.

ಇಸ್ಲಾಮಿಕ್ ಗಣರಾಜ್ಯದ ವಿಶಾಲ ವಾದ ಕಾರ್ಯತಂತ್ರದ ಸಾಮರ್ಥ್ಯಗಳ ಬಗ್ಗೆ ವಾಷಿಂಗ್ಟನ್‌ಗೆ ತಿಳಿದಿಲ್ಲ. ಸಂಘ ರ್ಷದ ಮಧ್ಯೆ ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ಉಡಾಯಿಸುವ ಟೆಹ್ರಾನ್‌ನ ಸಾಮರ್ಥ್ಯವನ್ನು ಮೊಟಕುಗೊಳಿಸ ಲಾಗಿದೆ ಎಂಬ ಟ್ರಂಪ್ ಹೇಳಿಕೆ ಸುಳ್ಳು ಎಂದಿದೆ

ನಮ್ಮ ಮಿಲಿಟರಿ ಶಕ್ತಿ ಮತ್ತು ಸಲಕರಣೆಗಳ ಕುರಿತು ನಿಮ್ಮ ಗುಪ್ತಚರ ಮಾಹಿತಿ ಅಪೂರ್ಣವಾಗಿದೆ. ನಮ್ಮ ಅಗಾಧ'ವಾದ ಕಾರ್ಯತಂತ್ರದ ಸಾಮರ್ಥ್ಯಗಳ ಬಗ್ಗೆ ನಿಮಗೆ ಏನೂ ತಿಳಿದಿಲ್ಲ. ನಮ್ಮ ಕ್ಷಿಪಣಿ ಉತ್ಪಾದನಾ ತಾಣಗಳು, ದೀರ್ಘ–ಶ್ರೇಣಿಯ ದಾಳಿ ಮತ್ತು ಉನ್ನತ ಶ್ರೇಣಿಯ ಡ್ರೋನ್‌ಗಳು, ಆಧುನಿಕ ವಾಯು ರಕ್ಷಣಾ ವ್ಯವಸ್ಥೆಗಳು, ಎಲೆಕ್ಟ್ರಾನಿಕ್ ವಾರ್ ಫೇರ್ ಅಥವಾ ವಿಶೇಷ ಉಪಕರಣಗಳನ್ನು ನೀವು ನಾಶಪಡಿಸಿದ್ದೀರಿ ಎಂದು ಭಾವಿಸಬೇಡಿ. ಅಂತಹ ಊಹೆಗಳು ನಿಮ್ಮನ್ನು ಇನ್ನಷ್ಟು ಆಳಕ್ಕೆ ತಳ್ಳುತ್ತವೆ. ನೀವು ದಾಳಿ ಮಾಡಿರುವ ಪ್ರದೇಶಗಳು ಅತೀ ಮುಖ್ಯ ಎಂದು ನೀವು ಭಾವಿಸುತ್ತೀರಿ; ಆದರೆ, ನಮ್ಮ ಮಿಲಿಟರಿ ಉತ್ಪಾದನೆಯು ನಿಮಗೆ ತಿಳಿದಿಲ್ಲದ ಮತ್ತು ಎಂದಿಗೂ ತಲುಪದ ಸ್ಥಳಗಳಲ್ಲಿ ನಡೆಯುತ್ತದೆ. ನಮ್ಮ ಕ್ಷಿಪಣಿ ಗಳು, ಡ್ರೋನ್‌ಗಳು ಮತ್ತು ಕಾರ್ಯ ತಂತ್ರದ ವ್ಯವಸ್ಥೆಗಳನ್ನು ಎಣಿಸಲು ಪ್ರಯತ್ನಿಸಬೇಡಿ. ನೀವು ಅದರಿಂದ ಏನನ್ನೂ ಸಾಧಿಸುವುದಿಲ್ಲ ಎಂದು ವಕ್ತಾ ರರು ಅಮೆರಿಕಕ್ಕೆ ಎಚ್ಚರಿಕೆ ನೀಡಿದ್ದಾರೆ.

ಸೆಂಟ್ರಲ್ ಖತಮ್ ಅಲ್–ಅನ್ಬಿಯಾ ಪ್ರಧಾನ ಕಚೇರಿಯು ಇರಾನ್‌ನ ಅತ್ಯುನ್ನತ ಕಾರ್ಯಾಚರಣಾ ಕಮಾಂಡ್ ಘಟಕವಾಗಿದ್ದು, ಇದು ಇರಾನಿನ ಸೈನ್ಯ ಮತ್ತು ಇಸ್ಲಾಮಿಕ್ ರೆವಲ್ಯೂಷನ್ ಗಾರ್ಡ್ಸ್ ಕಾರ್ಪ್ಸ್(IRGC) ನಡುವಿನ ಕಾರ್ಯಾಚರಣೆಗಳನ್ನು ಸಂಘಟಿಸುತ್ತದೆ. ನಮ್ಮ ಗೌರವಾನ್ವಿತ, ಪ್ರೀತಿಯ, ಮುಸ್ಲಿಂ ರಾಷ್ಟ್ರದ ವಿರುದ್ಧ ನೀವು ಪ್ರಾರಂಭಿಸಿದ ಆಕ್ರಮಣಕ್ಕೆ ತಕ್ಕ ಬೆಲೆ ತೆರಲೇಬೇಕು. ನೀವು ಶಾಶ್ವತ ಅವಮಾನ, ವಿಷಾದ ಮತ್ತು ಶರಣಾಗತಿಯನ್ನು ಎದುರಿ ಸುವವರೆಗೂ ಈ ಯುದ್ಧ ಮುಂದು ವರಿಯುತ್ತದೆ. ನೀವು ಈಗಾಗಲೇ ನಡೆಸಿರುವ ದಾಳಿ ಪರಿಣಾಮವಾಗಿ ನಮ್ಮಿಂದ ಇನ್ನಷ್ಟು ಹೀನಾಯ ಮತ್ತು ವಿನಾಶಕಾರಿ ದಾಳಿಗಳನ್ನು ನಿರೀಕ್ಷಿಸಿ ಎಂದು ಹೇಳಿರು ವುದಾಗಿ ಪ್ರೆಸ್ ಟಿವಿ ಉಲ್ಲೇಖಿಸಿದೆ.

ಫೆಬ್ರವರಿ 28ರಂದು ಇರಾನ್ ವಿರುದ್ಧ ಇಸ್ರೇಲ್ ಮತ್ತು ಅಮೆರಿಕದ ಯುದ್ಧ ಪ್ರಾರಂಭವಾಯಿತು. ಬುಧವಾರ ಸಂಜೆ ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಟ್ರಂಪ್, ಇಸ್ಲಾಮಿಕ್ ಗಣರಾಜ್ಯದ ವಿರುದ್ಧ ನಡೆಸಿದ 'ನಿರ್ಣಾಯಕ ದಾಳಿಗಾಗಿ ಅಮೆ ರಿಕನ್ ಮಿಲಿಟರಿ ಯನ್ನು ಹೊಗಳಿದರು.

ಇರಾನ್‌ನ ನೌಕಾಪಡೆ ನಾಶವಾಗಿದೆ, ಅದರ ವಾಯುಪಡೆ ಹಾಳಾಗಿದೆ ಮತ್ತು ಅದರ ನಾಯಕರು, ಅವರಲ್ಲಿ ಹೆಚ್ಚಿನ ವರು ಭಯೋತ್ಪಾದಕರು, ಈಗ ಸತ್ತಿದ್ದಾರೆ. ದೇಶದ ವಿಶಾಲ ಮಿಲಿಟರಿ ಮೂಲ ಸೌಕರ್ಯವನ್ನು ತೀವ್ರವಾಗಿ ಕಡಿಮೆ ಮಾಡಲಾಗಿದೆ. ಅಲ್ಲದೆ, ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ಉಡಾಯಿಸುವ ಸಾಮರ್ಥ್ಯ ವನ್ನು ನಾಟಕೀಯವಾಗಿ ಮೊಟಕುಗೊಳಿಸ ಲಾಗಿದೆ. ಶಸ್ತ್ರಾಸ್ತ್ರ ಕಾರ್ಖಾನೆಗಳು ಮತ್ತು ರಾಕೆಟ್ ಲಾಂಚರ್‌ಗಳನ್ನು ತುಂಡು ತುಂಡಾಗಿ ಮಾಡಲಾಗುತ್ತಿದೆ. ಅವುಗಳಲ್ಲಿ ಕೆಲವೇ ಉಳಿದಿವೆ ಮತ್ತು ಯುನೈಟೆಡ್ ಸ್ಟೇಟ್ಸ್ ಹಿಂದೆಂದಿಗಿಂತಲೂ ಈಗ ದೊಡ್ಡ ಗೆಲುವು ಸಾಧಿಸುತ್ತಿದೆ. ಈ ಅಭಿಯಾನ ಕೊನೆಗೊಳ್ಳುವ ಹಂತದಲ್ಲಿದೆ ಎಂದು ಹೇಳಿಕೊಂಡರು.

ನಮ್ಮ ಭಾರತೀಯ ಸ್ನೇಹಿತರು ಸುರಕ್ಷಿತ, ಚಿಂತಿಸಬೇಡಿ; ಇರಾನ್ ಅಭಯ

ನವದೆಹಲಿ: ಪಶ್ಚಿಮ ಏಷ್ಯಾದಲ್ಲಿ ಯುದ್ಧ ಆರಂಭವಾಗಿ 34ನೇ ದಿನದಂದು ಇರಾನ್ ಭಾರತಕ್ಕೆ ಮಹತ್ವದ ಸಂದೇಶವೊಂದನ್ನು ರವಾನಿಸಿದೆ.

ಪ್ರಸ್ತುತ ನೂರಾರು ಭಾರತೀಯ ನಾಗರಿಕರು ಇರಾನ್ ಮತ್ತು ಪರ್ಷಿಯನ್ ಕೊಲ್ಲಿಯಲ್ಲಿದ್ದಾರೆ. ಈ ನಡುವೆ ಇರಾನ್ ನೀಡಿರುವ ಸಂದೇಶ ಸಮಾಧಾನ ತಂದಿದೆ.

ಹೋರ್ಮುಜ್ ಜಲಸಂಧಿಯಲ್ಲಿ ಏನಾಗುತ್ತದೆ ಎಂಬುದನ್ನು ಇರಾನ್ ಮತ್ತು ಓಮನ್ ನಿರ್ಧರಿಸುತ್ತಾರೆ, ಬೇರೆ ಯಾರೂ ಅಲ್ಲ ಎಂದು ಅಮೆರಿಕ ಮತ್ತು ಅದರ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಎದಿರೇಟು ನೀಡುವುದರ ಜೊತೆಗೆ ತನ್ನ ಭಾರತೀಯ ಸ್ನೇಹಿತರು ಸುರಕ್ಷಿತ ಕೈಯಲ್ಲಿದ್ದಾರೆ, ಅವರ ಬಗ್ಗೆ ಚಿಂತಿಸುವ ಅಗತ್ಯವಿಲ್ಲ ಎಂದು ಇರಾನ್ ಹೇಳಿದೆ.

ದಕ್ಷಿಣ ಆಫ್ರಿಕಾದಲ್ಲಿರುವ ಇರಾನಿನ ರಾಯಭಾರ ಕಚೇರಿಯು 'ಎಕ್ಸ್' ಹ್ಯಾಂಡಲ್‌ನಲ್ಲಿ ಪೋಸ್ಟ್‌ಗೆ ಪ್ರತಿಕ್ರಿಯಿಸಿದ ಭಾರತದಲ್ಲಿರುವ ಇರಾನಿನ ರಾಯಭಾರ ಕಚೇರಿಯು ಹೀಗೆ ಹೇಳಿದೆ. ಇರಾನ್ ಈ ವಿಶ್ವಾಸದ ಸಂದೇಶವನ್ನು ಕಣ್ಣು ಮಿಟುಕಿಸುವ ಎಮೋಜಿಯೊಂದಿಗೆ ಸೇರಿಸಿದೆ.

ದಕ್ಷಿಣ ಆಫ್ರಿಕಾದಲ್ಲಿರುವ ಇರಾನಿನ ರಾಯಭಾರ ಕಚೇರಿಯ ಪೋಸ್ಟ್‌ನಲ್ಲಿ, ಇರಾನ್ ಮತ್ತು ಓಮನ್ ಮಾತ್ರ ಹೋರ್ಮುಜ್ ಜಲಸಂಧಿಯ ಭವಿಷ್ಯವನ್ನು ನಿರ್ಧರಿಸುತ್ತವೆ. ನೀವು ಸುರಕ್ಷಿತ ಕೈಯಲ್ಲಿದ್ದೀರಿ, ಚಿಂತಿಸಬೇಡಿ ಎಂದು ಬರೆಯಲಾಗಿದೆ. ಇದರೊಂದಿಗೆ ಕಪ್ಪು ಕನ್ನಡಕದೊಂದಿಗೆ ನಗುತ್ತಿರುವ ಎಮೋಜಿ ಇದೆ. ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್, ಹಾರ್ಮುಜ್ ಜಲಸಂಧಿಯು ಸಂಪೂರ್ಣ ನಿರ್ಣಾಯಕ ನಿಯಂತ್ರಣದಲ್ಲಿವೆ ಎಂದು ಹೇಳಿದ ನಂತರ ಇರಾನ್ ರಾಯಭಾರ ಕಚೇರಿಗಳಿಂದ ಈ ಹೇಳಿಕೆಗಳು ಬಂದಿವೆ.

ಮಾನಸಿಕ, ದೈಹಿಕ ಹಿಂಸೆ ಆರೋಪ

ಕಾನೂನು ವಿದ್ಯಾರ್ಥಿನಿ ಪೊಲೀಸರಿಗೆ ದೂರು; ಸ್ನೇಹಿತ, ಆತನ ತಾಯಿ ವಿರುದ್ಧ ಎಫ್‌ಐಆರ್

ಮೈಸೂರು, ಏ.2(ಜಿಎ)– ನನ್ನ ಮುಗ್ಧತೆ ಯನ್ನೇ ಅಸ್ತ್ರವಾಗಿಸಿಕೊಂಡು 8 ವರ್ಷ ಗಳಿಂದ ನಿರಂತರವಾಗಿ ಮಾನಸಿಕ ಹಾಗೂ ದೈಹಿಕವಾಗಿ ಚಿತ್ರಹಿಂಸೆ ನೀಡುವುದರ ಜೊತೆಗೆ ಸಾಲದ ಸುಳಿಗೆ ಸಿಲುಕಿಸಿ ರುವುದಾಗಿ ಕಾನೂನು ವಿದ್ಯಾರ್ಥಿನಿ ಯೊಬ್ಬರು, ತನ್ನ ಸ್ನೇಹಿತ ಹಾಗೂ ಆತನ ತಾಯಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಮೈಸೂರಿನ ಕಾನೂನು ಕಾಲೇಜೊಂದರ ಎಲ್.ಎಲ್.ಎಂ ವಿದ್ಯಾರ್ಥಿನಿ ನಯನಾ, ತಾವು ಎಲ್‌ಎಲ್‌ಬಿಯಲ್ಲಿದ್ದಾಗ ಪರಿ ಚಯವಾಗಿದ್ದ ಪ್ರದೀಪ್ ಸೋಲೆಮಾನ್ ಹಾಗೂ ಆತನ ತಾಯಿ ಕಲಾವತಿ ವಿರುದ್ಧ ಮೈಸೂರಿನ ಕೃಷ್ಣರಾಜ ಪೊಲೀಸ್ ಠಾಣೆಗೆ ಸುದೀರ್ಘ ದೂರು ನೀಡಿದ್ದು, ತಮ್ಮಿಂದ ಕಸಿದುಕೊಂಡಿರುವ ನಾಲ್ಕು ಖಾಲಿ ಚೆಕ್‌ಗಳು, 80 ಗ್ರಾಂ ಚಿನ್ನಾ ಭರಣ, 4 ಲಕ್ಷ ನಗದು, ನನ್ನ ಹೆಸರಿನಲ್ಲಿ ಸಾಲ ಪಡೆದು ಖರೀದಿಸಿರುವ ಬುಲೆಟ್ ಬೈಕ್, ಮೊಬೈಲ್ ವಾಪಸ್ ಕೊಡಿಸಿ, ರಕ್ಷಣೆ ನೀಡು ವಂತೆ ಕೋರಿದ್ದಾರೆ. ಈ ಸಂಬಂಧ ದೂರಿ ನನ್ವಯ ಪೊಲೀಸರು ಪ್ರಕರಣ ದಾಖಲಿಸಿ ಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಎಲ್‌ಎಲ್‌ಬಿ ಓದುವಾಗ ಸ್ನೇಹಿತೆ ಯೊಬ್ಬಳ ಮೂಲಕ ಮೂರನೇ ವರ್ಷದ ಕಾನೂನು ವಿದ್ಯಾರ್ಥಿಯಾಗಿದ್ದ ಪ್ರದೀಪ್ ಸೋಲೆಮಾನ್ ಪರಿಚಯವಾಯಿತು. ಬಳಿಕ ಸಾತಗಳ್ಳಿ ಬಸ್ ನಿಲ್ದಾಣದ ಬಳಿ ಜೆರಾಕ್ಸ್ ಅಂಗಡಿ ನಡೆಸುತ್ತಿದ್ದ ಪ್ರದೀಪ್ ತಾಯಿ ಕಲಾವತಿಯವರೂ ಪರಿಚಯ ವಾದರು. ಇಬ್ಬರೂ ತುಂಬಾ ಆತ್ಮೀಯ ರಾಗಿ, ತುಂಬಾ ಒಳ್ಳೆಯವರಂತೆ ನಡೆದು ಕೊಂಡರು. ಬಳಿಕ ಪ್ರದೀಪ್ ತಂದೆ ಜೋಸೆಫ್ ದೊಡ್ಡ ವಕೀಲರೆಂದು ಹೇಳಿಕೊಂಡು ದೇವಸ್ಥಾನವೊಂದರ ವಿಚಾರದಲ್ಲಿ ಕೇಸ್ ಗೆದ್ದುಕೊಡುವುದಾಗಿ ನಮ್ಮ ತಂದೆಯಿಂದ 5 ಲಕ್ಷ ರೂ. ಪಡೆದು ಮೋಸ ಮಾಡಿದರು. ಕೊರೊನಾ ವೇಳೆ ಅವರು ತೀರಿಹೋದ ಬಳಿಕ ಅವರ ಪತ್ನಿ ಹಾಗೂ ಪುತ್ರ ಸಬೂಬು ಹೇಳಿ ದರೆಂದು ನಯನಾ ದೂರಿನಲ್ಲಿ ತಿಳಿಸಿದ್ದಾರೆ.

ನನ್ನ ಮುಗ್ಧತೆ ದುರ್ಬಳಕೆ ಮಾಡಿ ಕೊಂಡು ನನ್ನ ಫೋಟೋವನ್ನು ಎಡಿಟ್ ಮಾಡಿ ಬೆದರಿಸಿ, ಮಗ ಹಾಗೂ ತಾಯಿ ನನ್ನನ್ನು ನಿರಂತರವಾಗಿ ಹಿಂಸಿಸಿದ್ದಾರೆ. ನಯವಾಗಿ ನನ್ನಿಂದ ಖಾಲಿ ಚೆಕ್‌ಗಳನ್ನು ಪಡೆದು, ಓವೆನ್, ಮೊಬೈಲ್ ಹಾಗೂ ಬುಲೆಟ್ ಬೈಕ್ ಅನ್ನು ಖರೀದಿಸಿ, ನಾನು ಇಎಂಐ ಪಾವತಿ ಸುವಂತೆ ಮಾಡಿದರು. ಬೈಕ್ ಕೊಳ್ಳು ವಾಗ ನಾನು ಅವರ ಕಚೇರಿಯಲ್ಲೇ ಕೆಲಸ ಮಾಡುತ್ತಿದ್ದು, 55 ಸಾವಿರ ಸಂಬಳ ಪಡೆಯುವಂತೆ ನಕಲಿ ದಾಖಲೆ ಸೃಷ್ಟಿಸಿ ಕೊಂಡರು. ಅದರಲ್ಲಿ ನನ್ನನ್ನು ವಿವಾಹಿತೆ ಎಂದು ಧರ್ಮ ಕ್ರಿಶ್ಚಿಯನ್ ಎಂದು ನಮೂ ದಿಸಿದ್ದರು. ಇದನ್ನು ಪ್ರಶ್ನಿಸಿದ್ದಕ್ಕೆ ಬೆದರಿಕೆ ಹಾಕಿದರು. ಚರ್ಚ್‌ಗೆ ಕರೆದೊಯ್ದು ಕುಂಕುಮ ತೆಗೆಸಿ, ಇನ್ನು ಮುಂದೆ ಹಚ್ಚದಂತೆ ಬೆದರಿಸಿ ದರು. ಈ ಎಲ್ಲಾ ವಿಚಾರ ಮನೆಯವರಿಗೆ ತಿಳಿದರೆ ತಂದೆ–ತಾಯಿ ಪ್ರಾಣ ಕಳೆದು ಕೊಳ್ಳುತ್ತಾರೆಂಬ ಆತಂಕದಲ್ಲಿ ನಾನು ಯಾರಿಗೂ ಹೇಳಿರಲಿಲ್ಲ ಎಂದು ವಿವರಿಸಿದ್ದಾರೆ

ಸಾಲ ವಸೂಲಿಗೆ ಬ್ಯಾಂಕ್ ಏಜೆಂಟ್ ಗಳು ಮನೆ ಬಳಿ ಬಂದು ಒತ್ತಾಯಿ ಸುತ್ತಿದ್ದ ಕಾರಣ ತಂದೆ–ತಾಯಿಗೆ ಅನಿವಾರ್ಯ ವಾಗಿ ವಿಷಯ ತಿಳಿಸಿದೆ. ಬಳಿಕ ನಮ್ಮ ತಂದೆ ಪ್ರದೀಪ್ ಹಾಗೂ ಆತನ ತಾಯಿ ಬಳಿ ಹೋಗಿ ಖಾಲಿ ಚೆಕ್‌ಗಳು, ಹಣವನ್ನು ವಾಪಸ್ ನೀಡುವಂತೆ ಒತ್ತಾಯಿಸಿದರು. ಕಾಲೇಜಿನ ಬಳಿ ಬಂದು ಮಾತನಾಡಲೆಂದು ಕರೆಸಿ ಕೊಂಡು ನನ್ನ ಮೇಲೆ ಹಲ್ಲೆ ನಡೆಸಿದರು. ನಿನ್ನ ಜೀವನವನ್ನೇ ಹಾಳು ಮಾಡುತ್ತೇನೆ ಎಂದು ಬೆದರಿಕೆ ಹಾಕಿದರು ಎಂದು ದೂರಿನಲ್ಲಿ ನಯನಾ ಆರೋಪಿಸಿದ್ದಾರೆ.

ಏ.12ಕ್ಕೆ ಅದ್ವೈತ ಜಾಗೃತಿ ಜ್ಯೋತಿ ರಥಯಾತ್ರೆ; ಸಾಧಕರಿಗೆ ಪ್ರಶಸ್ತಿ ಪ್ರದಾನ

ಮೈಸೂರು, ಏ.2(ಎಂಟಿವೈ)–ಪಾರ ಮಾರ್ಥ ಅದ್ವೈತ ಆಧ್ಯಾತ್ಮ ಸಿದ್ಧಿ ಮಹಾ ವಿದ್ಯಾಲಯದ ವತಿಯಿಂದ ಏ.12 ರಂದು ಬೆಳಗ್ಗೆ 8ಕ್ಕೆ ಚಾಮುಂಡಿಬೆಟ್ಟದಲ್ಲಿ ಅದ್ವೈತ ಜಾಗೃತಿ ಜ್ಯೋತಿ ರಥಯಾತ್ರೆ ಹಮ್ಮಿ ಕೊಂಡಿದ್ದು, ಅಂದು ಸಂಜೆ ಜಗನ್ಮೋಹನ ಅರಮನೆಯಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವವರಿಗೆ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ಪಾರಮಾರ್ಥ ಅದ್ವೈತ ಆಧ್ಯಾತ್ಮ ಸಿದ್ಧಿ ಮಹಾ ವಿದ್ಯಾಲಯದ ಸಂಸ್ಥಾಪಕ ಅಧ್ಯಕ್ಷ ಕಿರಣ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾರಮಾರ್ಥ ಅದ್ವೈತ ಆಧ್ಯಾತ್ಮ ಸಿದ್ಧಿ ಮಹಾ ವಿದ್ಯಾಲಯ ಮೈಸೂರಲ್ಲಿ ರಥಯಾತ್ರೆ ನಡೆಸಲು ಉದ್ದೇಶಿಸಲಾಗಿದ್ದು, ಏ.12ರಂದು ಬೆಳಗ್ಗೆ 8 ಗಂಟೆಗೆ ಚಾಮುಂಡಿ ಬೆಟ್ಟದಲ್ಲಿ ಅದ್ವೈತ ಜಾಗೃತಿ ಜ್ಯೋತಿ ರಥಕ್ಕೆ ಚಾಮುಂಡೇಶ್ವರಿ ದೇವಾ ಲಯದ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ಚಾಲನೆ ನೀಡಲಿದ್ದಾರೆ.

ಬಳಿಕ ಮೈಸೂರಿನ ವಿವಿಧ ರಸ್ತೆಗಳಲ್ಲಿ ಸಂಚರಿಸಲಿರುವ ರಥಯಾತ್ರೆ ಜಗನ್ಮೋಹನ ಅರಮನೆ ಸಭಾಂಗಣ ತಲುಪಲಿದೆ. ಬಳಿಕ ಸಂಜೆ 6.30ಕ್ಕೆ ಜಗನ್ಮೋಹನ ಅರಮನೆ ಯಲ್ಲಿ ಸಭಾ ಕಾರ್ಯಕ್ರಮ ಜರುಗಲಿದ್ದು, ಬೆಳಗಾವಿ ಹುಕ್ಕೇರಿ ಹಿರೇಮಠದ ಶ್ರೀ ಚಂದ್ರ ಶೇಖರ ಶಿವಾಚಾರ್ಯ ಸ್ವಾಮೀಜಿ, ತಿ.ನರಸೀ ಪುರದ ಹಲವಾರು ಮಠದ ಶ್ರೀ ಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ, ಬೇಬಿಮಠದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಕಾಳಿ ಮಠದ ಶ್ರೀ ರಿಷಿಕುಮಾರ ಸ್ವಾಮೀಜಿ, ಸರ್ವ ಧರ್ಮ ಸಮನ್ವಯ ಸೌಹಾರ್ದ ಪೀಠದ ಡಾ. ವಿಜಯಾನಂದ ಗುರೂಜಿ ಸಾನಿಧ್ಯ ವಹಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಸಂಸದ ಯದು ವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ತನ್ವೀರ್ ಸೇಠ್, ಮಾಜಿ ಶಾಸಕ ನೆ.ಲ.ನರೇಂದ್ರ ಬಾಬು, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರು ವವರಿಗೆ ವಿವಿಧ ಪ್ರಶಸ್ತಿ ವಿತರಿಸಲಾಗು ತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕೆ.ಆರ್.ರಾಜೀವ್ ಲೋಚನ್, ಸಚ್ಚಿದಾನಂದ ತ್ರಿಪಾಠಿ, ಶಿವಕುಮಾರ್, ಗಂಗಾಧರಯ್ಯ, ಚಿತ್ರಾ ಸುಬ್ಬಯ್ಯ, ವಿಶ್ವನಾಥ್ ಇದ್ದರು.

ಏ.5, ಸಿಗ್ಮಾ ಆಸ್ಪತ್ರೆಯಲ್ಲಿ ಉಚಿತ ಕಿಡ್ನಿ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಏ.2–ಸರಸ್ವತಿಪುರಂನಲ್ಲಿರುವ ಸಿಗ್ಮಾ ಆಸ್ಪತ್ರೆ ಯಲ್ಲಿ ಡಾ. ಕೆ.ಎಂ.ಮಾದಪ್ಪ ನೇತೃತ್ವದಲ್ಲಿ ವಿಶ್ವ ಕಿಡ್ನಿ ದಿನಾಚರಣೆ ಪ್ರಯುಕ್ತ ಏ.5 (ಭಾನುವಾರ) ರಂದು ಉಚಿತ ಕಿಡ್ನಿ ಆರೋಗ್ಯ ತಪಾಸಣಾ ಶಿಬಿರವನ್ನುಬೆಳಿಗ್ಗೆ 9ರಿಂದ ಮಧ್ಯಾಹ್ನ 2ರವರೆಗೆ ಏರ್ಪಡಿಸಲಾಗಿದೆ.

ತಜ್ಞ ವೈದ್ಯರಿಂದ ಸಮಾಲೋಚನೆ, ಬಿಪಿ, ಶುಗರ್, ಮೂತ್ರ ಪರೀಕ್ಷೆ ಅಗತ್ಯವಿದ್ದಲ್ಲಿ ಹಿಮೋಗ್ಲೋಬಿನ್, ಕ್ರಿಯಾಟಿನೈನ್, ಕಿಡ್ನಿ ಅಲ್ಟ್ರಾ ಸೌಂಡ್ ಸ್ಕ್ಯಾನ್ ಉಚಿತ ವಾಗಿ ಮಾಡಲಾಗುತ್ತದೆ. ನಿಮಗೇನಾದರೂ ಹೊಟ್ಟೆ ನೋವು, ಸೊಂಟನೋವು, ಬೆನ್ನುನೋವು, ಉರಿ ಮೂತ್ರ ಅಥವಾ ಮೂತ್ರದಲ್ಲಿ ರಕ್ತ, ಮೂತ್ರ ವಿಸರ್ಜಿ ಸಲು ಕಷ್ಟಕರವಾಗುವುದು, ಕಿಡ್ನಿಯಲ್ಲಿನ ಕಲ್ಲುಗಳು, ಮುಖ ಹಾಗೂ ಕಾಲುಗಳ ಊತ, ಅಧಿಕ ರಕ್ತ ಒತ್ತಡ, ಅನಿಯಂತ್ರಿತ ಡಯಾಬಿಟೀಸ್, ಪುರುಷ –ಮಹಿಳೆಯರ ಮೂತ್ರನಾಳದ ಸೋಂಕು, ಕಿಡ್ನಿ ಹಾಗೂ ಮೂತ್ರ ರೋಗ ಸಂಬಂಧಿತ ಸಮಸ್ಯೆಗಳಿದ್ದರೆ ಉಚಿತ ಆಪ್ತ ಸಮಾ ಲೋಚನೆ ಪಡೆಯಬಹುದು. ಆಸಕ್ತರು ಶಿಬಿರಕ್ಕೆ ಹೆಸರು ನೋಂದಾಯಿಸಲು ಮೊ.ನಂ.: 9108028661, 7204318707 ಅನ್ನು ಸಂಪರ್ಕಿಸಲು ಕೋರಲಾಗಿದೆ.

ಮಂಡ್ಯದಲ್ಲಿ ಏ.5ಕ್ಕೆ ಲಯನ್ಸ್ ಜಿಲ್ಲಾ ಮಹಾ ಸಮ್ಮೇಳನ


ಮೈಸೂರು,ಏ.2(ಎಂಟಿವೈ)– ಮಂಡ್ಯದ ಅಮರಾವತಿ ಹೋಟೆಲ್ ಸಭಾಂಗಣ ದಲ್ಲಿ ಏ.5ರಂದು ಬೆಳಗ್ಗೆ 8ಕ್ಕೆ ಲಯನ್ಸ್ ಕ್ಲಬ್ ಆಫ್ ಇಂಟರ್ ನ್ಯಾಷನಲ್ ಜಿಲ್ಲಾ 317ಜಿ ವತಿಯಿಂದ 3ನೇ ಜಿಲ್ಲಾ ಮಹಾ ಸಮ್ಮೇಳನ ಆಯೋಜಿಸಲಾಗಿದೆ ಎಂದು ಸಮ್ಮೇಳನದ ಅತಿಥ್ಯ ಸಮಿತಿ ಅಧ್ಯಕ್ಷ ಲಯನ್ ಜಯಕುಮಾರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತ ನಾಡಿದ ಅವರು, 'ಸಮುದಾಯ ಸಬ ಲೀಕರಣ– ಪರಿವರ್ತನೆಯ ಶಕ್ತಿ' ಶೀರ್ಷಿಕೆಯಲ್ಲಿ ಜಿಲ್ಲಾ ಸಮ್ಮೇಳನ ನಡೆಸಲಾಗುತ್ತಿದೆ. ಸಮ್ಮೇಳನದಲ್ಲಿ ಪ್ರೇರಣಾದಾಯಕ ಭಾಷಣ, ನಾಯ ಕತ್ವ ಅಭಿವೃದ್ಧಿ ಚರ್ಚೆ, ಸೇವಾ ಕಾರ್ಯಗಳ ವಿಶ್ಲೇಷಣೆ ಮತ್ತು ಪ್ರಸ್ತುತಿ, ಸಂವಾದನಾತ್ಮಕ ಕಾರ್ಯಾಗಾರ ಜರುಗಲಿವೆ ಎಂದು ತಿಳಿಸಿದರು.

ಸಮ್ಮೇಳನದಲ್ಲಿ ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿ ದ್ದಾರೆ. ಗೌರವ ಅತಿಥಿಯಾಗಿ ಮಲ್ಟಿ ಪಲ್ ಕೌನ್ಸಿಲ್ ಛೇರ್ಮನ್ ಎಂಡಿ 317 ಲ.ಎನ್. ಮೋಹನ್‌ಕುಮಾರ್ ಭಾಗವಹಿಸಲಿದ್ದಾರೆ. ಈ ವೇಳೆ ವಿವಿಧ ಸೇವಾ ಕಾರ್ಯ ಹಮ್ಮಿಕೊಳ್ಳಲಾಗಿದೆ. ಇದು ಇತರರಿಗೂ ಮಾದರಿಯಾಗಿ, ಅವರೂ ಸಮಾಜಕ್ಕೆ ಏನಾದರೂ ಕೊಡುಗೆ ನೀಡುವಂತೆ ಪ್ರೇರೇಪಿಸುವ ಆಶಯ ದೊಂದಿಗೆ ಕಾರ್ಯಕ್ರಮ ಆಯೋಜಿಸ ಲಾಗಿದೆ. ಜಿಲ್ಲಾ ಗೌವರ್ನರ್ ಲ. ಕೆ.ಎಲ್.ರಾಜಶೇಖರ್, ಐಪಿ ಎಂಸಿಸಿ ಲ. ಡಾ.ಎನ್.ಕೃಷ್ಣೇಗೌಡ, ಹಿಂದಿನ ಜಿಲ್ಲಾ ಗೌವರ್ನರ್ ಲ. ಜಿ.ಎ.ರಮೇಶ್, ಮಾರ್ಗದರ್ಶನ ಮಾಡಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಲಯನ್ ಇಂಟರ್ ನ್ಯಾಷನಲ್ ಜಿಲ್ಲೆ 317ರ ಎನ್. ಮಹ ದೇವ್‌ಕುಮಾರ್, ಕೆ.ಡಿ. ಕಾರಿಯಪ್ಪ, ಎಂ.ವಿ.ನಂದೀಶ್ ಇನ್ನಿತರರು ಇದ್ದರು.

ಜನತೆ ಸ್ವಯಂಪ್ರೇರಣೆಯಿಂದ ಜನಗಣತಿಯಲ್ಲಿ ಪಾಲ್ಗೊಳ್ಳುವಂತೆ ಸಚಿವ ಡಾ.ಹೆಚ್‌ಸಿಎಂ ಮನವಿ

ಮೈಸೂರು, ಏ.2(ಎಂಕೆ)– ಸಂವಿಧಾನಾತ್ಮಕ ಮತ್ತು ಕಾನೂನಾತ್ಮಕ ವಾಗಿ ನಡೆಯುತ್ತಿರುವ ಜನಗಣತಿಯಲ್ಲಿ ರಾಜ್ಯದ ಜನತೆ ಸ್ವಯಂ ಪ್ರೇರಿತರಾಗಿ ಭಾಗವಹಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ನಾಗರಿಕರಲ್ಲಿ ಮನವಿ ಮಾಡಿದ್ದಾರೆ.



ದೇಶದಲ್ಲಿ 1927ರಿಂದ ಆರಂಭವಾದ ಜನಗಣತಿ ಇಲ್ಲಿವರೆಗೆ 16 ಬಾರಿ ನಡೆದಿದ್ದು, ಸ್ವಾತಂತ್ರ್ಯ ನಂತರ 10 ವರ್ಷಗಳಿಗೊಮ್ಮೆಯಂತೆ 8 ಬಾರಿ ನಡೆದಿದೆ. ಈ ಜನಗಣತಿಯು ಸಂವಿಧಾನಾತ್ಮಕ ಮತ್ತು ಕಾನೂ ನಾತ್ಮಕವಾಗಿ ನಡೆಯುವ ಪ್ರಕ್ರಿಯೆಯಾಗಿದ್ದು, ಈ ಬಾರಿ ಎರಡು ಹಂತಗಳಲ್ಲಿ ನಡೆಯಲಿದೆ. ಆನ್‌ಲೈನ್ ಮತ್ತು ಮನೆ ಮನೆ ಭೇಟಿ ಮೂಲಕ ಗಣತಿ ನಡೆಯಲಿದ್ದು, ಪ್ರತಿಯೊಬ್ಬರು ಸ್ವಯಂಪ್ರೇರಿತರಾಗಿ ಭಾಗವಹಿಸಬೇಕು ಎಂದು ಕೋರಿದ್ದಾರೆ. ಜನಗಣತಿಯಿಂದ ದೇಶದಲ್ಲಿನ ಜನಸಂಖ್ಯೆ ಮಾಹಿತಿ ಜೊತೆಗೆ ದೇಶದ ಜನರ ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿ, ಸಾಕ್ಷರತೆ ಪ್ರಮಾಣ ಸೇರಿದಂತೆ ಹಲವು ಮಾಹಿತಿಗಳು ತಿಳಿಯಲಿದ್ದು, ಮುಂದಿನ ದಿನಗಳಲ್ಲಿ ಅಂಕಿ–ಅಂಶಗಳ ಆಧಾರದ ಮೇಲೆ ಜನರ ಜೀವನ ಸುಧಾರಿಸಲು, ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲು ಅನುಕೂಲವಾಗಲಿದೆ. ಆದ್ದರಿಂದ ಜನಗಣತಿಯಲ್ಲಿ ಭಾಗಿಯಾಗಿ ಕುಟುಂಬ ಸದಸ್ಯರ ಮಾಹಿತಿ ನೀಡುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಪಚುನಾವಣೆಗೆ ನಿಯೋಜನೆ



ಮೈಸೂರು,ಏ.2–ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯ ಉಸ್ತುವಾರಿಯನ್ನಾಗಿ ಮೈಸೂರು ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗ ಘಟಕದ ಅಧ್ಯಕ್ಷ ಎನ್.ಆರ್. ನಾಗೇಶ್ ಅವರನ್ನು ಘಟಕದ ರಾಜ್ಯಾಧ್ಯಕ್ಷರೂ ಆದ ಸಚಿವ ಮಧು ಬಂಗಾರಪ್ಪ ನೇಮಿಸಿ, ಪಕ್ಷದ ಅಭ್ಯರ್ಥಿಯ ಗೆಲುವಿಗೆ ಶ್ರಮಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.4, 5ರಂದು ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು: ಭೈರವೇಶ್ವರ ವಿದ್ಯುತ್ ಮಾರ್ಗದ ತುರ್ತು ನಿರ್ವಹಣಾ ಕೆಲಸದ ನಿಮಿತ್ತ ಏ.4 ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಬೆಳವಾಡಿ, ವಿನಾಯಕ ಬಡಾವಣೆ, ಟಿ.ಹೆಚ್.ಕೆ ಬಡಾವಣೆ, ಬೆಳವಾಡಿ ಐಟಿಐ ಕಾಲೇಜು ಹಾಗೂ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ. ಹಾಗೆಯೇ ತಾಂಡ್ಯ–1, 2 ಮತ್ತು ಎನ್.ಐ.ಇ ಫೀಡರ್ ವ್ಯಾಪ್ತಿಯಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೆಲಸ ನಿಮಿತ್ತ ಏ.5ರಂದೂ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವುಮನ್ ಪಾರ್ಕ್ ಫೇಸ್ 1 & 2, ಅಡಕನಹಳ್ಳಿ, ತಾಂಡ್ಯ ಕೈಗಾರಿಕಾ ಪ್ರದೇಶ ಫೇಸ್ 1 & 2, ಕೋಚನಹಳ್ಳಿ ಕೈಗಾರಿಕಾ ಪ್ರದೇಶ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಜೆಎಸ್‌ಎಸ್ ವಿಜ್ಞಾನ, ತಂತ್ರಜ್ಞಾನ ವಿವಿಯಲ್ಲಿ ಮಹಿಳಾ ದಿನಾಚರಣೆ

ಮೈಸೂರು,ಏ.2–ಮೈಸೂರು ನಗರದ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ 2026ರ ಅಂಗ ವಾಗಿ ವಾರಪೂರ್ತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಅದರ ಉದ್ಘಾಟನಾ ಸಮಾರಂಭ ವನ್ನು ಮಾರ್ಚ್ 23ರಂದು ನಡೆಸ ಲಾಯಿತು. ಈ ಆಚರಣೆಗಳು ಮಹಿಳಾ ಸಬಲೀಕರಣ ಮತ್ತು ಲಿಂಗ ಸಮಾನತೆ ವಿಷಯದ ಮೇಲೆ ಕೇಂದ್ರೀಕೃತವಾಗಿದ್ದವು.

ಉದ್ಘಾಟನಾ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಮೈಸೂರು ಗ್ರಾಮಾಂತರ ಅಬಕಾರಿ ಇಲಾಖೆ ಉಪ ಆಯುಕ್ತೆ ಡಾ.ಮಹಾದೇವಿ ಬಾಯಿ ಆಗಮಿಸಿದ್ದರು. ಅವರು ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆ ಯರ ಬದಲಾಗುತ್ತಿರುವ ಸ್ಥಿತಿಗತಿಗಳ ಬಗ್ಗೆ ಮಾತನಾಡಿ, ಅವರ ಸಾಮಾಜಿಕ, ಶೈಕ್ಷ ಣಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು



ಮೈಸೂರು ನಗರದ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದಲ್ಲಿ ಗುರುವಾರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಖಚಿತಪಡಿಸಿಕೊಳ್ಳಲು ನಿರಂತರ ಪ್ರಯತ್ನ ಗಳ ಅಗತ್ಯವಿದೆ ಎಂದು ಹೇಳಿದರು.

ಗುಣಮಟ್ಟದ ಶಿಕ್ಷಣ, ಆರೋಗ್ಯ ಸೇವೆ ಗಳು ಮತ್ತು ಉದ್ಯೋಗಾವಕಾಶಗಳಿಗೆ ಸೀಮಿತ ಪ್ರವೇಶ ಸೇರಿದಂತೆ ಅವರು ಎದುರಿಸುತ್ತಿರುವ ಸವಾಲುಗಳ ಮೇಲೆ ಬೆಳಕು ಚೆಲ್ಲಲಿದೆ. ಸಮುದಾಯದ ಬಲ ವಾದ ಬೆಂಬಲ ವ್ಯವಸ್ಥೆಗಳು ಮತ್ತು ಪರಿ ಣಾಮಕಾರಿ ನೀತಿ ಜಾರಿಯ ಪ್ರಗತಿಯನ್ನು ಸಾಧಿಸಲು ಅತ್ಯಾವಶ್ಯಕವೆಂದು ಹೇಳಿದರು.


ಕಾರ್ಯಕ್ರಮದಲ್ಲಿ ಅಧ್ಯಾಪಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಮಹಿಳಾ ಸಬಲೀ ಕರಣಕ್ಕೆ ಬೆಂಬಲ ನೀಡುವ ಮತ್ತು ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಲಿಂಗ ಸಮಾನತೆ ಯನ್ನು ಸಾಧಿಸಲು ಒಗ್ಗಟ್ಟಿನಿಂದ ಕೆಲಸ ಮಾಡುವ ಸಂದೇಶ ಸಾರಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಜೆಎಸ್‌ಎಸ್ ಎಸ್‌ಟಿಯು ಮೈಸೂರು ಉಪ ಕುಲಪತಿ ಡಾ.ಎ.ಎನ್.ಸಂತೋಷ್ ಕುಮಾರ್ ವಹಿಸಿದ್ದರು. ಜೆಎಸ್‌ಎಸ್ ಎಸ್‌ಟಿಯು ಮೈಸೂರು ರಿಜಿಸ್ಟ್ರಾರ್ ಡಾ. ಎಸ್.ಎ.ಧನರಾಜ್, ಪ್ರಾಂಶುಪಾಲ (ಪ್ರಭಾರ) ಹಾಗೂ ಇಂಜಿನಿಯರಿಂಗ್ ಮತ್ತು ತಂತ್ರ ಜ್ಞಾನ ವಿಭಾಗದ ಡೀನ್ ಡಾ.ಸಿ.ನಟ ರಾಜು, ಮತ್ತು ಐ & ಪಿ ಇ ವಿಭಾಗದ ಪ್ರಾಧ್ಯಾಪಕಿ ಹಾಗೂ ಮುಖ್ಯಸ್ಥೆ ಡಾ. ಎಂ.ಸವಿತಾ ಇತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಕೇರಳ ಮಹಿಳೆಯರಿಗೆ ಉಚಿತ ಪ್ರಯಾಣ; ಯುಡಿಎಫ್ ಪ್ರಣಾಳಿಕೆಯಲ್ಲಿ ಘೋಷಣೆ


ಕೇರಳ: ಇಲ್ಲಿನ ವಿಧಾನಸಸಭೆ ಚುನಾವಣೆ ಸನ್ನಿಹಿತ ವಾಗಿದ್ದು, ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟವು ಕರ್ನಾ ಟಕ ಮಾದರಿಯಲ್ಲಿ ಮಹಿಳಾ ಮತದಾರರ ಓಲೈಕೆಗೆ ಹಲವು ಘೋಷಣೆಗಳನ್ನು ಮಾಡಿದೆ.



ಕಾಂಗ್ರೆಸ್ ನಾಯಕ ವಿ.ಡಿ.ಸತೀಶನ್ ಗುರುವಾರ ಪ್ರಣಾಳಿಕೆ ಬಿಡುಗಡೆ ಮಾಡಿದ್ದು, ಸರ್ಕಾರಿ ಬಸ್ಸುಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ, ಬಡ್ಡಿ ರಹಿತ ಸಾಲ, ಕೇರಳದ ಪ್ರತಿ ಕುಟುಂಬಕ್ಕೆ 25 ಲಕ್ಷ ವಿಮಾ ಯೋಜನೆ, ಸಣ್ಣ ಉದ್ಯಮಗಳಿಗೆ 5 ಲಕ್ಷ ಬಡ್ಡಿ ರಹಿತ ಸಾಲ, ಕೇರಳ ರಾಜ್ಯ ಸಾರಿಗೆಯ ಎಲ್ಲಾ ಬಸ್ಸುಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ, ಕಲ್ಯಾಣ ಪಿಂಚಣಿ ಮಾಸಿಕ 3 ಸಾವಿರ ಏರಿಕೆ, ಕಾಲೇಜು ವಿದ್ಯಾರ್ಥಿನಿ ಯರಿಗೆ ಮಾಸಿಕ 1 ಸಾವಿರ ಸಹಾಯಧನ ಸೇರಿದಂತೆ ಹಲವು ಭರವಸೆಗಳನ್ನು ನೀಡಲಾಗಿದೆ. ರಾಜ್ಯದಲ್ಲಿ ವಿಮಾನಯಾನ ಕ್ಷೇತ್ರದ ಅಭಿವೃದ್ಧಿ, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆ ಯರ ವೇತನ ಪರಿಷ್ಕರಣೆ, 100 ಕೋಟಿ ವಹಿವಾಟು ಹೊಂದಿ ರುವ ಸಣ್ಣ ಉದ್ಯಮಗಳಿಗೆ ಹಣಕಾಸಿನ ನೆರವು, ವಯನಾಡಿ ನಲ್ಲಿ ಬುಡಕಟ್ಟು ವಿವಿ ಸ್ಥಾಪಿಸುವ ಭರವಸೆಯನ್ನು ಪ್ರಣಾಳಿಕೆ ಯಲ್ಲಿ ಘೋಷಿಸಲಾಗಿದೆ. ಕೇರಳ ವಿಧಾನಸಭೆಗೆ ಏ.9ರಂದು ಮತದಾನ, ಮೇ 4ರಂದು ಮತ ಎಣಿಕೆ ನಡೆಯಲಿದೆ.

ಚಾರಣಿಗರ ಜೀವದ ಜೊತೆ ಚೆಲ್ಲಾಟ; ಕೋಟಿ ಕೋಟಿ ಹಣ ಲೂಟಿ


ಕಠ್ಮಂಡು: ವಿಶ್ವದ ಅತಿ ಎತ್ತರದ ಶಿಖರ ಮೌಂಟ್ ಎವರೆಸ್ಟ್ ಟ್ರೆಕ್ಕಿಂಗ್ ವಿಚಾರದಲ್ಲಿ ಲಕ್ಷಾಂತರ ರೂಪಾಯಿ ಇನ್ಶೂರೆನ್ಸ್ ಹಣ ಕಬಳಿಸಲು ಪೂರ್ವಯೋಜಿತ ತುರ್ತು ಪರಿಸ್ಥಿತಿ ಸೃಷ್ಟಿಸುತ್ತಿದ್ದ ಖತರ್ನಾಕ್ ಗ್ಯಾಂಗ್ ಅನ್ನು ನೇಪಾಳ ಪೊಲೀಸರು ಪತ್ತೆ ಹಚ್ಚಿದ್ದಾರೆ.



ಈ ಸಂಬಂಧ ಟ್ರೆಕ್ಕಿಂಗ್ ಏಜೆನ್ಸಿಗಳು, ಹೆಲಿಕಾಪ್ಟರ್ ಕಂಪನಿಗಳು, ಆಸ್ಪತ್ರೆ ಸಿಬ್ಬಂದಿ ಸೇರಿದಂತೆ 32 ಸದಸ್ಯರ ಗ್ಯಾಂಗ್ ವಿರುದ್ಧ ನೇಪಾಳ ಪೊಲೀಸರು ಕ್ರಮ ಕೈಗೊಂಡಿದ್ದಾರೆ. 20 ಮಿಲಿಯನ್ ಡಾಲರ್(183 ಕೋಟಿ ರೂ.ಗೂ ಹೆಚ್ಚು) ಬೃಹತ್ ಹಗರಣ ಇದಾಗಿದ್ದು, ಮೌಂಟ್ ಎವರೆಸ್ಟ್ ಚಾರಣ ಪ್ರಿಯರಿಗೆ ಆಘಾತ ಉಂಟು ಮಾಡಿದೆ ಎಂದು ಕಠ್ಮಂಡು ಪೋಸ್ಟ್ ವರದಿ ಮಾಡಿದೆ. ಟೂರಿಸ್ಟ್ ಗೈಡ್ಸ್, ಚಾರಣಿಗರ ಆಹಾರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅಡಿಗೆ ಸೋಡಾವನ್ನು ಬೆರೆಸುತ್ತಿದ್ದರು. ಪರಿಣಾಮ ಹೊಟ್ಟೆ ನೋವು, ಇನ್ನಿತರ ಜೀರ್ಣಕಾರಿ ಸಮಸ್ಯೆಗಳನ್ನು ಉಂಟಾಗುತ್ತಿದ್ದವು. ಈ ಅನಾ ರೋಗ್ಯವನ್ನು ಎತ್ತರದ ಪ್ರದೇಶಗಳಲ್ಲಿ ಕಂಡುಬರುವ 'ಆಲ್ಟಿಟ್ಯೂಡ್ ಸಿಕ್ನೆಸ್' ಎಂದು ನಂಬಿಸಿ ಪ್ರವಾಸಿಗರನ್ನು ಹೆದರಿಸುತ್ತಿದ್ದರು. ನಂತರ ಅವರಿಂದ ದೊಡ್ಡ ಮೊತ್ತದ ಹಣ ವಸೂಲಿ ಮಾಡಿ, ಅನಿವಾರ್ಯವಾಗಿ ಹೆಲಿಕಾಪ್ಟರ್ ಮೂಲಕ ರಕ್ಷಣಾ ಕಾರ್ಯಾಚರಣೆ ನಡೆಸುವಂತೆ ಮಾಡಲಾಗುತ್ತದೆ. ಈ ವಂಚನೆಯಲ್ಲಿ ಸುಮಾರು 19.69 ಮಿಲಿಯನ್ ಡಾಲರ್ ಮೊತ್ತದ ನಕಲಿ ವಿಮಾ ಕ್ಲೈಮ್‌ಗಳನ್ನು ಮಾಡಲಾಗಿದೆ ಎಂಬ ಆಘಾತಕಾರಿ ವಿಷಯ ತನಿಖೆಯಲ್ಲಿ ಬೆಳಕಿಗೆ ಬಂದಿದೆ.


ಎಸ್‌ಐಆರ್ ಅಧಿಕಾರಿಗಳಿಗೆ ಸಶಸ್ತ್ರ ಪಡೆ ಭದ್ರತೆಗೆ ಸುಪ್ರೀಂ ಸೂಚನೆ

ನವದೆಹಲಿ: ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿ ಷ್ಕರಣೆ(ಎಸ್‌ಐಆರ್) ಕಾರ್ಯ ದಲ್ಲಿ ತೊಡಗಿದ್ದ 7 ಮಂದಿ ನ್ಯಾಯಾಂಗ ಅಧಿಕಾರಿಗಳನ್ನು ಕೂಡಿಹಾಕಿದ ಘಟನೆಯನ್ನು ಗಂಭೀರವಾಗಿ ಪರಿಗಣಿಸಿರುವ ಸುಪ್ರೀಂಕೋರ್ಟ್, ಎಸ್‌ಐಆರ್ ಅಧಿಕಾರಿಗಳ ಭದ್ರತೆಗೆ ಕೇಂದ್ರ ಸಶಸ್ತ್ರ ಪಡೆಗಳನ್ನು ನಿಯೋಜಿಸುವಂತೆ ಸೂಚಿ ಸಿದೆ. ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್, ನ್ಯಾಯಮೂರ್ತಿ ಜೋಯ್ಮಲ್ಯ ಬಾಗ್ಚಿ ಮತ್ತು ನ್ಯಾಯಮೂರ್ತಿ ವಿಪಿನ್ ಪಂಚೋಲಿ ಅವರಿದ್ದ ಪೀಠವು ಘಟನೆ ಬಗ್ಗೆ ಕಳವಳ ವ್ಯಕ್ತಪಡಿಸಿ, ಸರ್ಕಾರ ಮತ್ತು ಅಧಿಕಾರಿಗಳಿಂದ ಕರ್ತವ್ಯ ಲೋಪವಾಗಿದೆ ಎಂದು ಹೇಳಿದೆ. ಈ ಘಟನೆಯು ಅಧಿಕಾರಿಗಳ ಧೈರ್ಯಗುಂದಿಸಲು ಮತ್ತು ನಡೆಯುತ್ತಿ ರುವ ಚುನಾವಣಾ ಪ್ರಕ್ರಿಯೆಯನ್ನು ತಡೆಯಲು ಮಾಡಿ ರುವ ಪೂರ್ವಯೋಜಿತ ಸಂಚಿನಂತೆ ಕಾಣುತ್ತಿದೆ ಎಂದು ನ್ಯಾಯಾಲಯ ಅಭಿಪ್ರಾಯಿಸಿದೆ. ಮಾಲ್ಡಾ ಜಿಲ್ಲೆಯಲ್ಲಿ ಎಸ್‌ಐಆರ್ ಕಾರ್ಯದಲ್ಲಿ ತೊಡಗಿದ್ದ ಮೂವರು ಮಹಿಳೆಯರು ಸೇರಿದಂತೆ 7 ಸಿಬ್ಬಂದಿಯ ಕರ್ತವ್ಯಕ್ಕೆ ಅಡ್ಡಿಪಡಿಸಿ, ಅವರನ್ನು ಕಚೇರಿಯಲ್ಲಿ ಕೂಡಿ ಹಾಕಲಾಗಿತ್ತು. ಬುಧವಾರ ತಡರಾತ್ರಿವರೆಗೂ ಅಧಿ ಕಾರಿಗಳು ಕಚೇರಿಯಲ್ಲೇ ಬಂಧಿತರಾಗಿದ್ದರು.



ಇಂಡೋನೇಷ್ಯಾದಲ್ಲಿ ಪ್ರಬಲ ಭೂಕಂಪ; ಓರ್ವ ಸಾವು, ಅಪಾರ ಹಾನಿ

ಇಂಡೋನೇಷ್ಯಾ: ಪೂರ್ವ ಇಂಡೋನೇಷ್ಯಾದಲ್ಲಿ ಗುರು ವಾರ ಬೆಳಗ್ಗೆ 7.4 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದೆ.




ಭೂಕಂಪದ ಕೇಂದ್ರಬಿಂದು 1.20 ಡಿಗ್ರಿ ಉತ್ತರ ಅಕ್ಷಾಂಶ ಮತ್ತು 126.35 ಡಿಗ್ರಿ ಪೂರ್ವ ರೇಖಾಂಶದಲ್ಲಿದೆ ಮತ್ತು ಸುಲವೇಸಿ ಮತ್ತು ಮಾಲುಕು ದ್ವೀಪ ಗುಂಪುಗಳ ನಡುವಿನ ಮೊಲುಕ್ಕಾ ಸಮುದ್ರದಲ್ಲಿ 35 ಕಿಲೋಮೀಟರ್ ಆಳದಲ್ಲಿ ಭೂಕಂಪ ಸಂಭವಿಸಿದೆ ಎಂದು ಯುಎಸ್‌ಜಿಎಸ್ ತಿಳಿಸಿದೆ.

ಉತ್ತರ ಸುಲವೇಸಿ ಪ್ರದೇಶದ ಮನಾಡೊ ನಗರದಲ್ಲಿ ಕಟ್ಟಡವೊಂದು ಕುಸಿದು ಓರ್ವ ವ್ಯಕ್ತಿ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಭೂಕಂಪ ಸಂಭ ವಿಸಿದ 1 ಗಂಟೆಯೊಳಗೆ, ಉತ್ತರ ಮಿನಾಹಾಸಾದಲ್ಲಿ 75 ಸೆಂಟಿಮೀಟರ್ ಅಲೆಗಳು ದಾಖಲಾಗಿವೆ. ಬಿಟುಂಗ್ ನಲ್ಲಿ 20 ಸೆಂಟಿಮೀಟರ್(8 ಇಂಚು) ಎತ್ತರ ಮತ್ತು ಪಶ್ಚಿಮ ಹಲ್ಮಹೆರಾದಲ್ಲಿ 30 ಸೆಂಟಿಮೀಟರ್(ಒಂದು ಅಡಿ) ಎತ್ತರ ಸೇರಿದಂತೆ ಹಲವಾರು ಮೇಲ್ವಿಚಾರಣಾ ಕೇಂದ್ರಗಳಲ್ಲಿ ಸೌಮ್ಯವಾದ ಸುನಾಮಿ ಅಲೆಗಳು ದಾಖಲಾಗಿವೆ ಎಂದು ಇಂಡೋನೇಷ್ಯಾದ ಬಿಎಂಕೆಜಿ ಭೂವೈಜ್ಞಾನಿಕ ಸಂಸ್ಥೆ ತಿಳಿಸಿದೆ. ಹವಾಯಿ, ಗುವಾಮ್ ಮತ್ತು ಇತರ ದೂರದ ದ್ವೀಪಗಳಿಗೆ ಯಾವುದೇ ಆತಂಕವಿಲ್ಲ ಎನ್ನಲಾಗಿದೆ.

ರಾಜಾ ರವಿವರ್ಮರ 'ಯಶೋಧಾ–ಕೃಷ್ಣ ಕಲಾಕೃತಿ 167 ಕೋಟಿ ರೂ.ಗೆ ಮಾರಾಟ!

ಮುಂಬೈ: ರಾಜಾ ರವಿವರ್ಮ ಅವರು 1890ರಲ್ಲಿ ರಚಿ ಸಿದ್ದ 'ಯಶೋಧಾ ಮತ್ತು ಕೃಷ್ಣ' ಕಲಾ ಕೃತಿ ಈವರೆಗೆ ಮಾರಾಟವಾದ ಅತ್ಯಂತ ದುಬಾರಿ ಭಾರತೀಯ ಕಲಾಕೃತಿ ಎಂಬ ಕೀರ್ತಿಗೆ ಪಾತ್ರವಾಗಿದೆ



ಮುಂಬೈನಲ್ಲಿ ಬುಧವಾರ ನಡೆದ ಸ್ಯಾಫ್ರನ್ ಆರ್ಟ್ ಹರಾಜು ಪ್ರಕ್ರಿಯೆ ಯಲ್ಲಿ ರಾಜಾ ರವಿವರ್ಮ ಅವರ ಯಶೋಧಾ ಮತ್ತು ಕೃಷ್ಣನ ತೈಲವರ್ಣ ಕಲಾಕೃತಿಯನ್ನು ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಸಂಸ್ಥಾಪಕ ಬಿಲಿಯನೆರ್ ಸೈರಸ್ ಪೂನವಾಲಾ ಅವರು 167 ಕೋಟಿ ರೂ.ಗೆ ಖರೀದಿಸಿದ್ದಾರೆ. ಕಳೆದ ವರ್ಷ ಎಂಎಫ್ ಹುಸೇನ್ ಅವರ 'ಅನ್‌ಟೈಟಲ್ಡ್(ಗ್ರಾಮ ಯಾತ್ರಾ)' ಚಿತ್ರ ಹರಾಜಿನಲ್ಲಿ 118 ಕೋಟಿಗೆ ಮಾರಾಟವಾಗಿತ್ತು. ಅದನ್ನು ದೆಹಲಿ ಮೂಲದ ಕಿರಣ್ ನಾಡರ್ ಅವರು ಖರೀದಿಸಿದ್ದರು. ಆದರೆ ಈಗ ರವಿವರ್ಮ ಕಲಾಕೃತಿ 167 ಕೋಟಿಗೆ ಮಾರಾಟವಾಗಿ ಹೊಸ ದಾಖಲೆ ನಿರ್ಮಿಸಿದೆ. ಈ ಕಲಾಕೃತಿಯಲ್ಲಿ ಯಶೋಧಾ ಹಸುವಿನ ಬಳಿ ಕುಳಿತು ಹಾಲನ್ನು ಕರೆಯುತ್ತಿ ರುವಾಗ ಬಾಲ ಕೃಷ್ಣ ಹಿಂದಿನಿಂದ ಲೋಟವೊಂದನ್ನು ಹಿಡಿದು ನಿಲ್ಲುವ ದೃಶ್ಯವನ್ನು ವಿವರಿಸಲಾಗಿದೆ. ಇಂತಹ ಐತಿಹಾಸಿಕ ಕಲಾಕೃತಿಯನ್ನು ಸಂರಕ್ಷಿಸುವುದು ಗೌರವ ಮತ್ತು ಜವಾಬ್ದಾರಿ ಯಾಗಿದೆ. ಈ ರಾಷ್ಟ್ರೀಯ ಸಂಪತ್ತನ್ನು ಕಾಲಕಾಲಕ್ಕೆ ಸಾರ್ವ ಜನಿಕರ ವೀಕ್ಷಣೆಗೂ ಲಭ್ಯವಾಗುವಂತೆ ಮಾಡುವುದು ನನ್ನ ಗುರಿ ಎಂದು ಪೂನಾವಾಲ ಹೇಳಿದ್ದಾರೆ.

ವಿರಾಜಪೇಟೆಯಲ್ಲಿ ಬೃಹತ್ ಹಿಂದೂ ಶೋಭಾಯಾತ್ರೆ



ವಿರಾಜಪೇಟೆಯಲ್ಲಿ ನಡೆದ ಹಿಂದೂ ಜನಜಾಗೃತಿ ಶೋಭಾಯಾತ್ರೆಯಲ್ಲಿ ವಿದ್ಯಾರ್ಥಿಗಳಿಂದಲೂ ನೃತ್ಯ ಕಾರ್ಯಕ್ರಮ.

ವಿರಾಜಪೇಟೆ, ಏ.2– ಹನುಮ ಜಯಂತಿ ಆಯೋಜನಾ ಸಮಿತಿ ಹಮ್ಮಿಕೊಂಡಿದ್ದ ಹಿಂದೂ ಬಾಂಧವರ ಬೃಹತ್ ಶೋಭಾಯಾತ್ರೆ ಪಟ್ಟಣದಲ್ಲಿ ಗುರುವಾರ ನಡೆಯಿತು.

ಪಟ್ಟಣದ ತೆಲುಗರ ಬೀದಿಯ ಮಾರಿಯಮ್ಮ ದೇವಸ್ಥಾನದ ಬಳಿಯಿಂದ ಬೃಹತ್ ಸಂಖ್ಯೆಯಲ್ಲಿ ಮೆರವಣಿಗೆ ಹೊರಟ ಶೋಭಾಯಾತ್ರೆ ಜೈನರ ಬೀದಿ, ದೊಡ್ಡಟ್ಟಿ ಚೌಕಿ, ಮುಖ್ಯ ರಸ್ತೆ, ಗಡಿಯಾರ ಕಂಬದ ಬಳಿಯಿಂದ, ಖಾಸಗಿ ಬಸ್ಸು ನಿಲ್ದಾಣದ ಮಾರ್ಗವಾಗಿ, ಸುಣ್ಣದ ಬೀದಿ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿಯಿಂದ ದೊಡ್ಡಟ್ಟಿ ಚೌಕಿ ಮುಖ್ಯ ರಸ್ತೆಗಾಗಿ ತಾಲೂಕು ಮೈದಾನದವರೆಗೆ ಚಂಡೆ ಮೇಳ, ವಾದ್ಯಗೋಷ್ಠಿ, ಕಲಾನೃತ್ಯ, ವಿದ್ಯಾರ್ಥಿಗಳಿಂದಲೂ ನೃತ್ಯ ಕಾರ್ಯಕ್ರಮ, ಶ್ರೀ ಹನುಮಂತನು ಮೇರು ಪರ್ವತವನ್ನು ಹೊತ್ತು ತಂದ ಸ್ತಬ್ದಚಿತ್ರ ಹಾಗೂ ಹನುಮಂತನ ಇತರ ಶಕ್ತಿ ಅವತಾರದ ಸ್ತಬ್ದ ಚಿತ್ರಗಳು, ಅಲಂಕೃತ ಮಂಟಪಗಳು, ಮೆರವಣಿಗೆಯಲ್ಲಿ ಕಂಗೊಳಿಸುತ್ತಿದ್ದವು.

ಮೊದಲಿಗೆ ಬಾಲಾಂಜನೇಯ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಬಳಿಕ ಚತ್ರಕೆರೆ ಬಳಿಯಿರುವ ಶ್ರೀ ವೀರಾಂಜನೇಯ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ನಂತರ ತೆಲುಗರ ಬೀದಿಯಿಂದ ತಾಲೂಕು ಮೈದಾನದವರೆಗೆ ಪಟ್ಟಣದ ಮುಖ್ಯ ರಸ್ತೆಯಲ್ಲಿ ಮೆರವಣಿಗೆ ನಡೆದು, ಹನುಮ ಜಯಂತಿ ಆಯೋಜನಾ ಸಮಿತಿ ಅಧ್ಯಕ್ಷರಾದ ಅಂಜಪರವಂಡ ಅನಿಲ್ ಮಂದಣ್ಣ ಅವರ ಅಧ್ಯಕ್ಷತೆಯಲ್ಲಿ ಸಮಾವೇಶಕಾರ್ಯಕ್ರಮ ನಡೆಸಲಾಯಿತು.

ಬಿಗಿ ಬಂದೋಬಸ್ತ್: ಬೃಹತ್ ಶೋಭಾಯಾತ್ರೆಯಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸ್ ಇಲಾಖೆ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು, ಎಸ್ಪಿ ಬಿಂದುಮಣಿ, ತಲಾ ನಾಲ್ವರು ಡಿವೈಎಸ್‌ಪಿ ಎಂಟು ಮಂದಿ ವೃತ್ತ ನಿರೀಕ್ಷಕರು ಹಾಗೂ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ಸೇರಿ 380 ಮಂದಿಯನ್ನು ನಿಯೋಜಿಸಲಾಗಿತ್ತು ಎಂದು ಡಿವೈಎಸ್‌ಪಿ ಮೋಹನ್ ಕುಮಾರ್ ತಿಳಿಸಿದರು.

ಕೆ.ಎಲ್ ಸುಚಿತ್ರರಿಗೆ ಪಿಹೆಚ್‌ಡಿ ಪದವಿ



ಕುಶಾಲನಗರ: ಮುಡಿಪು ನೇಮಿಚಂದ್ರ ಅವರ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು ಎಂಬ ವಿಷಯದಲ್ಲಿ ಕೆ.ಎಲ್ ಸುಚಿತ್ರ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಸಹ ಪ್ರಾಧ್ಯಾಪಕ ಡಾ.ಧನಂಜಯ ಕುಂಬ್ಳೆ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಪಿಹೆಚ್‌ಡಿ ಮಹಾಪ್ರಬಂಧಕ್ಕೆ ಮಂಗಳೂರು ವಿವಿ ಡಾಕ್ಟರೇಟ್ ಪದವಿ ನೀಡಿದೆ.

ಮೂಲತಃ ಸೋಮವಾರ ಪೇಟೆ ತಾಲೂಕಿನ ಖ್ಯಾತೆ ಗ್ರಾಮದ ಲೋಕೇಶ್, ಲೀಲಾವತಿ ದಂಪತಿಗಳ ಪುತ್ರಿ ಹಾಗೂ ಬಿ.ಕೆ ಸಚಿನ್ ಕುಮಾರ್‌ರ ಪತ್ನಿ, ಕನ್ನಡ ಉಪನ್ಯಾಸಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಅಂತರ ಕೊಡವ ಪೊಮ್ಮಕ್ಕಡ ಥ್ರೋಬಾಲ್ ಪಂದ್ಯಾವಳಿ

ಮೈಸೂರಿನ ಕೊಡವ ಪೊಮ್ಮಕ್ಕಡ ಕೂಟ ಚಾಂಪಿಯನ್



ಥ್ರೋಬಾಲ್ ಪಂದ್ಯಾವಳಿಯಲ್ಲಿ ಮೈಸೂರಿನ ಕೊಡವ ಪೊಮ್ಮಕ್ಕಡ ಕೂಟ ಚಾಂಪಿಯನ್ ಟ್ರೋಫಿ ಸ್ವೀಕರಿಸಿತು.

ಮಡಿಕೇರಿ,ಏ.2–ಚೆಟ್ಟಳ್ಳಿಯ ಜೋಮಾಲೆ ಕೊಡವ ಪೊಮ್ಮಕ್ಕಡ ಕೂಟದ ವತಿಯಿಂದ ನಡೆದ ಪ್ರಥಮ ವರ್ಷದ ಥ್ರೋಬಾಲ್ ಪಂದ್ಯಾವಳಿಯಲ್ಲಿ ಮೈಸೂರಿನ ಕೊಡವ ಪೊಮ್ಮಕ್ಕಡ ಕೂಟ ತಂಡ ಚಾಂಪಿಯನ್ ಟ್ರೋಫಿ ತನ್ನದಾಗಿಸಿಕೊಂಡರೆ, ಪೊನ್ನಂಪೇಟೆಯ ಕೊಡವ ರೈಡರ್ಸ್ ಕ್ಲಬ್ ತಂಡ ದ್ವಿತೀಯ ಸ್ಥಾನ ಪಡೆದಿದೆ.

ಅಂತರ ಕೊಡವ ಪೊಮ್ಮಕ್ಕಡ ಥ್ರೋಬಾಲ್ ಪಂದ್ಯಾವಳಿಯ ಆಕರ್ಷಕ ಫೈನಲ್ ಪಂದ್ಯಾವಳಿಯಲ್ಲಿ ಮೈಸೂರಿನ ಕೊಡವ ಪೊಮ್ಮಕ್ಕಡ ಕೂಟ ತಂಡ ಪೊನ್ನಂಪೇಟೆಯ ಕೊಡವ ರೈಡರ್ಸ್ ಕ್ಲಬ್ ತಂಡದ ವಿರುದ್ಧ ಗೆಲವು ಸಾಧಿಸಿತು.

ಮೈಸೂರು ಹೂಟಗಳ್ಳಿಯ ಶ್ರೀ ತಲಕಾವೇರಿ ಪೊಮ್ಮಕ್ಕಡ ಕೂಟ ತಂಡವು ತೃತೀಯ ಸ್ಥಾನ ಮತ್ತು ಮಡಿಕೇರಿ ಕೊಡವ ಪೊಮ್ಮಕ್ಕಡ ಕೂಟದ 'ಬಿ ಟೀಮ್' 4ನೇ ಸ್ಥಾನ ತನ್ನದಾಗಿಸಿಕೊಂಡಿತು. ಬೆಂಗಳೂರು ದಾಸರಹಳ್ಳಿಯ ಪೊಮ್ಮಕ್ಕಡ ಕೂಟ ತಂಡವು ಶಿಸ್ತಿನ ತಂಡವಾಗಿ, ಪೊನ್ನಂಪೇಟೆ ಗುಂಬಳ ಮಾಡು ಪೊಮ್ಮಕ್ಕಡ ಕೂಟ ತಂಡವು ಉತ್ತಮ ವರ್ಣ ತಂಡವಾಗಿ ಮತ್ತು ಮೈಸೂರು ಪೊಮ್ಮಕ್ಕಡ ಕೂಟದ ಆಟಗಾರ್ತಿ ಶಹೇನಾ ಅತ್ಯುತ್ತಮ ಆಟಗಾರ್ತಿಯಾಗಿ ಹೊರಹೊಮ್ಮಿದರು.

ಬಹುಮಾನ ವಿತರಿಸಿದ ಕೊಡವ ಸಮಾಜದ ಅಧ್ಯಕ್ಷ ಮುಳ್ಳಂಡ ರತ್ತು ಚಂಗಪ್ಪ, ಚೆಟ್ಟಳ್ಳಿಯ ಜೋಮಾಲೆ ಪೊಮ್ಮಕ್ಕಡ ಕೂಟವನ್ನು ಚೆಟ್ಟಳ್ಳಿ ಕೊಡವ ಸಮಾಜ ಎಲ್ಲಾ ರೀತಿಯ ಬೆಂಬಲ ನೀಡಿದ್ದು, ಅತ್ಯುತ್ತಮ ಕಾರ್ಯ ನಿರ್ವಹಿಸುತ್ತಾ ಬಂದಿದೆ. ಎಂದು ಶ್ಲಾಘಿಸಿದರು. ಅಧ್ಯಕ್ಷತೆ ವಹಿಸಿದ್ದ ಮೊದಲ ಪ್ರಯತ್ನಕ್ಕೇ ಉತ್ತಮ ಸ್ಪಂದನೆ ದೊರಕಿದ್ದು ಸಂತೋಷ ತಂದಿದೆ ಎಂದರು. ಪಂದ್ಯದ ತೀರ್ಪುಗಾರರಾಗಿ ಮಡಿಕೇರಿಯ ಬೊಳ್ಳಿಯಂಡ ವಿಕ್ರಂ, ಅಪಾಡಂಡ ಗೀತ ಅಯ್ಯಪ್ಪ, ಕಾರ್ಯ ನಿರ್ವಹಿಸಿದ್ದರು. ಈ ವೇಳೆ ದಾನಿಗಳಾದ ಬದಲೇರ ಕೌಶಿಕ್, ಮುಳ್ಳಂಡ ರತ್ತು ಚಂಗಪ್ಪ, ಮುಳ್ಳಂಡ ಪ್ರೇಮ ಅಯ್ಯಪ್ಪ, ವಿಂದ್ಯಾ ರಂಜನ್, ಸುಶೀಲ ತಮ್ಮಯ್ಯ, ಐಚೆಟ್ಟೀರ ಚೋಂದಮ್ಮ ಮತ್ತು ಜೋಮಾಲೆ ಪೊಮ್ಮಕ್ಕಡ ಕೂಟದ ಉಪಾಧ್ಯಕ್ಷೆ ಚೋಳಂಡ ಜ್ಯೋತಿ ನಾಣಯ್ಯ, ಕಾರ್ಯದರ್ಶಿ ಅಡಿಕೆರ ಶಾಂತಿ ಮುತ್ತಪ್ಪ, ಖಜಾಂಚಿ ಪುತ್ತರಿರ ಗಂಗು ಅಚ್ಚಯ್ಯ, ಸಹ ಕಾರ್ಯದರ್ಶಿ ಕೆಚ್ಚೆಟ್ಟಿರ ರತಿ ಕಾರ್ಯಪ್ಪ ಮೊದಲಾದವರು ಹಾಜರಿದ್ದರು.

ವಿರಾಜಪೇಟೆಯಲ್ಲಿ ಕವಿ ಸಾಹಿತಿಗಳ ಸ್ಮರಣೆ



ಸಾಹಿತಿ ವಿಜಯಾ ವಿಷ್ಣುಭಟ್, ಕಿಗ್ಗಾಲು ಗಿರೀಶ್‌ರನ್ನು ಗಣ್ಯರು ಗೌರವಿಸಿದರು.

ವಿರಾಜಪೇಟೆ, ಏ.2– ಸಮಾಜಕ್ಕೆ ಒಳ್ಳೆಯ ಸಂದೇಶ ಕೊಡುವಂತಹ ಪುಸ್ತಕಗಳು ಹೊರಬರಬೇಕು ಎಂದು ಅರಮೇರಿ ಕಳಂಚೇರಿ ಶ್ರೀ ಮಠದ ಪೀಠಾಧಿಪತಿ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಅಭಿಮತ ವ್ಯಕ್ತಪಡಿಸಿದ್ದಾರೆ.

ಅರಮೇರಿ ಕಳಂಚೇರಿ ಮಠದ ಶ್ರೀ ಲಿಂಗರಾಜೇಂದ್ರ ಭವನದಲ್ಲಿ ನಡೆದ ಹೊಂಬೆಳಕು ಕಿರಣ 241 ಮಾಸಿಕ ತತ್ತ್ವ ಚಿಂತನಾಗೋಷ್ಠಿ ಹಾಗೂ ಕುಶಾಲನಗರ ಕನ್ನಡಸಿರಿ ಸ್ನೇಹ ಬಳಗದ ವತಿಯಿಂದ ರಾಷ್ಟ್ರಕವಿ ಜಿ.ಎಸ್.ಎಸ್‌ನವರ ಜನ್ಮ ಶತಮಾನೋತ್ಸವ ವರ್ಷಾಚರಣೆ ಅಂಗವಾಗಿ ಶತಮಾನ ಕಂಡ ರಾಷ್ಟ್ರಗೀತೆ ಹಾಗೂ ನಾಡಗೀತೆಗಳ ಸಂಭ್ರಮ, ಕವಿ ಸಾಹಿತಿಗಳ ಸ್ಮರಣೆ ಮಾಸದ ನೆನಪು ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಅವರು, ಕೊಡಗಿನಲ್ಲಿಯು ಉತ್ತಮ ಸಾಹಿತಿಗಳು ಬರಹಗಾರರಿದ್ದು ಅವರಿಂದ ಉತ್ತಮ ಸಾಹಿತ್ಯ ನಿರ್ಮಾಣವಾಗಬೇಕು ಎಂದು ರಾಷ್ಟ್ರಕವಿ ಗೋವಿಂದ ಪೈ, ಕೊಡಗಿನ ಗೌರಮ್ಮ, ಸಂತ ಶಿಶುನಾಳ ಶರೀಫರು, ಸಾಹಿತ್ಯ ಪ್ರಪಂಚಕ್ಕೆ ನೀಡಿರುವ ಕೊಡುಗೆಯನ್ನು ಸ್ಮರಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಬೆಂಗಳೂರಿನ ಲೇಖಕಿ ವಿಜಯಾ ವಿಷ್ಣುಭಟ್ ಮಾತನಾಡಿ, ಉತ್ತಮ ಸಮಾಜ ನಿರ್ಮಾಣಕ್ಕೆ ಇಂತಹ ಮಠಗಳು ಅಗತ್ಯ, ಕಳೆದ ಹಲವಾರು ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಹೊಂಬೆಳಕು ಕಾರ್ಯಕ್ರಮ ಜನರಿಗೆ ಉತ್ತಮ ಸಂದೇಶವನ್ನು ನೀಡುತ್ತಾ ಬಂದಿದೆ ಎಂದು ಶ್ಲಾಘಿಸಿದರು.

ಲೋಕೇಶ್ ಸಾಗರ್, ಸಾಹಿತಿ ವಿಷ್ಣುಭಟ್, ಉಪನ್ಯಾಸಕ ಕಿಗ್ಗಾಲು ಹರೀಶ್ ಸಾಹಿತಿ ಎಸ್.ವಿ.ನರಸಿಂಹನ್ ಮಾತನಾಡಿದರು.

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಟ್ರೋಫಿ ವಿತರಣೆ



ಎನ್.ಎಸ್.ತಿಮ್ಮಯ್ಯ ಅವರಿಗೆ ಏರ್ ಮಾರ್ಷಲ್(ನಿವೃತ್ತ) ಕೆ.ಸಿ.ಕಾರ್ಯಪ್ಪ ಅವರು ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಟ್ರೋಫಿಯನ್ನು ವಿತರಿಸಿದರು.

ಮಡಿಕೇರಿ, ಏ.2– ಜಿಲ್ಲಾ ಪೊಲೀಸ್ ಘಟಕದಿಂದ ಪೊಲೀಸ್ ಧ್ವಜ ದಿನಾಚರಣೆ ಹಾಗೂ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಟ್ರೋಫಿ ವಿತರಣಾ ಕಾರ್ಯಕ್ರಮವು ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಗುರುವಾರ ನಡೆಯಿತು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯ ಕಂಪ್ಯೂಟರ್ ವಿಭಾಗದಲ್ಲಿ ಹೆಡ್‌ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಎನ್.ಎಸ್.ತಿಮ್ಮಯ್ಯ ಅವರಿಗೆ ಏರ್ ಮಾರ್ಷಲ್(ನಿವೃತ್ತ) ಕೆ.ಸಿ.ಕಾರ್ಯಪ್ಪ ಅವರು ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಟ್ರೋಫಿಯನ್ನು ವಿತರಿಸಿದರು. ಜಿಲ್ಲಾ ಸಶಸ್ತ್ರ ಪೊಲೀಸ್ ಪಡೆ ವಿಭಾಗದಲ್ಲಿ ಎಎಚ್‌ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಎಚ್.ಎಸ್.ಸುಧೀರ್ ಅವರಿಗೆ ಪೊಲೀಸ್ ವಿಶೇಷ ಘಟಕಗಳ ವಿಭಾಗದಲ್ಲಿ ಉತ್ತಮ ಸೇವೆ ಸಲ್ಲಿಸಿರುವುದಕ್ಕೆ ಪೊಲೀಸ್ ಟ್ರೋಫಿಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಅವರು ನೀಡಿದರು.

ನಿವೃತ್ತ ಪೊಲೀಸ್ ಉಪ ನಿರೀಕ್ಷಕ ಕೆ.ಬಿ.ಅಚ್ಚಮ್ಮ ಅವರು ಗೌರವ ವಂದನೆ ಸ್ವೀಕರಿಸಿ ಮಾತನಾಡಿ, ಕಾನೂನು, ಶಾಂತಿ ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಇಲಾಖೆ ಕಾರ್ಯ ಶ್ಲಾಘನೀಯವಾಗಿದೆ. ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಕರ್ತವ್ಯ ಮತ್ತು ಸಮಯ ಪ್ರಜ್ಞೆಯಿಂದ ಸಮಾಜದಲ್ಲಿ ಉತ್ತಮ ವಾತಾವರಣ ಕಾಣಲು ಸಾಧ್ಯ ಎಂದು ಅಭಿಪ್ರಾಯಪಟ್ಟರು. ಏರ್ ಮಾರ್ಷಲ್(ನಿವೃತ್ತ) ಕೆ.ಸಿ. ಕಾರ್ಯಪ್ಪ, ಎಸ್ಪಿ ಆರ್.ಎನ್. ಬಿಂದುಮಣಿ, ನಿವೃತ್ತ ಪಿಎಸ್‌ಐ ಅಚ್ಚಮ್ಮ ಅವರು ಪಥಸಂಚ ಲನ ತಂಡಗಳ ಪರಿವೀಕ್ಷಣೆ ಮಾಡಿದರು. ಬಳಿಕ ಪೊಲೀಸ್ 8 ತಂಡಗಳಿಂದ ಪಥಸಂಚಲನ ನಡೆಯಿತು. ಪೊಲೀಸ್ ವಾದ್ಯಗೋಷ್ಠಿ ತಂಡದವರು ರಾಷ್ಟ್ರಗೀತೆ ನುಡಿಸಿದರು. ಬಳಿಕ ಪೊಲೀಸ್ ಧ್ವಜ ವಿತರಿಸಲಾಯಿತು.

ನಗರಸಭೆ ಅಧ್ಯಕ್ಷೆ ಪಿ.ಕಲಾವತಿ, ಡಿವೈಎಸ್‌ಪಿಗಳಾದ ಪಿ.ಎ.ಸೂರಜ್(ಮಡಿಕೇರಿ), ಮಹೇಶ್ ಕುಮಾರ್ (ವಿ.ಪೇಟೆ), ಚಂದ್ರಶೇಖರ (ಸೋಮವಾರಪೇಟೆ), ಸೈಬರ್ ಅಪರಾಧ ವಿಭಾಗದ ಡಿವೈಎಸ್‌ಪಿ ಲಕ್ಷ್ಮಿಕಾಂತ ತಳವಾರ, ಹಿರಿಯ ಪೊಲೀಸ್ ಅಧಿಕಾರಿ ಐ.ಪಿ.ಮೇದಪ್ಪ, ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು.

ತಡಿಯಂಡಮೋಳ್ ಬೆಟ್ಟ 100 ಬಾರಿ ಏರಿದ ಕೊಡಗಿನ ಯುವಕ



ಮಡಿಕೇರಿ, ಏ.2–ಕೊಡಗಿನ ದೈತ್ಯ ಬೆಟ್ಟ ತಡಿಯಂಡಮೋಳ್ ಅನ್ನು 100 ಬಾರಿ ಏರಿದ ಹೆಗ್ಗಳಿಕೆಗೆ ನಾಪೋಕ್ಲುವಿನ ಯವಕ ಪಾಡಿ ಗ್ರಾಮದ ಅರೆಯಡ ಗಿರೀಶ್ ತಿಮ್ಮಯ್ಯ ಪಾತ್ರರಾಗಿದ್ದಾರೆ.

ಸಮುದ್ರ ಮಟ್ಟದಿಂದ 1748 ಮೀಟರ್ ಎತ್ತರದಲ್ಲಿರುವ ತಡಿಯಂಡಮೋಳ್ ಅನ್ನು ಏರುವುದು ಸುಲಭದ ಮಾತಲ್ಲ. ಅದರಲ್ಲೂ 100 ಬಾರಿ ಬೆಟ್ಟವನ್ನೇರುವುದೆಂದರೆ ಅದು ಮಹಾ ಸಾಧನೆಯೇ ಸರಿ. 1994ರ ಅವಧಿಯಲ್ಲಿ ತಡಿಯಂಡಮೋಳ್ ಬೆಟ್ಟವನ್ನು ಏರಲೆಂದೇ ವಿದೇಶಿ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದರು. ಅಂದಿನಿಂದ ತಡಿಯಂಡಮೋಳ್ ಬೆಟ್ಟವನ್ನು ಏರಲು ಆರಂಭಿಸಿದರು.

ಕೆಲ ವರ್ಷಗಳ ಹಿಂದೆ ಬೆನ್ನು ಹುರಿ ಸರ್ಜರಿ ಆದ ನಂತರ ಬೆಟ್ಟ ಏರುವುದನ್ನು ಸಂಪೂರ್ಣ ನಿಲ್ಲಿಸಿದ್ದೇನೆ. ಬೆಟ್ಟ ಹತ್ತುವುದು ಸುಲಭ, ಆದರೆ ಇಳಿಯುವುದು ಕಷ್ಟ, ನನ್ನ ಬೆನ್ನು ನೋವಿಗೆ ಇದೂ ಒಂದು ಕಾರಣ ಇರಬಹುದು ಎಂದು ಅರೆಯಡ ಗಿರೀಶ್ ಅಭಿಪ್ರಾಯ ಹಂಚಿಕೊಂಡರು.

ತಡಿಯಂಡಮೋಳ್ ಹತ್ತುವಾಗ ದಾರಿಯಲ್ಲಿ ಆನೆಗಳ ಹಿಂಡು, ಕಡವೆಗಳ ಓಟ, ಹುಲಿ ಮಲ–ಹಿಕ್ಕೆ ಅದರ ದುರ್ವಾಸನೆ ಎದುರಾಗುತ್ತದೆ. ವನ್ಯಜೀವಿಗಳು ದೂರ ಸರಿಯಲೆಂದು ಕೂಗುತ್ತಾ, ಅರಚುತ್ತಾ, ಚಪ್ಪಾಳೆ ತಟ್ಟುತ್ತಾ ಸಾಗುವಾಗ ಜೀವ ಬಾಯಿಗೆ ಬಂದಂತೆ ಆಗುವ ಅನುಭವ ರೋಮಾಂಚಕ ಎಂದು ಹೇಳುತ್ತಾರೆ.

ಅರೆಯಡ ಪೊನ್ನು, ಗಣಪತಿ ಹಾಗೂ ಅರೆಯಡ ಲಕ್ಷ್ಮಿ ಸುಬ್ಬವ್ವ ದಂಪತಿಯ ಪುತ್ರ ಅರೆಯಡ ಗಿರೀಶ್ ತಿಮ್ಮಯ್ಯ ಅವರು ಮೈಸೂರು ವಿಶ್ವವಿದ್ಯಾ ಲಯ ಮಹಾರಾಜ ಜೂನಿಯರ್ ಕಾಲೇಜ್‌ನಲ್ಲಿ ಶಿಕ್ಷಣ ಪಡೆದಿದ್ದಾರೆ.

ಚಾ.ನಗರದಲ್ಲಿ ಅರ್ಥಪೂರ್ಣ ಪೊಲೀಸ್ ಧ್ವಜ ದಿನಾಚರಣೆ



ಚಾ.ನಗರದಲ್ಲಿ ನಡೆದ ಪೊಲೀಸ್ ಧ್ವಜ ದಿನಾಚರಣೆಯಲ್ಲಿ ಆರಕ್ಷಕ ಉಪನಿರೀಕ್ಷಕ ಹೆಚ್.ಬಿ.ಮಾದೇಗೌಡ ಸೇರಿದಂತೆ ಇತರೆ ಅಧಿಕಾರಿ, ಸಿಬ್ಬಂದಿಗಳನ್ನು ಸನ್ಮಾನಿಸಲಾಯಿತು.

ಚಾಮರಾಜನಗರ, ಏ.2– ನಿವೃತ್ತ ಪೊಲೀಸ್ ಅಧಿಕಾರಿ, ಸಿಬ್ಬಂದಿ ಸೇವೆ ಸ್ಮರಿಸಿ ಗೌರವಿಸುವ ಸಲುವಾಗಿ ಚಾಮರಾಜನಗರ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಪೊಲೀಸ್ ಧ್ವಜ ದಿನಾಚರಣೆಯನ್ನು ನಗರದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

ನಗರದ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಪೊಲೀಸ್ ಕವಾಯತು ಮೈದಾನದಲ್ಲಿ ಗುರುವಾರ ಜಿಲ್ಲಾ ಪೊಲೀಸ್ ವತಿಯಿಂದ ನಡೆದ ಪೊಲೀಸ್ ಧ್ವಜ ದಿನಾಚರಣೆಯಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ, ವಿವಿಧ ಉಪವಿಭಾಗಗಳ ಪೊಲೀಸ್ ಪಡೆಗಳು, ಮಹಿಳಾ ಪೊಲೀಸ್ ತುಕಡಿಗಳು ಪರೇಡ್ ಕಮಾಂಡರ್ ಆರ್.ಪಿ. ಸತೀಶ್ ಅವರ ನೇತೃತ್ವದಲ್ಲಿ ಆಕರ್ಷಕ ಪಥಸಂಚಲನ ನಡೆಸಿ ನಿವೃತ್ತ ಅಧಿಕಾರಿಗಳಿಗೆ ಗೌರವ ವಂದನೆ ಸಲ್ಲಿಸಿದವು.


ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜು ಅವರು, ಸಾರ್ವಜನಿಕರ ಸುರಕ್ಷತೆಗಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾಗುವ ಇಲಾಖೆಯ ಅಧಿಕಾರಿ, ಸಿಬ್ಬಂದಿಗೆ ಗೌರವ ಸಲ್ಲಿಸಲು 1965ರಿಂದ ಪ್ರತಿ ವರ್ಷ ಏ.2ರಂದು ರಾಜ್ಯದ ಎಲ್ಲಾ ಪೊಲೀಸ್ ಘಟಕಗಳಲ್ಲಿ ಧ್ವಜ ದಿನಾಚರಣೆ ಆಚರಿಸಲಾಗುತ್ತಿದೆ. ನಿವೃತ್ತ ಅಧಿಕಾರಿ, ಸಿಬ್ಬಂದಿಗಳ ಮುಂದಿನ ಜೀವನ ಸುಖಕರವಾಗಿರಲಿ ಎಂಬುದು ಪೊಲೀಸ್ ಧ್ವಜ ದಿನದ ಪ್ರಮುಖ ಉದ್ದೇಶವಾಗಿದೆ ಎಂದರು.

ಧ್ವಜ ದಿನದ ಆಚರಣೆಯಲ್ಲಿ 100, 200, 500 ಮುಖಬೆಲೆಯ ಪೊಲೀಸ್ ಧ್ವಜಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡಿ ಅದರಿಂದ ಬಂದ ಹಣವನ್ನು ನಿವೃತ್ತರಿಗೆ ವೈದ್ಯಕೀಯ ವೆಚ್ಚ ಸೇರಿದಂತೆ ಇನ್ನಿತರೆ ಕಲ್ಯಾಣ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗುತ್ತದೆ. ಆ ಮೂಲಕ ಸಾರ್ವಜನಿಕ ಸೇವೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ನಿವೃತ್ತರಾಗುವ ಅಧಿಕಾರಿಗಳಿಗೆ ಇಲಾಖೆ ವತಿಯಿಂದ ಗೌರವ ಸಮರ್ಪಣೆ ಮಾಡಲಾಗುವುದು ಎಂದರು.

ಇದೇ ವೇಳೆ ವಿವಿಧ ಮುಖಬೆಲೆಯ ಪೊಲೀಸ್ ಧ್ವಜಗಳನ್ನು ಗಣ್ಯರು ಪ್ರದರ್ಶಿಸಿದರು. ಬಳಿಕ ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಆರಕ್ಷಕ ಉಪನಿರೀಕ್ಷಕ ಹೆಚ್.ಬಿ.ಮಾದೇಗೌಡ ಸೇರಿದಂತೆ ಇತರೆ ಅಧಿಕಾರಿ, ಸಿಬ್ಬಂದಿಗಳನ್ನು ಹಾರ, ತುರಾಯಿ, ಫಲ ತಾಂಬೂಲ ನೀಡಿ ಗೌರವಿಸಲಾಯಿತು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್.ಶಶಿಧರ್, ಡಿವೈಎಸ್‌ಪಿಗಳಾದ ಸ್ನೇಹರಾಜ್, ಧರ್ಮೇಂದ್ರ, ಸೋಮಣ್ಣ, ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ನೇಣು ಬಿಗಿದುಕೊಂಡು ಪ್ರೇಮಿಗಳು ಆತ್ಮಹತ್ಯೆ





ನಾಗೇಂದ್ರ ನದಿಯಾ

ಹನೂರು, ಏ.2– ಯುವ ಪ್ರೇಮಿಗಳು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಪೊನ್ನಾಚಿ ಗ್ರಾಮದಲ್ಲಿ ಬುಧವಾರ ತಡರಾತ್ರಿ ನಡೆದಿದೆ.

ಗ್ರಾಮದಲ್ಲಿ ನಡೆಯುತ್ತಿರುವ ಕುಳ್ಳು ಮಾರಮ್ಮನ ಜಾತ್ರೆಗೆಂದು ಕಳೆದ 3 ದಿನಗಳ ಹಿಂದೆ ಗ್ರಾಮಕ್ಕೆ ಬಂದಿದ್ದ ಯುವ ಪ್ರೇಮಿಗಳ ಶವ ಪತ್ತೆಯಾಗಿದ್ದು, ಗ್ರಾಮದಲ್ಲಿ ನೀರವ ಮೌನ ಆವರಿಸಿದೆ.

ಹನೂರು ತಾಲೂಕಿನ ಮಿಣ್ಯಂ ಗ್ರಾಮ ವ್ಯಾಪ್ತಿಯ ನಕ್ಕುಂದಿ ಗ್ರಾಮದ ನಾಗೇಂದ್ರ (21), ಪಾಲಾರ್ ಗ್ರಾಮದ ನದಿಯಾ (19) ಸಾವಿಗೆ ಶರಣಾದ ಜೋಡಿ.

ವಿವರ: ಪಾಲಾರ್ ಗ್ರಾಮದ ಮಹದೇವರ ಪುತ್ರಿಯಾದ ನದಿಯಾ ಯಳಂದೂರು ತಾಲೂಕಿನ ಬಿಳಿಗಿರಿರಂಗನ ಬೆಟ್ಟದ ಐ.ಪಿ.ಹೆಚ್ ಸಂಸ್ಥೆಯಲ್ಲಿ ನರ್ಸಿಂಗ್ ಕೆಲಸ ಮಾಡುತ್ತಿದ್ದ ಈಕೆ ನಾಗೇಂದ್ರನನ್ನು ಪ್ರೀತಿಸುತ್ತಿದ್ದಳು.

ನಾಲ್ಕೈದು ದಿನಗಳ ಹಿಂದೆ ನದಿಯಾ ತಾನು ಕೆಲಸ ಮಾಡುತ್ತಿದ್ದ ಸ್ಥಳದಿಂದ ನಾಗೇಂದ್ರನ ಜೊತೆ ಪೊನ್ನಾಚಿ ಗ್ರಾಮಕ್ಕೆ ತೆರಳಿದ್ದಾಳೆ. ಗ್ರಾಮದಲ್ಲಿ ಕುಳ್ಳು ಮಾರಮ್ಮನ ಜಾತ್ರೆ ನಡೆಯುತ್ತಿದ್ದು, ನಾಗೇಂದ್ರನ ತಾತ ಶಿವಮಾದಯ್ಯನ ಮನೆಯಲ್ಲಿ ಇಬ್ಬರು ವಾಸ್ತವ್ಯ ಹೂಡಿದ್ದರು.

ಇತ್ತ ಕೆಲಸದ ಸ್ಥಳದಲ್ಲಿ ಯಾವುದೇ ಮಾಹಿತಿ ನೀಡದೆ ನಾಪತ್ತೆಯಾಗಿದ್ದ ನದಿಯಾ ಬಗ್ಗೆ ಆಕೆಯ ಪೋಷಕರಿಗೆ ಐಪಿಹೆಚ್ ಸಂಸ್ಥೆಯವರು ತಿಳಿಸಲು ಪ್ರಯತ್ನಿಸಿದ್ದಾರೆ. ಆದರೆ ಪಾಲಾರ್ ಗ್ರಾಮದಲ್ಲಿ ನೆಟ್‌ವರ್ಕ್ ಸಮಸ್ಯೆಯಿಂದ ಮಾಹಿತಿ ತಿಳಿಯುವುದು ತಡವಾಗಿದೆ. ಮಾಹಿತಿ ತಿಳಿದ ಕೂಡಲೇ ನದಿಯಾ ತಂದೆ ಮಗಳ ಹುಡುಕಾಟ ನಡೆಸಿದ್ದಾರೆ ಮಗಳು ಪತ್ತೆಯಾಗಿರಲಿಲ್ಲ.

ಆದರೆ ಬುಧವಾರ ತಡರಾತ್ರಿ ನದಿಯಾ ಹಾಗೂ ನಾಗೇಂದ್ರ ಏಕಾಏಕಿ ಕೊಠಡಿಯೊಳಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಘಟನೆಯ ಸಂಬಂಧ ಮೃತ ನದಿಯಾ ತಂದೆ ಮಾದೇವ ಮಲೆ ಮಹದೇಶ್ವರ ಬೆಟ್ಟ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈ ವಿಚಾರ ತಿಳಿಯುತ್ತಿದ್ದಂತೆ ಮಲೆ ಮಹದೇಶ್ವರ ಬೆಟ್ಟ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಜಗದೀಶ್ ಹಾಗೂ ಸಿಬ್ಬಂದಿ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಆತ್ಮಹತ್ಯೆಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ. ಮೇಲ್ನೋಟಕ್ಕೆ ಇವರಿಬ್ಬರ ಪ್ರೀತಿಗೆ ಪೋಷಕರ ವಿರೋಧ ವ್ಯಕ್ತವಾಗಿದ್ದರಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಲಾಗುತ್ತಿದೆ. ಈ ಸಂಬಂಧ ಮಲೆ ಮಹದೇಶ್ವರ ಬೆಟ್ಟ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಂಡೀಪುರ ವ್ಯಾಪ್ತಿಯಲ್ಲಿ 2 ಅನಧಿಕೃತ ರೆಸಾರ್ಟ್‌ಗೆ ಬೀಗ



ಗುಂಡ್ಲುಪೇಟೆ, ಏ.2(ಸೋಮ್.ಜಿ)– ತಾಲೂಕಿನ ಹಂಗಳ ಹೋಬಳಿ ಬಂಡೀಪುರ ರಾಷ್ಟ್ರೀಯ ಉದ್ಯಾನವನದ ಮಂಗಲ, ಯಲಚೆಟ್ಟಿ, ಜಕ್ಕಹಳ್ಳಿ, ಸಿದ್ದಯ್ಯನಪುರ, ಲೊಕ್ಕೆರೆ ಗ್ರಾಮಗಳ ವ್ಯಾಪ್ತಿ ಅನಧಿಕೃತವಾಗಿ ನಡೆಸುತ್ತಿರುವ ಹೋಂ ಸ್ಟೇಗಳ ಪೈಕಿ ಗುರುವಾರ 2 ರೆಸಾರ್ಟ್‌ಗಳಿಗೆ ಬೀಗ ಹಾಕಲಾಗಿದೆ.

ಪರಿಸರ ಸೂಕ್ಷ್ಮ ವಲಯ ವ್ಯಾಪ್ತಿಯಲ್ಲಿ ಅಕ್ರಮ, ಕಾನೂನುಬಾಹಿರವಾಗಿ ನಿರ್ಮಾಣಗೊಂಡಿರುವ ಹೋಟೆಲ್, ಕ್ಲಬ್, ಬಾರ್, ರೆಸ್ಟೋರೆಂಟ್, ರೆಸಾರ್ಟ್ ಹಾಗೂ ಇತರೆ ವಾಣಿಜ್ಯ ಕಟ್ಟಡಗಳ ಪರಿಶೀಲನೆಗಾಗಿ ಜಿಲ್ಲಾಧಿಕಾರಿಯವರು ಅರಣ್ಯ ಪ್ರದೇಶ ವಿಭಾಗವಾರು ಟಾಸ್ಕ್ ಫೋರ್ಸ್ ಸಮಿತಿ ರಚಿಸಿ ಆದೇಶ ಹೊರಡಿಸಿದ್ದ ಬಗ್ಗೆ ಮತ್ತು ಅರಣ್ಯ ಇಲಾಖೆ ಹಾಗೂ ಸಂಬಂಧಪಟ್ಟ ಇಲಾಖೆಗಳಿಂದ ಅನುಮತಿ ಪಡೆಯದೇ ಅಕ್ರಮವಾಗಿ ಹೋಂ ಸ್ಟೇ ನಡೆಸುತ್ತಿರುವ ಕುರಿತು ಲಿಖಿತ ವಿವರಣೆ ಮತ್ತು ದಾಖಲಾತಿಗಳನ್ನು, ನೋಟಿಸ್ ತಲುಪಿದ 10 ದಿನಗಳೊಳಗಾಗಿ ಖುದ್ದಾಗಿ ಕಚೇರಿಗೆ ಹಾಜರಾಗಿ ಸಲ್ಲಿಸುವಂತೆ ಮತ್ತು ತಪ್ಪಿದಲ್ಲಿ ನಿಯಮಾನುಸಾರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಉಪ ವಿಭಾಗಾಧಿಕಾರಿಗಳ ಕಚೇರಿಯಿಂದ ನೋಟಿಸ್ ನೀಡಲಾಗಿತ್ತು. ಆದರೆ ನೋಟಿಸ್ ನೀಡಿ ಒಂದು ತಿಂಗಳು ಕಳೆದರೂ ಈವರೆವಿಗೂ ಅಗತ್ಯ ದಾಖಲಾತಿಗಳೊಂದಿಗೆ ಲಿಖಿತ ವಿವರಣೆಯನ್ನು ಹೋಂಸ್ಟೇ ಮತ್ತು ರೆಸಾರ್ಟ್ ಮಾಲೀಕರು ಸಲ್ಲಿಸಿಲ್ಲ. ಇದರಿಂದಾಗಿ ಸದರಿ ಮಾಲೀಕರು ಅನಧಿಕೃತವಾಗಿ ಹೋಂ ಸ್ಟೇ ನಡೆಸುತ್ತಿರುವುದು ಮೇಲ್ನೋಟಕ್ಕೆ ಧೃಡಪಟ್ಟಿರುತ್ತದೆ. ಈ ಕಾರಣಕ್ಕಾಗಿ ಕೆಲವು ಜಮೀನುಗಳಲ್ಲಿ ಅನಧಿಕೃತ ಹೋಂ ಸ್ಟೇ ನಡೆಸುತ್ತಿರುವ ಮಾಲೀಕರ ವಿರುದ್ಧ ಕಾನೂನು ಕ್ರಮ ಜರುಗಿಸಿ, ಹೋಂ ಸ್ಟೇ ಕಟ್ಟಡ/ಕೊಠಡಿಗಳನ್ನು ನಿಯಮಾನುಸಾರ ತಕ್ಷಣವೇ ಸೀಜ್ ಮಾಡಲು ಅಗತ್ಯ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ಕಚೇರಿಗೆ ವರದಿ ಸಲ್ಲಿಸಲು ಉಪವಿಭಾಗಾಧಿಕಾರಿಗಳು ನೋಟಿಸ್ ಮೂಲಕ ಆದೇಶಿಸಿದ್ದರು. ಅದರಂತೆ ಎರಡು ರೆಸಾರ್ಟ್‌ಗಳಿಗೆ ಬೀಗ ಮುದ್ರೆ ಹಾಕಿದ್ದು, ಉಳಿದ ಅಕ್ರಮ ರೆಸಾರ್ಟ್‌ಗಳ ವಿರುದ್ಧವೂ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ತಹಸೀಲ್ದಾರ್ ತನ್ಮಯ್ ತಿಳಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ರಾಜಸ್ವ ನಿರೀಕ್ಷಕ ಆನಂದ್ ಧೂಳಪ್ಪನವರ್, ಗ್ರಾಮ ಆಡಳಿತಾಧಿಕಾರಿಗಳಾದ ಸದ್ದಾಂ, ಸಚಿನ್, ಗ್ರಾಮ ಸಹಾಯಕರು ಹಾಜರಿದ್ದರು.

ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಬೇಸಿಗೆ ಶಿಬಿರಗಳು ಪೂರಕ

ಲೇಖಕಿ ಶೀಲಾ ಸತ್ಯೇಂದ್ರಸ್ವಾಮಿ



ಚಿಣ್ಣರ ಬೇಸಿಗೆ ಶಿಬಿರವನ್ನು ಲೇಖಕಿ ಶೀಲಾ ಸತ್ಯೇಂದ್ರಸ್ವಾಮಿ ಉದ್ಘಾಟಿಸಿ ಮಾತನಾಡಿದರು.

ಚಾಮರಾಜನಗರ, ಏ.2– ಮಕ್ಕಳ ವ್ಯಕ್ತಿತ್ವ ವಿಕಸನ ಹಾಗೂ ಅವರನ್ನು ಮೊಬೈಲ್ ಗೀಳಿನಿಂದ ಹೊರ ತರಲು ಸಾಂಸ್ಕೃತಿಕ ಚಟುವಟಿಕೆಗಳ ಅರಿವು ಮೂಡಿಸುವ ಬೇಸಿಗೆ ಶಿಬಿರ ಆಯೋಜನೆ ಅತ್ಯಂತ ಅವಶ್ಯಕ ಎಂದು ಲೇಖಕಿ ಶೀಲಾ ಸತ್ಯೇಂದ್ರಸ್ವಾಮಿ ತಿಳಿಸಿದರು.

ಚನ್ನಬಸವೇಶ್ವರ ಪ್ರತಿಷ್ಠಾನ, ವಿರಕ್ತ ಮಠ ಹರವೆ ಹಾಗೂ ಶ್ರೀಚನ್ನಬಸವೇಶ್ವರ ಕಲಾ ಸಂಘದಿಂದ ತಾಲೂಕಿನ ಹರವೆ ಗ್ರಾಮದ ಶ್ರೀಚನ್ನಬಸವೇಶ್ವರ ಹಿರಿಯ ಪ್ರಾಥಮಿಕ ಪ್ರೌಢಶಾಲೆಯಲ್ಲಿ 15 ದಿನಗಳ ಚಿಣ್ಣರ ಬೇಸಿಗೆ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಮಠಾಧೀಶರಾದ ಸರ್ಪಭೂಷಣ ಸ್ವಾಮೀಜಿ ಅವರು ಇಂತಹ ಸಾಂಸ್ಕೃತಿಕ ಚಟುವಟಿಕೆಗಳಿಗೆ ಆದ್ಯತೆ ನೀಡುತ್ತಿದ್ದಾರೆ. ಅವರ ಆಶಯದ ಮೇರೆಗೆ ಶಾಲೆಯಲ್ಲಿ ಚಿಣ್ಣರ ಬೇಸಿಗೆ ಶಿಬಿರ ಆಯೋಜಿಸಲಾಗಿದೆ. ಗ್ರಾಮೀಣ ಮಕ್ಕಳು ಶಿಬಿರದ ಪ್ರಯೋಜನ ಪಡೆಯುವಂತಾಗಲಿ ಎಂದರು.

ಹರವೆ ಮೊರಾರ್ಜಿ ಶಾಲೆ ಪ್ರಾಂಶುಪಾಲೆ ಎಂ.ಆರ್. ಸವಿತಾ ಮಾತನಾಡಿ, ಅಂಕಗಳ ಹಿಂದೆ ಜೋತು ಬಿದ್ದಿರುವ ಕಾಲ ಘಟ್ಟದಲ್ಲಿ ಬೇಸಿಗೆ ಶಿಬಿರದ ಮೂಲಕ ಮಕ್ಕಳ ವಿಶೇಷ ಪ್ರತಿಭೆಗಳಿಗೆ ಉತ್ತಮ ವೇದಿಕೆ ಇದಾಗಿದೆ. ಮಕ್ಕಳು ನೋಡಿ, ಕೇಳಿ, ಮಾಡಿ ಕಲಿಯುತ್ತಾ ಹಲವು ಕೌಶಲ್ಯ, ಜೀವನ ಪಾಠಗಳನ್ನು ಸಹ ಕಲಿಯಬಹುದು ಎಂದರು.

ಶಿಬಿರದ ನಿರ್ದೇಶಕ ಕಿರಣ್ ಗಿರ್ಗಿ ಮಾತನಾಡಿ, 15 ದಿನಗಳ ಶಿಬಿರದಲ್ಲಿ ನಾಟಕ ತರಬೇತಿ, ಸಂಗೀತ ಕಲಿಕೆ, ಚಿತ್ರಕಲೆ, ಜನಪದ ನೃತ್ಯ ತರಗತಿಗಳನ್ನು ನಡೆಸಲಾಗುತ್ತದೆ ಎಂದರು. ಸಂಸ್ಥೆ ಕಾರ್ಯದರ್ಶಿ ಗಿರೀಶ್ ಮಾತನಾಡಿ, ಈ ವರ್ಷದಿಂದ ನಮ್ಮ ಶಾಲೆಯಲ್ಲಿ ಸಾಂಸ್ಕೃತಿಕ ಕಲಾ ಸಂಘ ಸ್ಥಾಪಿಸಲಾಗಿದ್ದು, ಬೇಸಿಗೆ ಶಿಬಿರವನ್ನು ಮೊದಲ ಕಾರ್ಯಕ್ರಮವಾಗಿ ಆರಂಭಿಸುತ್ತಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕ ಲೋಕೇಶ್, ಪ್ರೌಢಶಾಲೆ ಮುಖ್ಯ ಶಿಕ್ಷಕ ರಾಜು, ವಿರೂಪಾಕ್ಷಪ್ಪ, ಶಾಲಾ ಶಿಕ್ಷಕಿಯರು ಹಾಗೂ ಶಿಬಿರದ ಮಕ್ಕಳು ಭಾಗವಹಿಸಿದ್ದರು.

ಏ.6, ಬಸವ ಜಯಂತಿ ಪೂರ್ವಭಾವಿ ಸಭೆ

ಚಾಮರಾಜನಗರ, ಏ.2– ಜಿಲ್ಲಾ ಮಟ್ಟದಲ್ಲಿ ಬಸವ ಜಯಂತಿ ಆಚರಿಸುವ ಸಂಬಂಧ ಪೂರ್ವಭಾವಿ ಸಭೆಯನ್ನು ಏ.6ರಂದು ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಜಿಲ್ಲೆಯ ಸಮಾಜದ ಅಧ್ಯಕ್ಷರು, ಪದಾಧಿಕಾರಿಗಳು, ವಿವಿಧ ಸಂಘ–ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು, ವಿವಿಧ ಸಮುದಾಯದ ಮುಖಂಡರು ಸಭೆಗೆ ಹಾಜರಾಗಿ ತಮ್ಮ ಸಲಹೆ ಸೂಚನೆಗಳನ್ನು ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಏ.5 ಬಾಬೂಜಿ ಜಯಂತಿ

ಚಾಮರಾಜನಗರ, ಏ.2– ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನರಾಮ್ ಅವರ 119ನೇ ಜಯಂತಿಯನ್ನು ಏ.5 ರಂದು ನಗರದಲ್ಲಿ ಆಯೋಜಿಸಲಾಗಿದೆ.

ನಿಟ್ರೆ ಡೈರಿಗೆ ರೇವಣ್ಣ ಅಧ್ಯಕ್ಷ



ನಿಟ್ರೆ ಡೈರಿ ಅಧ್ಯಕ್ಷ, ನಿರ್ದೇಶಕರನ್ನು ಸನ್ಮಾನಿಸಲಾಯಿತು.

ಬೇಗೂರು, ಏ.2– ಇಲ್ಲಿಗೆ ಸಮೀಪದ ನಿಟ್ರೆ ಹಾಲು ಉತ್ಪಾದಕರ ಸಹಕಾರ ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ನೂತನ ಅಧ್ಯಕ್ಷರಾಗಿ ರೇವಣ್ಣ ಆಯ್ಕೆಯಾದರು.

ನಿರ್ದೇಶಕರಾಗಿ ಮಹದೇವಗೌಡ, ನಟರಾಜ್, ಮಹೇಶ್, ಮಹದೇವಪ್ಪ, ಗುರುಸಿದ್ದಪ್ಪ, ತಾಯಮ್ಮ, ಮಹದೇವಮ್ಮ, ಶ್ರೀನಿವಾಸ್, ಪ್ರಭುಸ್ವಾಮಿ, ಚಿಕ್ಕಹೆಣ್ಣಮ್ಮ ಆಯ್ಕೆಯಾಗಿದ್ದಾರೆ. ಇದೇ ವೇಳೆ ನೂತನ ಅಧ್ಯಕ್ಷ, ನಿರ್ದೇಶಕರನ್ನು ಗ್ರಾಮಸ್ಥರು ಸನ್ಮಾನಿಸಿದರು.

ನಾಳೆ ಉಚಿತ ಕಣ್ಣಿನ ತಪಾಸಣೆ ಶಿಬಿರ

ಗುಂಡ್ಲುಪೇಟೆ, ಏ.2– ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಏ.4ರಂದು ಕೊಯಮತ್ತೂರಿನ ಅರವಿಂದ ಕಣ್ಣಾಸ್ಪತ್ರೆ ತಜ್ಞ ವೈದ್ಯರಿಂದ ಉಚಿತ ಕಣ್ಣಿನ ತಪಾಸಣೆ ಶಿಬಿರ ಆಯೋಜಿಸಲಾಗಿದೆ.

ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಉದ್ಯಮಿ ಅಜರ್‌ಪಾಷ ಹಾಗೂ ಪತ್ರಕರ್ತರ ಸಂಘದ ಸಹಯೋಗದಲ್ಲಿ ಆಯೋಜಿಸಿರುವ ಶಿಬಿರ ಅಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1 ಗಂಟೆವರೆಗೆ ನಡೆಯಲಿದೆ.

ಶಿಬಿರದಲ್ಲಿ ಕಣ್ಣಿನ ಸಮಸ್ಯೆಗಳಾದ ಪೊರೆ, ಗ್ಲಾಕೋಮಾ, ನೀರು ಸೋರುವಿಕೆ, ಗೀಜು ಬರುವುದು, ಹತ್ತಿರ ಮತ್ತು ದೂರದೃಷ್ಟಿ ದೋಷ, ಓರೆಗಣ್ಣು, ರಾತ್ರಿ ಕುರುಡುತನದ ತಪಾಸಣೆ ನಡೆಸಲಾಗುವುದು. ಅಲ್ಲದೇ ಸ್ಥಳದಲ್ಲೇ ರಿಯಾಯಿತಿ ದರದಲ್ಲಿ ಕನ್ನಡಕಗಳನ್ನು ವಿತರಿಸಲಾಗುವುದು. ಶಸ್ತ್ರಚಿಕಿತ್ಸೆ ಅಗತ್ಯವಿರುವ ರೋಗಿಗಳನ್ನು ಕೊಯಮತ್ತೂರಿಗೆ ಕರೆದೊಯ್ದು ಉಚಿತವಾಗಿ ಚಿಕಿತ್ಸೆ ನೀಡಲಾಗುವುದು. ಹೀಗಾಗಿ ಸಾರ್ವಜನಿಕರು ಶಿಬಿರವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಅನುಗ್ರಹ ಸಂಸ್ಥೆ ಸಂಯೋಜಕ ಕೆ.ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

■ ಸತ್ಯಮೂರ್ತಿ ತೋಳಹುಣಸೆ

ಏ.10ಕ್ಕೆ 'ಗೊಗ್ಗಯ್ಯ' ಬರ್ತಾನೆ..!

ಸಾಮಾನ್ಯವಾಗಿ ಚಿಕ್ಕಮಕ್ಕಳು ಊಟ ಮಾಡಲು ಹಠ ಮಾಡಿದಾಗ ತಾಯಿ ಬೇಗ ಊಟ ಮಾಡು, ಇಲ್ದಿದ್ರೆ ಗೊಗ್ಗಯ್ಯ ಬರ್ತಾನೆ ಎನ್ನುತ್ತಾಳೆ. ಇದೀಗ ಗೊಗ್ಗಯ್ಯ ಎಂಬ ಶೀರ್ಷಿಕೆಯಲ್ಲೇ ಸಿನಿಮಾವೊಂದು ತಯಾರಾಗಿದೆ. ಇತ್ತೀಚೆಗೆ ಇದರ ಟ್ರೈಲರ್ ಬಿಡುಗಡೆಯಾಯಿತು. ಶ್ರೀಮತಿ ಸುಧಾ ಜೆ. ಅವರ ನಿರ್ಮಾಣದ ಈ ಚಿತ್ರಕ್ಕೆ ವಸಂತ್ ಕಥೆ ಬರೆದು ನಿರ್ದೇಶನದ ಜತೆಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ತನ್ಮಯ್ ಎಸ್.ಆನಂದ್‌ಕುಮಾರ್ ಚಿತ್ರಕಥೆ, ಸಂಭಾಷಣೆ ರಚಿಸಿ ನಿರ್ದೇಶನ ಮಾಡಿದ್ದಾರೆ. ರಾಜ್ ಭಾಸ್ಕರ್ ಹಿನ್ನೆಲೆ ಸಂಗೀತ, ರವಿ ಬೆಳಗುಂದಿ ಛಾಯಾಗ್ರಹಣ ಈ ಚಿತ್ರಕ್ಕಿದೆ.

ವೇದಿಕೆಯಲ್ಲಿ ವಸಂತ್ ಮಾತನಾಡುತ್ತ ಈ ಹಿಂದೆ 'ಮಿಸ್ಟರ್ ಬಕ್ರ', 'ಕೂಲ್ ಗಣೇಶ್' ಅಲ್ಲದೆ 'ಹೊಟ್ಟೆ ಪಾಡು' ಚಿತ್ರಗಳನ್ನು ನಿರ್ದೇಶಿಸಿದ್ದೆ. ಇದು ಮೂರನೇ ಚಿತ್ರ ವಿಭಿನ್ನವಾದ ಕಥೆಯಿರುವ ಈ ಚಿತ್ರದಲ್ಲಿ ನಿಜವಾದ 'ಗೊಗ್ಗಯ್ಯ' ಅಂದರೇನು ಅಂತ ಹೇಳಿದ್ದೇನೆ. ಕಾಮಿಡಿ, ಹಾರರ್ ಜತೆಗೆ ಸೆಂಟಿಮೆಂಟ್ ಕಥಾಹಂದರ ಚಿತ್ರದಲ್ಲಿದ್ದು, ಏಪ್ರಿಲ್ 10ರಂದು ರಿಲೀಸಾಗುತ್ತಿದೆ. ರಾಮನವಮಿ ಪ್ರಯುಕ್ತ ಕೈಲಾಶ್‌ಖೇರ್ ಹಾಡಿರುವ ನೀ ಹೆದರದಿರು ಕಂದ ಎಂಬ ಹನುಮಂತನ ಕುರಿತಾದ ಹಾಡನ್ನು ರಿಲೀಸ್ ಮಾಡಿದ್ದೇವೆ ಎಂದರು.

ಸಾಹಸ ಸಂಯೋಜಕ ಕೌರವ ವೆಂಕಟೇಶ್ ಕೂಡ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಖಳನಾಯಕನಾಗಿ ವೈಭವ ನಾಗರಾಜ್ ನಟಿಸಿದ್ದಾರೆ. ಸಿರಿ ಮ್ಯೂಸಿಕ್‌ನ ಸುರೇಶ್ ಚಿಕ್ಕಣ್ಣ ಹಾಗೂ ಚಿತ್ರಕಥೆ, ಸಂಭಾಷಣೆ, ಗೀತರಚನೆಯ ಜತೆಗೆ ಸಹಕಾರ ನಿರ್ದೇಶನ ಮಾಡಿರುವ ತನ್ಮಯ್ ಎಸ್. ಆನಂದ್‌ಕುಮಾರ್ ಸೇರಿದಂತೆ ಚಿತ್ರ ತಂಡದ ಅನೇಕ ಸದಸ್ಯರು 'ಗೊಗ್ಗಯ್ಯ' ಚಿತ್ರದ ಕುರಿತಂತೆ ಮಾತನಾಡಿದರು.



'ಗೊಗ್ಗಯ್ಯ' ಚಿತ್ರದಲ್ಲಿ ವಸಂತ್, ಸ್ನೇಹ

'ಮೋಡ ಕವಿದ ವಾತಾವರಣ'ದಲ್ಲಿ ಹುಟ್ಟಿದ ಪ್ರೇಮಕಥೆ..

ನಿರ್ದೇಶಕ ಸಿಂಪಲ್ ಸುನಿ ತಮ್ಮ ಶಿಷ್ಯ ಶೀಲಮ್‌ಗಾಗಿ ಹೊಸ ಸಿನಿಮಾ ಮಾಡಿದ್ದಾರೆ. ಅದುವೇ 'ಮೋಡ ಕವಿದ ವಾತಾವರಣ'. ಟೈಟಲ್‌ನಿಂದಲೆ ಕುತೂಹಲ ಹೆಚ್ಚಿಸಿರುವ ವೈಜ್ಞಾನಿಕ ಹಿನ್ನೆಲೆಯ ಪ್ರೇಮಕಥೆಯ ಈ ಚಿತ್ರ ಜೂನ್ 26ರಂದು ರಾಜ್ಯಾದ್ಯಂತ ತೆರೆಗೆ ಬರ್ತಿದೆ.

ಶೀಲಮ್ ಈ ಹಿಂದೆ ಕೆಲ ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದರು. ಈ ಚಿತ್ರದ ಮೂಲಕ ಪೂರ್ಣ ಪ್ರಮಾಣದ ನಾಯಕನಾಗಿದ್ದಾರೆ. ಸೈಂಟಿಫಿಕ್ ಫಿಕ್ಷನ್ ಲವ್ ಸ್ಟೋರಿ ಹೊಂದಿರುವ 'ಮೋಡ ಕವಿದ ವಾತಾವರಣ' ಚಿತ್ರದಲ್ಲಿ ಶೀಲಮ್ ಜೋಡಿಯಾಗಿ ಸಾತ್ವಿಕಾ ಹಾಗೂ ಮೋಕ್ಷಾ ಕುಶಾಲ್ ನಟಿಸಿದ್ದಾರೆ.

'ಒಂದು ಸರಳ ಪ್ರೇಮಕಥೆ' ನಿರ್ಮಿಸಿದ್ದ ರಾಮ್ ಮೂವೀಸ್, ಈ ಚಿತ್ರ ನಿರ್ಮಿಸಿದೆ. ಮೈಸೂರು ರಮೇಶ್, ಶ್ರೀರಂಗರಾಜು, ಲೋಕೇಶ್ ಬೆಳವಾಡಿ ಹಾಗೂ ಗೋವಾ ರಮೇಶ್ ಚಿತ್ರವನ್ನು ನಿರ್ಮಿಸಿದ್ದಾರೆ. 'ಮೋಡ ಕವಿದ ವಾತಾವರಣ' ಸಿನಿಮಾಗೆ ಸಂತೋಷ್ ರೈ ಪಾತಾಜೆ ಅವರ ಕ್ಯಾಮೆರಾ ವರ್ಕ್, ಜೂಡಾ ಸ್ಯಾಂಡಿ ಅವರ ಸಂಗೀತ ನಿರ್ದೇಶನ ಈ ಸಿನಿಮಾಗಿದೆ. ಈಗಾಗಲೇ ಸಂಜಿತ್ ಹೆಗಡೆ ಹಾಡಿರುವ 'ನನ್ನೆದೆಯ ಹಾಡೊಂದನು' ಅಪಾರ ಜನಮನ್ನಣೆ ಗಳಿಸಿದೆ.





'ಮೋಡ ಕವಿದ ವಾತಾವರಣ'. ಚಿತ್ರದಲ್ಲಿ ಶೀಲಮ್, ಸಾತ್ವಿಕಾ

ಕಾಲದ ಮಹತ್ವ ಹೇಳೋ ಚಿತ್ರ

ಎಲ್ರ ಕಾಲೆಳೆಯುತ್ತೆ ಕಾಲ


ಒಂದು ಘಟನೆ ವ್ಯಕ್ತಿಯ ಜೀವನದಲ್ಲಿ ಯಾವ ರೀತಿ ಪ್ರಮುಖ ಪಾತ್ರ ವಹಿಸುತ್ತದೆ. ಕಾಲ ಎನ್ನುವುದು ಯಾರನ್ನೂ ಸಹ ಬಿಡುವುದಿಲ್ಲ, ಎಲ್ಲರ ಕಾಲನ್ನೂ ಎಳೆಯುತ್ತದೆ ಎಂಬ ಕಾನ್ಸೆಪ್ಟ್ ಇಟ್ಟುಕೊಂಡು ಸುಜಯ್ ಶಾಸ್ತ್ರಿ ಆಕ್ಷನ್‌ಕಟ್ ಹೇಳಿರೋ ಚಿತ್ರ 'ಎಲ್ರ ಕಾಲೆಳೆಯುತ್ತೆ ಕಾಲ'. ರೆಟ್ರೋ ಶೈಲಿಯ ಕಥಾಹಂದರ ಒಳಗೊಂಡ ಈ ಚಿತ್ರದ ರೆಟ್ರೋ ಹಾಡೊಂದನ್ನು ಇತ್ತೀಚೆಗೆ ಬಿಡುಗಡೆಗೊಳಿಸಲಾಯಿತು. ಈ ಹಾಡಲ್ಲಿ ಚಂದನ್‌ಶೆಟ್ಟಿ, ಅರ್ಚನಾ ಕೊಟ್ಟಿಗೆ ಅಭಿನಯಿಸಿದ್ದಾರೆ. ಈಗಾಗಲೇ ತನ್ನೆಲ್ಲ ಕೆಲಸಗಳನ್ನು ಮುಗಿಸಿಕೊಂಡಿರುವ ಈ ಚಿತ್ರ 17ರಂದು ತೆರೆ ಕಾಣಲಿದೆ. ಉಷಾ ಗೋವಿಂದರಾಜು ನಿರ್ಮಾಣದ ಈ ಚಿತ್ರಕ್ಕೆ ಚಂದನ್‌ಶೆಟ್ಟಿ ಅವರೇ ಸಂಗೀತ ನೀಡಿದ್ದಾರೆ.

ನಿರ್ದೇಶಕ ಕಮ್ ನಟ ಸುಜಯ್‌ಶಾಸ್ತ್ರಿ ಮಾತನಾಡಿ 80-90ರ ದಶಕದಲ್ಲಿ ನಡೆಯೋ ರೆಟ್ರೋ ಶೈಲಿಯ ಕೌಟುಂಬಿಕ ಪ್ರೇಮಕಥೆಯನ್ನು ಈ ಚಿತ್ರದಲ್ಲಿ ಹೇಳಿದ್ದೇನೆ. ಅದೇ ಶೈಲಿಯಲ್ಲಿ ಚಿತ್ರದ ಪ್ರಮೋಷನ್ ಕೂಡ ಮಾಡ್ತಾ ಇದ್ದೇವೆ. ಕನಕಪುರದ ಸುತ್ತಮುತ್ತ ಚಿತ್ರದ ಶೂಟಿಂಗ್ ನಡೆಸಿದ್ದು, ಹಿರಿಯನಟಿ ತಾರಾ, ದತ್ತಣ್ಣ, ರಾಕೇಶ್ ಪೂಜಾರಿ, ಮಂಜು ಪಾವಗಡ ಅಭಿನಯಿಸಿರುವ ತಿಳಿಹಾಸ್ಯದ ಹಿನ್ನೆಲೆಯಲ್ಲಿ ನಡೆಯುವ ಕೌಟುಂಬಿಕ ಕಥೆಯನ್ನು ಹೇಳಿದ್ದೇವೆ. ಸಮಯಕ್ಕೆ ನಾವು ಅಗೌರವ ತೋರಿದರೆ, ಅದು ನಮಗೂ ಅಗೌರವ ಉಂಟುಮಾಡುತ್ತದೆ. ಚಿತ್ರದಲ್ಲಿ ನಾಯಕ ಗೊಂದಲದಲ್ಲಿದ್ದರೂ ಆತನ ಪರಿಸ್ಥಿತಿ ನಮಗೆ ಹಾಸ್ಯವಾಗಿಯೇ ಕಾಣುತ್ತದೆ ಎಂದರು.



'ಎಲ್ರ ಕಾಲೆಳೆಯುತ್ತೆ ಕಾಲ' ಚಿತ್ರದಲ್ಲಿ ಚಂದನ್‌ಶೆಟ್ಟಿ, ಅರ್ಚನಾ ಕೊಟ್ಟಿಗೆ

ಸಿನಿಪದಬಂಧ-620



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______
ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ರಾಜ್‌ಕುಮಾರ್ - ಆರತಿ ನಿರ್ಮಿಸಿದ ಚಿನ್ನದ ಗೂಡು 7
4. ಗೋಲ್ಡನ್ ಸ್ಟಾರ್ ಗಣೇಶ್ - ವೇದಿಕಾ ಇಬ್ಬರ 'ಮಿಲನ' 3
8. '_ _ _ _ _ _ _ ಒಲವಿನ ಓಲೆ ಚಿಗುರಿದ ಎಲೆ ಎಲೆ ಮೇಲೆ..... ', 7
9. ಡಿ. ಶಂಕರ್ ಸಿಂಗ್ ನಿರ್ದೇಶನದಲ್ಲಿ ಬಂದ 'ಮಧ್ಯವರ್ತಿ' 3
11. ವಿಷ್ಣುವರ್ಧನ್ - ಅಂಬಿಕಾ ಒಳ್ಳೆಯ ಗಳಿಗೆಯಲ್ಲಿ ಸಂಧಿಸಿದ್ದಾರೆ 5
13. ನೀ ನನ್ನ ಗೆಲ್ಲಲಾರೆ ಚಿತ್ರದ ಸಂಗೀತ ನಿರ್ದೇಶಕ 5
16. ರವಿಚಂದ್ರನ್ ಸ್ವಪ್ನಗಳ ಕಂಡವನು 5
17. ಶಂಕರ್‌ನಾಗ್ ಅಭಿನಯದ ಪರಿಶುದ್ಧವಾದ ಪ್ರೀತಿ 5
18. ಈ ದ್ರೋಹ ವಂಚನೆ ಕಂಡು ಈ ವ್ಯಕ್ತಿಯು ಹುಟ್ಟಿಹನು 2
19. ಜನನಿ _ _ ಭೂಮಿ 2

ಮೇಲಿನಿಂದ ಕೆಳಕ್ಕೆ

1. ಭಾರತಿಗೆ ಚಿನ್ನದ ಹರಿಣಿ ಬೇಕೆಂಬ ಆಸೆ 6
2. ದರ್ಶನ್ - ರಮ್ಯ ಅಭಿನಯದ ಚಿತ್ರವಿದು 2
3. ದುನಿಯಾ ವಿಜಯ್ ಮಹಾಭಾರತ ಕಾಲದ ಮಗಧ ದೇಶದ ರಾಜನನ್ನು ನೆನಪಿಸಿದ್ದಾನೆ 4
5. 'ಓ _ _ _ _ _ _ ಶರಣು ಪ್ರೇಮದ ಈ ಸವಿಗೆ ಶರಣು..... ', 6
6. ಕವಿತಾ ಲಂಕೇಶ್ ಅವರ ಮಕ್ಕಳ ಚಿತ್ರವಿದು 2
7. ಮಗಳ ಗಂಡನ ಜೊತೆ ಆತನ ಸ್ನೇಹಿತನೂ ಇದ್ದಾನೆ 6
10. '_ _ _ _ _ _ ಹಸಿರು ಗಿಣಿಯ ರಾಮ ಗೂಡಿನಲ್ಲಿ ನೀನು ಬಂದೆ.....', 6
12. ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ ಎಂದ ಸಂತ 7
14. ಶಶಿಕುಮಾರ್ - ರಂಜಿತಾ ಅಭಿನಯಕ್ಕೆ ಆನಂದ್ ನಿರ್ದೇಶಕ 5
15. ಸಂಗೀತದ ಸ್ವರಗಳನ್ನು ವಿಸ್ತರಿಸುವುದಕ್ಕೆ ಹೀಗೆನ್ನಿ 3

ಸಿನಿ ಪದಬಂಧ 619ರ ಉತ್ತರ

ಚೈ	ತ್ರ	ದ	ಪ್ರೇ	ಮಾಂ	ಜ	ಲಿ		ವಿ	ರ	ಹ
ತ್ರ			ಮ		ಯ		ಮ			ರ
ದ		ಚಿ		ಒ	ಲ	ವಿ	ನ	ಕಾ	ಣಿ	ಕೆ
ಚಿ	ತ್ರಾ	ನ್ನ			ಕ್ಷ್ಮಿ					ಯ
ಗು		ದಂ		ಪ್ರೇ		ಹೊ	ಸ	ಬೆ	ಳ	ಕು
ರು		ಥ		ಮ			ವ			ರಿ
	ಅ	ಮ	ರ	ಪ್ರೇ	ಮ		ತಿ		ರಾ	
ಕ		ಗ		ಮ		ಜ	ಯ	ವಿ	ಜ	ಯ
ದಂ				ಪ್ರೇ			ನೆ		ಕು	
ಬ	ಜಾ	ರ್	ಭೀ	ಮ		ಬ	ರ		ಮಾ	
							ಳು		ರ	ಮ್ಯ

ವಿಜೇತರು: ಎಸ್.ಉಷಾ, #16, 14ನೇ ಕ್ರಾಸ್, 4ನೇ ಮೇನ್, ವಿದ್ಯಾರಣ್ಯಪುರಂ, ಮೈಸೂರು-17

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಏ.1 ಫೂಲ್ಸ್ ಡೇ ಅಲ್ಲ..! ಇಂಟೆಲಿಜೆನ್ಸ್ ಡೇ..!!

ಏಪ್ರಿಲ್ ಒಂದನ್ನು ವಿಶ್ವದಾದ್ಯಂತ ಮೂರ್ಖರ ದಿನ ಎಂದು ಆಚರಿಸಲಾಗುತ್ತದೆ. ಅಂದು ಒಬ್ಬರಿಗೊಬ್ಬರು ಸುಳ್ಳು ಹೇಳಿ ಯಾಮಾರಿಸುವುದು, ಬೇಸ್ತು ಬೀಳಿಸುವುದು ಮಾಡ್ತಾರೆ. ಆದರೆ, ನಟ, ನಿರ್ಮಾಪಕ ಉಪೇಂದ್ರ ಈ ಪರಿಕಲ್ಪನೆಯನ್ನೇ ಬದಲಿಸಬೇಕೆಂದು ಕರೆ ನೀಡಿದ್ದಾರೆ.

ರಿಯಲ್‌ಸ್ಟಾರ್ ಉಪೇಂದ್ರ ಅವರು ಏ.1ರಂದು ತಮ್ಮ ಪ್ರಜಾಕೀಯ ಪಕ್ಷದ ಹೊಸ ಆಪ್ 'ದಿ ರಿಯಲ್ ಪ್ರಜಾಕೀಯ' ಲಾಂಚ್ ಮಾಡಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಏಪ್ರಿಲ್ ಒಂದನ್ನು ಮೂರ್ಖರ ದಿನ ಎಂದು ಕರೆಯುವ ಬದಲು ಬುದ್ಧಿವಂತರ ದಿನವೆಂದು ಆಚರಿಸಬೇಕು ಎಂದು ಹೇಳಿದ್ದಾರೆ.

ಇಷ್ಟುವರ್ಷ ನಾವೆಲ್ಲ ಏಪ್ರಿಲ್ ಒಂದನ್ನು ಫೂಲ್ಸ್‌ಡೇ ಅಂದುಕೊಂಡೇ ಬಂದುಬಿಟ್ಟೆವು. ಫೂಲ್ಸ್ ಡೇನ ಇಂಟೆಲಿಜೆನ್ಸ್ ಡೇ ಮಾಡೋಣ.! ಅದನ್ನೀಗ ವೈಸ್ ಪೀಪಲ್‌ಡೇ ಮಾಡೋಣ ಎಂದುಕೊಂಡಿದ್ದೇನೆ. ಹಾಗಾಗಿ ಅದೇ ದಿನ ನಮ್ಮ ಹೊಸ ಆಪ್‌ನ್ನು ಲಾಂಚ್ ಮಾಡಿದ್ದೇನೆ. ಈಗ ಏನ್ ಮಾಡಿದ್ರೂ ಕೂಡ ಕಷ್ಟ ಆಗಿಬಿಟ್ಟಿದೆ. ನೇರವಾಗಿ ಮಾತಾಡಿದ್ರು ಕೂಡ ಲೆಫ್ಟ್, ರೈಟ್ ಅಂತ ಯೋಚನೆ ಮಾಡೋಥರ ಆಗಿದೆ. ಮಾತಾಡೋದಕ್ಕೆ ಸ್ವಲ್ಪ ಭಯನೂ ಆಗ್ತಾ ಇದೆ. ಏಕೆಂದರೆ, ಲೆಫ್ಟ್ ಇರೋನು ಕೂಡ



ಡಿಪೆಂಡ್ ಆಗಿರ್ತಾನೆ, ಇನ್ನೊಬ್ಬರ ಮೇಲೆ ವಾಲಿಕೊಂಡಿರ್ತಾನೆ. ರೈಟ್ ಇರೋನು ಕೂಡ ಇನ್ನೊಬ್ಬರ ಮೇಲೆ ವಾಲಿಕೊಂಡಿರ್ತಾನೆ. ನಾನು ಸೆಂಟರ್‌ನಲ್ಲಿ ಸ್ಟ್ರೈಟ್ ಆಗಿ ನಿಂತಿದ್ದೇನೆ. ಹಾಗಾಗಿ, ಇಂಡಿಪೆಂಡೆಂಟ್ ಆಗಿ ಯೋಚನೆ ಮಾಡ್ತೀನಿ ಅಂತ ಅಂದುಕೊಂಡಿದ್ದೇನೆ. ಈ ಐಡಿಯಾ ಮಾಡಿರೋದು ಕೂಡ ಇಂಡಿಪೆಂಡೆಂಟಾಗಿ, ಸ್ವತಂತ್ರವಾಗಿ ಯೋಚನೆ ಮಾಡೋರಿಗೆಂದೇ ಮಾಡಿರೋದು ಇದು ಎಂದವರು ಹೇಳಿದರು.

ನಾವು ಜೀವನದಲ್ಲಿ ಡಿಪೆಂಡೆಂಟ್ ಆಗಬಾರದು, ಇಂಡಿಪೆಂಡೆಂಟ್ ಆಗಿರ್ಬೇಕು ಅಂತ ಅಂದುಕೊಳ್ತೇವೆ. ಹಾಗೆ ಅಂದುಕೊಂಡೇ ನಾವು ಡಿಪೆಂಡೆಂಟ್ ಆಗಿಯೇ ಇರ್ತೇವೆ. ನಮ್ಮ ದೇಶ, ಪ್ರಪಂಚವೂ ಅಷ್ಟೇ. ಒಬ್ಬರಿಗೊಬ್ಬರು ಡಿಪೆಂಡೆಂಟ್ ಆಗಿರ್ತಾರೆ ತಪ್ಪಲ್ಲ. ಆದರೆ, ಎಷ್ಟರಮಟ್ಟಿಗೆ ನಾವು ಕಡಿಮೆ ಅವಲಂಬಿತರಾಗ್ತೇವೆ ಅನ್ನೋದು ಬಹಳ ಮುಖ್ಯವಾಗುತ್ತೆ. ಆದಷ್ಟು ಡಿಪೆಂಡೆನ್ಸಿ ಕಡಿಮೆ ಮಾಡಿಕೊಂಡ್ರೆ, ಈಗ ಎದುರಿಸುತ್ತಿರುವ ಸಮಸ್ಯೆಗಳು ಕಡಿಮೆಯಾಗುತ್ತವೆ. ಆ ರೀತಿ ಇಂಡಿಪೆಂಡೆಂಟ್ ಆಗಿ ಏನೋ ಒಂದು ಪ್ಲ್ಯಾನ್ ಮಾಡೋಣ ಅನಿಸಿತು. ಇದುವರೆಗೂ ಇದ್ದಿದ್ದು ಪ್ರಜಾಕೀಯ ರಿಯಲ್ ಅಲ್ಲವಾ ಅಂತ ಅನ್ನಬಹುದು. ಆದರೆ, ನನ್ನಪ್ರಕಾರ ಈ ಆಪ್ ಮೂಲಕ ನಿಮಗೆ ಗೊತ್ತಾಗುತ್ತೆ. ಇದು ರಿಯಲ್ ಪ್ರಜಾಕೀಯ ಅಂತ ಎಂದರು.

ನಾನು ಪ್ರಜಾಕೀಯ ಶುರು ಮಾಡಿದಾಗ ಏನೇನೆಲ್ಲಾ ಪ್ರಾಬ್ಲಂಗಳನ್ನ ಫೇಸ್ ಮಾಡಿದ್ದೇನೆ ಅಂತ ನಿಮಗೆಲ್ಲ ಗೊತ್ತು. ನೀವೆಲ್ಲರೂ ನನ್ನ ಜೊತೆನೇ ಇದ್ದೀರಾ, ನೋಡಿದ್ದೀರಾ ಕೂಡ. ನಾನು ಯಾವುದೋ ಒಂದು ಪಕ್ಷದ ಜೊತೆ ಹೋದೆ, ಅವರು ನನಗೆ ಕನ್ವಿನ್ಸ್ ಮಾಡಿರ್ಲಿಲ್ಲ. ಕೊನೆಗೆ ಟಿಕೆಟ್ ಕೊಡೋ ಟೈಮ್‌ನಲ್ಲಿ, ನಾವು ಮೇನ್ ಮಾತ್ರ ಟಿಕೆಟ್ ಕೊಡೋದು ಅಂದ್ರು. ಅಲ್ಲಿಂದ ನಾನೇ ಟಿಕೆಟ್ ತಗೊಂಡೆ. ಅದಾದ ಮೇಲೆ ನಾನೇ ಒಂದು ಪಕ್ಷ ಮಾಡಿದೆ ಎಂದು ಉಪೇಂದ್ರ ಹೇಳಿಕೊಂಡರು.

ಟ್ರೈಲರ್‌ನಲ್ಲಿ 'ಟೆರರ್'

ಸಿಲ್ಕ್ ಮಂಜು, ರವಿ ಹಾಗೂ ಸ್ಮಿತಾ ವಸಿಷ್ಠ ಅವರ ನಿರ್ಮಾಣದ, ರಂಜನ್ ಶಿವರಾಮ್ ಗೌಡ ಅವರ ನಿರ್ದೇಶನದ, ಆದಿತ್ಯ ನಾಯಕರಾಗಿ ನಟಿಸಿರುವ 'ಟೆರರ್' ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು. ಹಿರಿಯ ನಿರ್ದೇಶಕ ಎಸ್ ವಿ ರಾಜೇಂದ್ರಸಿಂಗ್ ಬಾಬು, ಜೈಜಗದೀಶ್, ವಿಜಯಲಕ್ಷ್ಮಿ ಸಿಂಗ್, ಸುಂದರರಾಜ್, ಪ್ರಮೀಳಾ ಜೋಷಾಯ್, ಡಿಂಗ್ರಿ ನಾಗರಾಜ್, ಲಹರಿ ವೇಲು ಹಾಗೂ ಬ್ರಹ್ಮಾಂಡ ಗುರೂಜಿ ಸೇರಿ 'ಟೆರರ್' ಚಿತ್ರದ ಟ್ರೇಲರ್‌ಗೆ ಚಾಲನೆ ನೀಡಿದರು.

ನಾಯಕ ಆದಿತ್ಯ ಮಾತನಾಡಿ ನಿರ್ದೇಶಕ ರಂಜನ್ ಮೊದಲ ನಿರ್ದೇಶನದಲ್ಲೇ ಒಂದೊಳ್ಳೆ ಕಥೆ ಮಾಡಿಕೊಂಡಿದ್ದಾರೆ. ನಾನು ಹಾಗೂ ಶ್ರೀನಗರ ಕಿಟ್ಟಿ 21 ವರ್ಷಗಳ ನಂತರ ಈ ಚಿತ್ರದಲ್ಲಿ ನಟಿಸಿದ್ದೇವೆ. ದೇವರಾಜ್, ಶಶಿಕುಮಾರ್, ಕುಮಾರ್ ಬಂಗಾರಪ್ಪ, ಶರತ್ ಲೋಹಿತಾಶ್ವ ಹೀಗೆ ಅನೇಕ ಹಿರಿಯ ಕಲಾವಿದರು ಚಿತ್ರದಲ್ಲಿ ನಟಿಸಿದ್ದಾರೆ. ಹರ್ಷವರ್ಧನ್ ರಾಜ್ ಅವರ ಸಂಗೀತ ಹಾಗೂ ಡಾ॥ವಿ.ನಾಗೇಂದ್ರಪ್ರಸಾದ್ ಅವರ ಸಾಹಿತ್ಯ ಚಿತ್ರದ ಹೈಲೈಟ್ ಎಂದರೆ ತಪ್ಪಾಗಲಾರದು. ನಮ್ಮ ಚಿತ್ರ ಇದೇ ಏಪ್ರಿಲ್ 10 ರಂದು ಬಿಡುಗಡೆಯಾಗುತ್ತಿದೆ ಎಂದರು.



ನಿರ್ದೇಶಕರು ಬಂದು ಕಥೆ ಹೇಳಿದಾಗ ನಿರ್ಮಾಪಕರು ಯಾರು ಎಂದು ಕೇಳಿದೆ. ಸಿಲ್ಕ್ ಮಂಜು ಅವರು ಅಂತ ಹೇಳಿದರು. ನಾನು ಕಥೆ ಹೇಳಬೇಡಿ. ಮಂಜು ಅವರು ನನ್ನ ಸಾಕಷ್ಟು ವರ್ಷಗಳ ಸ್ನೇಹಿತರು. ಅವರಿಗಾಗಿ ಈ ಸಿನಿಮಾ ಮಾಡುತ್ತೇನೆ ಅಂದೆ. ಗೆಳೆಯ ಆದಿತ್ಯ ಜೊತೆ ಆದಿ ಚಿತ್ರದಲ್ಲಿ ನಟಿಸಿದ್ದೆ. ಈ ಚಿತ್ರದಲ್ಲಿ ನೆಗೆಟಿವ್ ಪಾತ್ರದಲ್ಲಿ ನಟಿಸಿದ್ದೇನೆ ಎಂದು ನಟ ಶ್ರೀನಗರ ಕಿಟ್ಟಿ ಹೇಳಿದರು.

ಗೀತರಚನೆಕಾರ ಡಾ॥ವಿ.ನಾಗೇಂದ್ರಪ್ರಸಾದ್, ಸಂಗೀತ ನಿರ್ದೇಶಕ ಹರ್ಷವರ್ಧನ್ ರಾಜ್, ಕಲಾವಿದರಾದ ಸಿಹಿಕಹಿ ಚಂದ್ರು, ಕೀರ್ತಿ ರಾಜ್, ಕರಿ ಸುಬ್ಬು, ಮುಂಬೈ ನಟಿ ಶಿವಾಂಗಿ, ನಾಗೇಂದ್ರ ಅರಸ್ ಮುಂತಾದವರು 'ಟೆರರ್' ಚಿತ್ರದ ಕುರಿತು ಮಾತನಾಡಿದರು.

ವಿಜೃಂಭಣೆಯ ಶ್ರೀಗುಂಜಾ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ




ತಿ.ನರಸೀಪುರದಲ್ಲಿ ಗುರುವಾರ ಶ್ರೀಗುಂಜಾ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ತಿ.ನರಸೀಪುರ, ಏ.2– ತ್ರಿವೇಣಿ ಸಂಗಮ ಹಾಗೂ ದಕ್ಷಿಣಕಾಶಿ ಎಂದೇ ಪ್ರಸಿದ್ಧಿ ಪಡೆದಿರುವ ತಿ.ನರಸೀಪುರದ ಮಹಾಲಕ್ಷ್ಮಿ ಸಮೇತ ಶ್ರೀಗುಂಜಾ ನರಸಿಂಹ ಸ್ವಾಮಿ ಬ್ರಹ್ಮ ರಥೋತ್ಸವ ಗುರುವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು. ಈ ವೇಳೆ ಭಕ್ತರು ಶ್ರದ್ಧಾಭಕ್ತಿಯಿಂದ ಜಾತ್ರಾ ಮಹೋತ್ಸವದಲ್ಲಿ ಭಾಗಿಯಾಗಿ ರಥ ಎಳೆದು ಸಂಭ್ರಮಿಸಿದರು.

ಶುಭ ಮಿಥುನ ಲಗ್ನದಲ್ಲಿ ದೇವಾಲಯದ ಪ್ರಧಾನ ಅರ್ಚಕರಾದ ಶ್ರೀಧರ್ ಭಟ್, ವೆಂಕಟೇಶ್ ಹಾಗೂ ಅರ್ಚಕ ವೃಂದ ಧಾರ್ಮಿಕ ವಿಧಿ ವಿಧಾನಗಳನ್ನು ಪೂರೈಸಿದರು. ಪಟ್ಟಣದ ರಥದ ಬೀದಿಗಳಲ್ಲಿ ಉತ್ಸವ ಮೂರ್ತಿಗಳ ಮೆರವಣಿಗೆಯ ಮಂಟಪೋತ್ಸವ ನಡೆಯಿತು. ನಂತರ ಮಧುವಣಗಿತ್ತಿಯಂತೆ ಸಿಂಗಾರಗೊಂಡಿದ್ದ ರಥದಲ್ಲಿ ಉತ್ಸವ ಮೂರ್ತಿಯನ್ನು ವೇದ ಮಂತ್ರ ಪಠಿಸಿ ಪ್ರತಿಷ್ಠಾಪಿಸಲಾಯಿತು.

ಮಧ್ಯಾಹ್ನ 12.30ಕ್ಕೆ ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ರಥದ ಚಕ್ರಕ್ಕೆ ಈಡುಗಾಯಿ ಒಡೆಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. 12.50ಕ್ಕೆ ಆರಂಭಗೊಂಡ ರಥೋತ್ಸವ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಸುಮಾರು 2 ಕಿಮೀನಷ್ಟು ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮಧ್ಯಾಹ್ನ 2.30ರ ವೇಳೆಗೆ ಸ್ವಸ್ಥಾನ ತಲುಪಿತು. ಈ ಸಂದರ್ಭ ಜಿಲ್ಲೆಯ ವಿವಿಧ ಮೂಲೆಗಳಿಂದ ಆಗಮಿಸಿದ ಸಾವಿರಾರು ಭಕ್ತರು ರಥ ಎಳೆದು ಭಕ್ತಿ ಪರಾಕಾಷ್ಠೆ ಮೆರೆದರು. ಅಲ್ಲದೇ ರಸ್ತೆಯ ಇಕ್ಕೆಲಗಳಲ್ಲಿ ನೆರೆದಿದ್ದ ಭಕ್ತರು ರಥಕ್ಕೆ ಹಣ್ಣು–ಜವನ ಎಸೆದು ಹರಕೆ ತೀರಿಸಿದರು. ನವ ವಧು–ವರರು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು.

ರಥೋತ್ಸವ ಅಂಗವಾಗಿ ಪಟ್ಟಣ ಸೇರಿದಂತೆ ಗುಂಜಾನರಸಿಂಹಸ್ವಾಮಿ ದೇವಸ್ಥಾನ ಜನಸಾಗರದಿಂದ ತುಂಬಿತ್ತು. ಈ ಬಾರಿಯೂ ಯುವಕರ ಬಣ್ಣದೊಕುಳಿಗೆ ನಿಷೇಧ ಹೇರಲಾಗಿತ್ತು. ನೆತ್ತಿ ಸುಡುವ ಬಿಸಿಲಿನ ನಡುವೆಯೂ ಸಾವಿರಾರು ಭಕ್ತರು ಉತ್ಸವದಲ್ಲಿ ಪಾಲ್ಗೊಂಡು ಭಕ್ತಿಭಾವ ಮೆರೆದರು.

ರಥೋತ್ಸವಕ್ಕೆ ಆಹ್ವಾನ: ಸಂಪ್ರದಾಯದಂತೆ ಕೆಬ್ಬೆ ವ್ಯಾಸರಾಜಪುರ, ಗೋಪಾಲಪುರ ಹಾಗೂ ತಿ.ನರಸೀಪುರದ ಯಜಮಾನರು ಆಲಗೂಡು ಗ್ರಾಮಕ್ಕೆ ತೆರಳಿ ಅಲ್ಲಿನ ಯಜಮಾನರನ್ನು ರಥೋತ್ಸವದಲ್ಲಿ ಭಾಗವಹಿಸುವಂತೆ ಆಹ್ವಾನಿಸಿ, ಅವರನ್ನು ಕರೆತಂದು ದೇವಾಲಯದಲ್ಲಿ ದೇವರಿಗೆ ಮಹಾಮಂಗಳಾರತಿ ನೆರವೇರಿಸಿ ಪ್ರದಕ್ಷಿಣೆ ಹಾಕಿದರು. ನಂತರ ಉತ್ಸವ ಮೂರ್ತಿಗಳಿಗೆ ಮಹಾಮಂಗಳಾರತಿ ನೆರವೇರಿದ ನಂತರ ಬ್ರಹ್ಮ ರಥೋತ್ಸವ ವಿದ್ಯುಕ್ತವಾಗಿ ಆರಂಭವಾಯಿತು.

ವಿವಿಧ ಸಂಘ ಸಂಸ್ಥೆಗಳಿಂದ ಪ್ರಸಾದ ವಿತರಣೆ: ವಿವಿಧ ಸಂಘ ಸಂಸ್ಥೆಗಳ ಮುಖಂಡರು ಬಿಸಿಲಿನ ಬೇಗೆಯಿಂದ ಬಳಲಿದ್ದ ಭಕ್ತರಿಗೆ ಪಾನಕ, ಮಜ್ಜಿಗೆ, ರೈಸ್‌ಬಾತ್, ಮೊಸರನ್ನ, ಪುಳಿಯೋಗರೆ, ಲಾಡು, ಕುಡಿಯುವ ನೀರಿನ ಬಾಟಲ್‌ಗಳನ್ನು ವಿತರಿಸಿದರು. ಇದೇ ಮೊದಲ ಬಾರಿಗೆ ವಜ್ರಮಲೆ ಮಹದೇಶ್ವರ ಸಂಘದವರು ಸಾವಿರಾರು ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಿದ್ದರು. ಮುಂಜಾಗ್ರತಾ ಕ್ರಮವಾಗಿ ಹೆಚ್ಚಿನ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ರಥೋತ್ಸವದ ಹಿನ್ನೆಲೆಯಲ್ಲಿ ದೇವಾಲಯದಲ್ಲಿ ಏ.1 ರಿಂದಲೇ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಲಕ್ಷ್ಮಿ ಕಲ್ಯಾಣೋತ್ಸವ ಗಜೇಂದ್ರ ಪರಿಪಾಲನೋತ್ಸವ, ಏ.2ರಂದು ಬ್ರಹ್ಮ ರಥೋತ್ಸವ ನಡೆದಿದ್ದು, ಏ.3ರಂದು ತಿರುನಾಳ್ ಕಟ್ಲೆ ಉತ್ಸವ, ಡೋಲೋತ್ಸವ, ಶಯನೋತ್ಸವ, ಏ.4 ರಂದು ಅಭವೃತ ಸ್ನಾನ, ಧ್ವಜಾರೋಹಣ, ಏ.5ರಂದು ಮಹಾಭಿಷೇಕ ಹಾಗೂ ಹನುಮಂತೋತ್ಸವ, ಏ.6 ರಂದು ವೈಮಾಳಿಗೆ ಉತ್ಸವದೊಂದಿಗೆ ಜಾತ್ರೋತ್ಸವದ ಧಾರ್ಮಿಕ ಕಾರ್ಯಕ್ರಮಗಳಿಗೆ ತೆರೆ ಬೀಳಲಿದೆ.

ಮಾಜಿ ಎಂಎಲ್‌ಸಿ ಸಿ.ರಮೇಶ್, ದೇವಸ್ಥಾನದ ಪಾರುಪತ್ತೇದಾರ್ ದಿಲೀಪ್ (ದೀಪು), ಕಂತೇಕಟ್ಟೆ ಗೋಪಾಲಸ್ವಾಮಿ, ತಿ.ನರಸೀಪುರ ಯಜಮಾನರಾದ ರಾಜು, ಮಹದೇವಸ್ವಾಮಿ, ಪುಳ್ಳಾರಿಗೌಡ, ಮಹದೇವ್, ಕೆ.ನಂಜುಂಡಸ್ವಾಮಿ, ಮಹಾದೇವಪ್ಪ, ಗೋಪಾಲಪುರ ಯಜಮಾನ ಮಲ್ಲೇಶ್, ಆಲಗೂಡು ಯಜಮಾನ ಬಾಳೆಮಂಡಿ ಸಿದ್ದಪ್ಪ ಕೆಬ್ಬೆ ವ್ಯಾಸರಾಜಪುರ ಯಜಮಾನ ವಕೀಲ ರಂಗನಾಥ ಪ್ರಸಾದ್, ಜ್ಞಾನೇಂದ್ರ, ಕೃಷ್ಣ, ಚಿನ್ನಸ್ವಾಮಿ, ರಾಮಚಂದ್ರ, ರಮೇಶ್, ಶಿಲ್ಪಿ ಕೆಂಪಯ್ಯನಹುಂಡಿ ಶಿವಕುಮಾರ್, ಕಸಾಪ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ, ತಾಲೂಕು ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಶಿವಶಂಕರಮೂರ್ತಿ, ಸಂತೃಪ್ತಿ ಕುಮಾರ್, ಅಗಸ್ತ್ಯೇಶ್ವರಸ್ವಾಮಿ ದೇವಾಲಯದ ಪಾರುಪತ್ತೇದಾರ್ ಟಿ.ಎಸ್.ಚೇತನ್, ಬಂಡಿಕರಾದ ಗಿರೀಶ್, ಶ್ರೀಪಾದ, ಕಂದಾಯಾಧಿಕಾರಿ ಮಹೇಂದ್ರ, ಗ್ರಾಮಲೆಕ್ಕಿಗ ವಿಕಾಸ್, ಸೆಸ್ಕಾಂ ಅಧಿಕಾರಿ ವೀರೇಶ್ ಸೇರಿದಂತೆ ಮತ್ತಿತರರಿದ್ದರು.

ನೀರು, ಮಜ್ಜಿಗೆ, ಪಾನಕ ವಿತರಣೆ



ಭಕ್ತರಿಗೆ ನೀರು, ಮಜ್ಜಿಗೆ, ಪಾನಕ ವಿತರಿಸಲಾಯಿತು.

ತಿ.ನರಸೀಪುರ, ಏ.2– ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ಜಾತ್ರೆಗಳು ಜನರ ನಡುವಿನ ಬಾಂಧವ್ಯ ಬೆಸೆಯುವ ಕೊಂಡಿಗಳು ಎಂದು ಕಾಡುಬಸವೇಶ್ವರ ದೇವಸ್ಥಾನದ ಮಾಜಿ ಅಧ್ಯಕ್ಷ ಗೌತಮ್ ಚಂದ್ ಜೈನ್ ಬಣ್ಣಿಸಿದರು.

ಶ್ರೀಗುಂಜಾನರಸಿಂಹಸ್ವಾಮಿ ರಥೋತ್ಸವದ ಅಂಗವಾಗಿ ಪಟ್ಟಣದ ಮಾರ್ಕೆಟ್ ರಸ್ತೆಯಲ್ಲಿರುವ ತಿರುಮಲ ಮತ್ತು ಧನಲಕ್ಷ್ಮಿ ಜ್ಯೂಯಲರ್ಸ್ ಹಾಗೂ ಬ್ಯಾಂಕರ್ಸ್ ಎದುರು ಭಕ್ತರಿಗೆ ನೀರು, ಮಜ್ಜಿಗೆ, ಪಾನಕ ವಿತರಿಸಿ ಮಾತನಾಡಿದ ಅವರು, ಇದೇ ಪ್ರಥಮ ಬಾರಿಗೆ ರಥೋತ್ಸವದಲ್ಲಿ ಭಕ್ತರಿಗೆ ಮಜ್ಜಿಗೆ, ಪಾನಕ, ನೀರನ್ನು ವಿತರಿಸುತ್ತಿದ್ದೇವೆ. ಮುಂದಿನ ದಿನಗಳಲ್ಲೂ ಇದನ್ನು ಮುಂದುವರೆಸಿ ಕೊಂಡು ಹೋಗುತ್ತೇವೆ ಎಂದರು. ಇದೇ ವೇಳೆ ಭಕ್ತರಿಗೆ ನೀರು, ಮಜ್ಜಿಗೆ, ಪಾನಕ ವಿತರಿಸಲಾಯಿತು. ಈ ವೇಳೆ ಮುಖಂಡರಾದ ನವಿಲೂರು ಶಿವಣ್ಣ, ಗುತ್ತಿಗೆದಾರ ಬಿ.ಮಂಟೇಲಿಂಗಪ್ಪ ಪಿಎಸಿಎಸ್ ಅಧ್ಯಕ್ಷ ಮುಸುವಿನ ಕೊಪ್ಪಲು ಶಿವರಾಂ, ತೇರಂಬಳ್ಳಿ ಸಿದ್ದರಾಜು ಹಾಜರಿದ್ದರು.

ಹೊಸಹೊಳಲಲ್ಲಿ ವಾತ್ಸಲ್ಯ ಯೋಜನೆಯಡಿ ಮನೆ ಹಸ್ತಾಂತರ

ಧರ್ಮಸ್ಥಳ ಸಂಸ್ಥೆಯಿಂದ ಬಡಜನರಿಗೆ ನೆರವು: ವಿಜಯಕುಮಾರ ನಾಗನಾಳ



ಮನೆಯನ್ನು ರತ್ನಮ್ಮ–ಪುಟ್ಟಯ್ಯ ದಂಪತಿಗೆ ಹಸ್ತಾಂತರಿಸಲಾಯಿತು.

ಹೆಚ್.ಡಿ.ಕೋಟೆ, ಏ.2– ಅಸಹಾಯಕರಿಗೆ ವಾತ್ಸಲ್ಯ ಯೋಜನೆಯಡಿ ಮನೆ ಮತ್ತು ಮಾಸಾಶನ ನೀಡುವ ಮೂಲಕ ಡಾ.ಡಿ. ವೀರೇಂದ್ರ ಹೆಗ್ಗಡೆಯವರು ರಾಜ್ಯದ ಪ್ರತಿ ಯೊಂದು ಗ್ರಾಮದ ಅನೇಕ ಬಡ ಕುಟುಂ ಬಗಳಿಗೆ ನೆರವಾಗಿದ್ದಾರೆ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ವಿಜಯಕುಮಾರ ನಾಗನಾಳ ತಿಳಿಸಿದರು.

ತಾಲೂಕಿನ ಹೊಸಹೊಳಲು ಗ್ರಾಮದಲ್ಲಿ ವಾತ್ಸಲ್ಯ ಯೋಜನೆಯಡಿ ನಿರ್ಮಿಸಿದ ಮನೆಯನ್ನು ಫಲಾನುಭವಿಗಳಾದ ರತ್ನಮ್ಮ, ಪುಟ್ಟಯ್ಯ ದಂಪತಿಗೆ ಹಸ್ತಾಂತರಿಸಿ ಮಾತನಾಡಿದ ಅವರು, ಸಂಸ್ಥೆ ವತಿಯಿಂದ ತಾಲೂಕಿನ 136 ಮಂದಿಗೆ ಮಾಸಾಶನ ನೀಡಲಾಗುತ್ತಿದೆ. ಅದೇ ರೀತಿ ಅಸಹಾಯಕ ಕುಟುಂಬಗಳಿಗೆ ವಾತ್ಸಲ್ಯ ಯೋಜನೆಯಡಿ ರಾಜ್ಯದಲ್ಲಿ 1100ಕ್ಕೂ ಹೆಚ್ಚು ಮನೆಗಳು ಹಾಗೂ ತಾಲೂಕಿನಲ್ಲಿ 8 ಮನೆಗಳನ್ನು ಕಟ್ಟಿಸಿ ಕೊಡಲಾಗಿದೆ. ಅಲ್ಲದೇ ಮಹಿಳೆಯರಿಗೆ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ನೀಡ ಲಾಗುತ್ತಿದೆ ಎಂದ ಅವರು ತಾಲೂಕಿನ ಅಂತರಸಂತೆ ವಲಯದ ಮಹಿಳೆಯರು ಸಾಲವನ್ನು ಕೃಷಿ ಕ್ಷೇತ್ರಕ್ಕೆ ಬಳಸಿಕೊಂಡು, ಆರ್ಥಿಕಾಭಿವೃದ್ಧಿ ಕಾಣುತ್ತಿದ್ದಾರೆ. ಹಾಗೇ ಸಾಲವನ್ನು ಮರುಪಾವತಿ ಮಾಡುವಲ್ಲಿ ಮುಂದಾಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಒಕ್ಕೂಟದ ಅಧ್ಯಕ್ಷ ಟಿ.ಮಂಜು ಮಾತನಾಡಿ, ರತ್ನಮ್ಮ ಮತ್ತು ಪುಟ್ಟಯ್ಯರಿಗೆ ಗ್ರಾಪಂನಿಂದ ಮನೆ ಮಂಜೂರು ಮಾಡಿಸಲು ಸಾಧ್ಯವಾಗಲಿಲ್ಲ. ಆದರೆ ಶ್ರೀಕ್ಷೇತ್ರ ಧರ್ಮಸ್ಥಳ ಸಂಸ್ಥೆಯಿಂದ ಮನೆ ನೀಡಿರುವುದು ಸಂತಸ ತಂದಿದೆ. ಗ್ರಾಮದಲ್ಲಿ ನಮ್ಮ ಊರು ನಮ್ಮ ಕೆರೆ ಯೋಜನೆಯಲ್ಲಿ ಕೆರೆ ಹೂಳು ತೆಗೆದು ಅಭಿವೃದ್ಧಿ ಮಾಡಿರುವುದರಿಂದ ರೈತರಿಗೆ ಅನುಕೂಲವಾಗಿದೆ ಎಂದರು.

ಇದೇ ವೇಳೆ ಹೇಮಾವತಿ ಡಾ. ವಿರೇಂದ್ರ ಹೆಗ್ಗಡೆಯವರ ಹುಟ್ಟುಹಬ್ಬದ ಅಂಗವಾಗಿ 136 ಮಾಸಾಶನ ಫಲಾನುಭವಿಗಳ ಮನೆಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು.

ತಾಲೂಕು ಯೋಜನಾಧಿಕಾರಿ ಭಾಸ್ಕರ್, ತಾಲೂಕು ಕಸಾಪ ಅಧ್ಯಕ್ಷ ಪ್ರಮೋದ, ಮುಖಂಡರಾದ ಭೈರೇಗೌಡ, ಶಿವಪ್ರಕಾಶ್, ಪದ್ಮ ರಾಜು, ಮಹದೇವು, ಅಂತರಸಂತೆ ವಲಯ ಮೇಲ್ವಿಚಾರಕಿ ಶಾಂತ, ಗಣೇಶ್ ಹಾಗೂ ಮಹಿಳಾ ಸಂಘದ ಸದಸ್ಯರಿದ್ದರು.

ನಂ.ಗೂಡು: ಗೃಹಬಳಕೆ ಸಿಲಿಂಡರ್‌ಗಾಗಿ ಮುಗಿಬಿದ್ದ ಜನತೆ



ಸಿಲಿಂಡರ್‌ಗಾಗಿ ಸಾರ್ವಜನಿಕರು ಸರದಿ ಸಾಲಿನಲ್ಲಿ ನಿಂತಿರುವುದು.

ನಂಜನಗೂಡು, ಏ.2– ಕೊಲ್ಲಿ ದೇಶಗಳ ನಡುವೆ ನಡೆಯುತ್ತಿರುವ ಯುದ್ಧದಿಂದಾಗಿ ದೇಶಾದ್ಯಂತ ಗ್ಯಾಸ್ ಸಿಲಿಂಡರ್‌ಗಳ ಕೊರತೆಯಾಗಿದ್ದು, ನಗರದಲ್ಲಿ ಜನತೆ ಖಾಲಿ ಸಿಲಿಂಡರ್ ಹಿಡಿದು ಗೃಹ ಬಳಕೆ ಗ್ಯಾಸ್ ಸಿಲಿಂಡರ್ ಪಡೆಯಲು ಸಾಲುಗಟ್ಟಿ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ.

ಗೃಹಬಳಕೆಯ ಎಲ್‌ಪಿಜಿ ಪಡೆಯುವ ಸಲುವಾಗಿ ಸುಮಾರು 15 ರಿಂದ 20 ದಿನಗಳ ಮುಂಚೆಯೇ ಬುಕ್ ಮಾಡಿದ್ದರೂ ಸಹ ಗ್ರಾಹಕರಿಗೆ ಗ್ಯಾಸ್ ಸಿಲಿಂಡರ್ ಲಭ್ಯವಾಗುತ್ತಿಲ್ಲ. ಗ್ರಾಮೀಣ ಜನರಂತೂ ಸಿಲಿಂಡರ್ ಸಿಗದೆ ಪರದಾಡುತ್ತಿದ್ದಾರೆ. ನಗರ ಪ್ರದೇಶದಲ್ಲೂ ಸಹ ಗ್ಯಾಸ್ ಸಿಲಿಂಡರ್ ಕೊರತೆ ಹೆಚ್ಚಾಗಿದೆ. ಇದರಿಂದ ನಗರ ಪ್ರದೇಶದ ನೌಕರರು ಮತ್ತು ಕೂಲಿ ಕಾರ್ಮಿಕರು ಸಿಲಿಂಡರ್ ಪಡೆಯುವ ಸಲುವಾಗಿ ರಜೆ ಹಾಕಿ ಸಾಲುಗಟ್ಟಿ ನಿಂತರೂ ಸಹ ಗ್ಯಾಸ್ ಸಿಲಿಂಡರ್ ಲಭ್ಯವಾಗುತ್ತಿಲ್ಲ. ಗ್ರಾಮೀಣ ರೈತರು ಮತ್ತು ಕೂಲಿ ಕಾರ್ಮಿಕರು ಒಂದು ದಿನದ ಕೂಲಿಯನ್ನು ಬಿಡುವ ಜೊತೆಗೆ ಖಾಲಿ ಸಿಲಿಂಡರ್ ಸಾಗಿಸಲು ಆಟೋ, ಟೆಂಪೋಗಳಿಗೆ ಬಾಡಿಗೆ ಕೊಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ಗುರುವಾರ ಚೌಡೇಶ್ವರಿ ಇಂಡಿಯನ್ ಗ್ಯಾಸ್ ಕಚೇರಿ ಎದುರು ಗ್ರಾಮೀಣ ಮತ್ತು ನಗರ ಪ್ರದೇಶದ ಜನರು ಸಿಲಿಂಡರ್‌ಗಾಗಿ ಮುಗಿಬಿದ್ದರು.

> “ನಾವು ಗ್ಯಾಸ್ ಬುಕ್ ಮಾಡಿ 20 ದಿನ ಕಳೆದಿದೆ. ಕೂಲಿ ಬಿಟ್ಟು ಗ್ರಾಮೀಣ ಪ್ರದೇಶದಿಂದ ಬಾಡಿಗೆ ಆಟೋ ಮಾಡಿಕೊಂಡು ಖಾಲಿ ಸಿಲಿಂಡರ್ ಹೊತ್ತು ಏಜೆನ್ಸಿ ಮುಂಭಾಗ ಬಂದು ವಿಚಾರಿಸಲಾಗಿ ಅವರು ನಗರದ ಮಹದೇಶ್ವರ ಲೇಔಟ್ ಹತ್ತಿರ ಸಿಲಿಂಡರ್ ವಿತರಿಸುತ್ತಾರೆ ಅಲ್ಲಿಗೆ ಹೋಗಿ ಸಿಲಿಂಡರ್ ಪಡೆಯಿರಿ ಎಂದರು. ನಾವು ಮತ್ತೆ ಬಾಡಿಗೆ ಆಟೋ ಮಾಡಿಕೊಂಡು ಸ್ಥಳಕ್ಕೆ ಬಂದರೂ ಸಹ ಸಿಲಿಂಡರ್ ವಿತರಿಸಲಿಲ್ಲ. ಸಿಲಿಂಡರ್ ನಿಮ್ಮ ಗ್ರಾಮಕ್ಕೆ ಬರುತ್ತದೆ ಹೋಗಿ ಎಂದು ಹೇಳುತ್ತಿದ್ದಾರೆ ನಾಳೆಯೊಳಗೆ ಸಿಲಿಂಡರ್ ವಿತರಿಸದಿದ್ದಲ್ಲಿ ಗ್ರಾಮಸ್ಥರೊಡಗೂಡಿ ಕಚೇರಿಗಳ ಮುಂದೆ ಪ್ರತಿಭಟನೆ ನಡೆಸಲಾಗುವುದು.
> – ವಿಜಯ್, ಗ್ರಾಹಕ.

ಆಹಾರ ಮತ್ತು ನಾಗರಿಕ ಪೂರೈಕೆ ಸಚಿವಾಲಯದ ಅಧಿಕಾರಿಗಳು ಕ್ರಮ ವಹಿಸಿ ಕಾಳಸಂತೆಯಲ್ಲಿ ಸಿಲಿಂಡರ್ ಮಾರಾಟ ಮಾಡುವುದನ್ನು ತಡೆಹಿಡಿದು ಗ್ಯಾಸ್ ಬುಕ್ಕಿಂಗ್ ಮಾಡಿದ ಕನಿಷ್ಠ 7 ರಿಂದ 10 ದಿನಗಳ ಒಳಗೆ ಸಿಲಿಂಡರ್ ದೊರಕುವಂತೆ ಕ್ರಮವಹಿಸಬೇಕು. ಬುಕ್ ಮಾಡಿ ಹೆಚ್ಚು ದಿನ ಆದರೂ ಸಹ ಗ್ರಾಹಕರಿಗೆ ಸಿಲಿಂಡರ್ ವಿತರಿಸದೆ ಅಕ್ರಮವಾಗಿ ಹೆಚ್ಚಿನ ಬೆಲೆಗೆ ಸಿಲಿಂಡರ್ ಮಾರಾಟ ಮಾಡುವ ಸಿಬ್ಬಂದಿಗಳ ಮೇಲೆ ದೂರು ದಾಖಲಿಸಿ ಕಾನೂನು ಕ್ರಮ ಜರುಗಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಹುಣಸನಾಳು ಗ್ರಾಮದ ಲಕ್ಷ್ಮಮ್ಮ ಮಾತನಾಡಿ, ನಾವು ಸಿಲಿಂಡರ್ ಬುಕ್ ಮಾಡಿ 20 ದಿನ ಕಳೆದಿದೆ. ದಿನನಿತ್ಯ ಗ್ಯಾಸ್ ಹೊತ್ತು ಗ್ಯಾಸ್ ಏಜೆನ್ಸಿಯವರ ಆಟೋಗಳು ಗ್ರಾಮಕ್ಕೆ ಬರುತ್ತವೆ. ಆದರೂ ನಮಗೆ ಸಿಲಿಂಡರ್ ಕೊಡುತ್ತಿಲ್ಲ. ಆದರೆ ಕೆಲವರು ಬುಕ್ ಮಾಡಿ ಕೇವಲ 2 ದಿನಕ್ಕೆ ಅವರಿಗೆ ಸಿಲಿಂಡರ್ ಸಿಗುತ್ತಿದೆ. ಅಲ್ಲದೆ ಸಿಲಿಂಡರ್ ಕೊಡುವ ಡೆಲಿವರಿ ಸಿಬ್ಬಂದಿಗಳು ನಿಗದಿತ ಅವಧಿಗೆ ಸಿಲಿಂಡರ್ ಕೊಡದೆ 1 ಸಾವಿರ ಸಿಲಿಂಡರ್‌ಗೆ 2 ಸಾವಿರ ಪಡೆದು ಮಾರಾಟ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಟೆಸ್ಟಿಂಗ್ ಟ್ರ್ಯಾಕ್ ಕಾಮಗಾರಿಗೆ ಭೂಮಿ ಪೂಜೆ



ಟೆಸ್ಟಿಂಗ್ ಟ್ರ್ಯಾಕ್ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಭೂಮಿ ಪೂಜೆ ನೆರವೇರಿಸಿದರು.

ಹುಣಸೂರು, ಏ.2– ನಗರದ ಶ್ರೀಶನೇಶ್ವರಸ್ವಾಮಿ ದೇವಾಲಯದ ಬಳಿ 5 ಕೋಟಿ ರೂ. ವೆಚ್ಚದ ವಾಹನಗಳ ಚಾಲನಾ ಪರೀಕ್ಷಾ (ಟೆಸ್ಟಿಂಗ್ ಟ್ರ್ಯಾಕ್) ಪಥ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಶಾಸಕರು, ಹುಣಸೂರು ಉಪವಿಭಾಗ ಕೇಂದ್ರವಾಗಿದ್ದು, ತಾಲೂಕಿನ ಜನರು ಇಲ್ಲಿಗೆ ಡಿಎಲ್, ಆರ್‌ಸಿ ಸೇರಿದಂತೆ ವಿವಿಧ ದಾಖಲಾತಿಗಳನ್ನು ಪಡೆಯಲು ಬರುತ್ತಾರೆ. ಪ್ರಸ್ತುತ ಇರುವ ಕಚೇರಿ ಚಿಕ್ಕದಾಗಿದ್ದು, ಉತ್ತಮ ಮೂಲ ಸೌಕರ್ಯವುಳ್ಳ ಚಾಲನಾ ಪರೀಕ್ಷಾ (ಟೆಸ್ಟಿಂಗ್ ಟ್ರ್ಯಾಕ್) ಪಥ ನಿರ್ಮಿಸುವಂತೆ ನಾಗರಿಕರು ಬೇಡಿಕೆ ಸಲ್ಲಿಸಿದ್ದರು. ಅದರಂತೆ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

ಕಾಮಗಾರಿ ವೇಳೆ ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ನಡೆಸಬೇಕು. ಸಾರಿಗೆ ಅಧಿಕಾರಿಗಳು ಮತ್ತು ಡ್ರೈವಿಂಗ್ ಟ್ರೈನಿಂಗ್ ಸೆಂಟರ್‌ಗಳು ಇದರ ಸದ್ಬಳಕೆಗೆ ಮುಂದಾಗಬೇಕು ಎಂದ ಅವರು, ನಗರದಲ್ಲಿ ಸಾರಿಗೆ ಇಲಾಖೆ ಕಚೇರಿ ನಿರ್ಮಾಣಕ್ಕೆ ಮುಂದಿನ ದಿನಗಳಲ್ಲಿ ಸರ್ಕಾರದ ಅನುದಾನಕ್ಕೆ ಪ್ರಯತ್ನಿಸಲಾಗುವುದು ಎಂದರು.

ಈ ವೇಳೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ತಹಸೀಲ್ದಾರ್ ಜಿ.ಮಂಜುನಾಥ್, ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ನಯಾಜ್ ಪಾಷ, ಅಧೀಕ್ಷಕರಾದ ಕೆ.ಡಿ.ಸತೀಶ್, ಹಿರಿಯ ಮೋಟಾರ್ ವಾಹನ ನಿರೀಕ್ಷಕ ಡಿ.ಎಂ.ಮಹೇಶ್, ಮೋಟಾರ್ ವಾಹನ ನಿರೀಕ್ಷಕ ಕೆ.ಜೆ.ತ್ಯಾಗರಾಜ್, ಮುಖಂಡರಾದ ಗಣೇಶ್ ಗೌಡ, ಸತೀಶ್ ಪಾಪಣ್ಣ, ನಗರಸಭಾ ಮಾಜಿ ಸದಸ್ಯ ಕೃಷ್ಣರಾಜಗುಪ್ತ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಕೆ.ಗಣೇಶ್‌ಗೌಡ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಬಸವಲಿಂಗಯ್ಯ, ಮಾಜಿ ಜಿಪಂ ಸದಸ್ಯ ಸುರೇಂದ್ರ, ದಾ.ರಾ.ಮಹೇಶ್, ಸಿಬ್ಬಂದಿಗಳಾದ ಅನಿಲ್, ಶಾರದಾದೇವಿ, ಮಹದೇವ್, ಹಾಗೂ ವಿವಿಧ ಡ್ರೈವಿಂಗ್ ಸ್ಕೂಲ್‌ಗಳ ಮಾಲೀಕರು ಹಾಜರಿದ್ದರು.

ಶ್ರೀವಾಲ್ಮೀಕಿ ಸಮಾಗಮ ಸೌಹಾರ್ದ ಸಹಕಾರಿ ಸಂಘದ ಚುನಾವಣೆ

ಅಧ್ಯಕ್ಷ ಸೋಮೇಶ್ ನಾಯಕ, ಉಪಾಧ್ಯಕ್ಷರಾಗಿ ರಾಜಪ್ಪ ಆಯ್ಕೆ



ನೂತನ ಅಧ್ಯಕ್ಷರಾಗಿ ಸೋಮೇಶ್ ನಾಯಕ, ಉಪಾಧ್ಯಕ್ಷರಾಗಿ ರಾಜಪ್ಪ ಆಯ್ಕೆಯಾದರು.

ನಂಜನಗೂಡು, ಏ.2– ನಗರದ ಶ್ರೀವಾಲ್ಮೀಕಿ ಸಮಾಗಮ ಸೌಹಾರ್ದ ಸಹಕಾರಿ ಸಂಘದ ನೂತನ ಅಧ್ಯಕ್ಷರಾಗಿ ಸೋಮೇಶ್ ನಾಯಕ ಹಾಗೂ ಉಪಾಧ್ಯಕ್ಷರಾಗಿ ರಾಜಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸೋಮೇಶ್ ನಾಯಕ, ಉಪಾಧ್ಯಕ್ಷ ಸ್ಥಾನಕ್ಕೆ ರಾಜಪ್ಪ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಸಹಕಾರ ಇಲಾಖೆಯ ಧನಲಕ್ಷ್ಮಿ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ನೂತನ ಅಧ್ಯಕ್ಷ ಸೋಮೇಶ ನಾಯಕ ಮಾತನಾಡಿ, ತಾಲೂಕಿನಲ್ಲಿ ಮೊದಲ ಬಾರಿಗೆ ಸಹಕಾರ ಸಂಘ ಪ್ರಾರಂಭಿಸಲಾಗಿದೆ. ಮುಂದಿನ ದಿನಗಳಲ್ಲಿ ಸಂಘದ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಸಂಘದಿಂದ ಸಿಗುವ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ ಎಲ್ಲರಿಗೂ ತಲುಪಿಸುವ ಕೆಲಸವನ್ನು ಮಾಡುತ್ತೇನೆ. ಸಂಘದಲ್ಲಿ 3 ಸಾವಿರ ಷೇರುಗಳನ್ನು ಸಂಗ್ರಹಿಸುವ ಗುರಿ ಹೊಂದಲಾಗಿದೆ ಎಂದರು.

ಈ ವೇಳೆ ನಿರ್ದೇಶಕರಾದ ಎಸ್.ಮಹೇಶ್, ಎನ್.ಎಂ.ಮಹದೇವಸ್ವಾಮಿ, ರವೀಂದ್ರ, ಸಿ.ಹೊಣಕಾರ ನಾಯಕ, ಎಂ.ಶಿವಣ್ಣ, ಆರ್.ರಂಗಸ್ವಾಮಿ, ಎಂ.ಕಾವ್ಯ, ಶಾರದ, ಸಿಇಓ ಬಂಗಾರ ಗಿರಿ ನಾಯಕ, ನಾಮ ನಿರ್ದೇಶಕರಾದ ಮಹೇಶ್, ಕೆ.ಡಿ.ಮಂಜು, ಸುಧೀಂದ್ರ ಕುಮಾರ್, ಮಣಿಕಂಠ ಮತ್ತಿತರರಿದ್ದರು.

ರಾಗಿ ಖರೀದಿ ಕೇಂದ್ರಗಳಲ್ಲಿ

ರೈತರಿಂದ ಕ್ವಿಂಟಾಲ್‌ಗೆ 4 ಕೆಜಿ ಹೆಚ್ಚುವರಿ ಪಡೆದು ವಂಚನೆ

ಮಾಜಿ ಸಚಿವ ಸಾ.ರಾ.ಮಹೇಶ್‌ರಿಂದ ಅಧಿಕಾರಿಗಳ ತರಾಟೆ



ರಾಗಿ ಖರೀದಿ ಕೇಂದ್ರಕ್ಕೆ ಮಾಜಿ ಸಚಿವ ಸಾ.ರಾ.ಮಹೇಶ್, ಎಂಎಲ್‌ಸಿ ಸಿ.ಎನ್.ಮಂಜೇಗೌಡ ಭೇಟಿ ನೀಡಿ ಪರಿಶೀಲಿಸಿದರು.

ಕೆ.ಆರ್.ನಗರ, ಏ.2– ಕೆ.ಆರ್.ನಗರ, ಸಾಲಿಗ್ರಾಮ, ಚುಂಚನಕಟ್ಟೆ ರಾಗಿ ಖರೀದಿ ಕೇಂದ್ರಗಳಲ್ಲಿ ರೈತರಿಂದ ಕ್ವಿಂಟಾಲ್‌ಗೆ 4 ಕೆಜಿ ರಾಗಿಯನ್ನು ಹೆಚ್ಚುವರಿಯಾಗಿ ಪಡೆಯುವ ಮೂಲಕ ಅವರನ್ನು ವಂಚಿಸಲಾಗುತ್ತಿದೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಆರೋಪಿಸಿದರು.

ರಾಗಿ ಖರೀದಿ ಕೇಂದ್ರದಲ್ಲಿ ಕ್ವಿಂಟಾಲ್‌ಗೆ 4 ಕೆಜಿ ರಾಗಿಯನ್ನು ಹೆಚ್ಚುವರಿಯಾಗಿ ಪಡೆಯುತ್ತಿದ್ದಾರೆ ಎಂಬ ರೈತರ ದೂರಿನ ಮೇರೆಗೆ ಗುರುವಾರ ಪಟ್ಟಣದ ಎಪಿಎಂಸಿ ಆವರಣದಲ್ಲಿರುವ ರಾಗಿ ಖರೀದಿ ಕೇಂದ್ರಕ್ಕೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅವರೊಂದಿಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಿದಾಗ ಕ್ವಿಂಟಾಲ್‌ಗೆ 4 ಕೆಜಿ ರಾಗಿ ಹೆಚ್ಚುವರಿಯಾಗಿ ಪಡೆಯುತ್ತಿರುವುದು ಬೆಳಕಿಗೆ ಬಂದಿದೆ. ಈ ವೇಳೆ ಫೋನ್ ಮಾಡಿ ಸ್ಥಳಕ್ಕಾಗಮಿಸುವಂತೆ ತಹಸೀಲ್ದಾರ್ ಜಿ.ಸುರೇಂದ್ರ ಮೂರ್ತಿ ಅವರಿಗೆ ತಿಳಿಸಿದರು.

ಕೆ.ಆರ್.ನಗರ ರಾಗಿ ಕೇಂದ್ರದಲ್ಲಿ ಕಳೆದ 2 ತಿಂಗಳಿಂದ ಇಲ್ಲಿವರೆಗೆ 16 ಸಾವಿರ ಕ್ವಿಂಟಾಲ್ ರಾಗಿ ಖರೀದಿಸಲಾಗಿದೆ. ಅಲ್ಲದೇ ಕ್ವಿಂಟಾಲ್‌ಗೆ 4 ಕೆಜಿ ರಾಗಿಯನ್ನು ರೈತರಿಂದ ಖರೀದಿ ಕೇಂದ್ರದವರು ಹೆಚ್ಚುವರಿಯಾಗಿ ಪಡೆದಿದ್ದಾರೆ. ರಾಗಿ ಖರೀದಿ ಕೇಂದ್ರದಲ್ಲಿ ಇಷ್ಟೊಂದು ಭ್ರಷ್ಟಾಚಾರ ನಡೆಯುತ್ತಿದ್ದರೂ, ಈ ಸಂಬಂಧ ಕ್ರಮ ಕೈಗೊಳ್ಳದ ಬಗ್ಗೆ ತಹಸೀಲ್ದಾರ್ ಜಿ.ಸುರೇಂದ್ರ ಮೂರ್ತಿ ಮತ್ತು ಆಹಾರ ನಿರೀಕ್ಷಕ ಸುರೇಶ್, ಖರೀದಿ ಅಧಿಕಾರಿ ಶರತ್ ಅವರನ್ನು ತರಾಟೆ ತೆಗೆದುಕೊಂಡರು.

ಮಾಜಿ ಸಚಿವ ಸಾ.ರಾ.ಮಹೇಶ್ ಸುದ್ದಿಗಾರರೊಂದಿಗೆ ಮಾತನಾಡಿ, ಕೆ.ಆರ್.ನಗರ ಖರೀದಿ ಕೇಂದ್ರದಲ್ಲಿ 16 ಸಾವಿರ ಕ್ವಿಂಟಾಲ್, ಚುಂಚನಕಟ್ಟೆ ಖರೀದಿ ಕೇಂದ್ರದಲ್ಲಿ 20 ಸಾವಿರ ಕ್ವಿಂಟಾಲ್, ಸಾಲಿಗ್ರಾಮ ಖರೀದಿ ಕೇಂದ್ರದಲ್ಲಿ 24 ಸಾವಿರ ಕ್ವಿಂಟಾಲ್ ಒಟ್ಟು 60 ಸಾವಿರ ಕ್ವಿಂಟಾಲ್ ರಾಗಿಯನ್ನು ರೈತರಿಂದ ಇದುವರೆಗೂ ಖರೀದಿ ಮಾಡಲಾಗಿದ್ದು ಇದರಲ್ಲಿ ರೈತರಿಂದ ಹೆಚ್ಚುವರಿಯಾಗಿ 2400 ಕ್ವಿಂಟಾಲ್ ರಾಗಿ ಪಡೆದಿದ್ದು, ಅಂದಾಜು ಒಂದೂವರೆ ಕೋಟಿ ಹಣ ಭ್ರಷ್ಟಾಚಾರ ಮಾಡಲಾಗಿದೆ ಎಂದು ರಾಗಿ ಖರೀದಿ ಕೇಂದ್ರದ ಅಧಿಕಾರಿಗಳ ವಿರುದ್ಧ ಗಂಭೀರ ಆರೋಪಿಸಿದರು.

ಈ ಸಂಬಂಧ ಜಿಲ್ಲಾಧಿಕಾರಿಗಳು ಹಾಗೂ ಆಹಾರ ಇಲಾಖೆ ಜಂಟಿ ನಿರ್ದೇಶಕರ ಗಮನಕ್ಕೆ ತರಲಾಗಿದ್ದು, ಸೂಕ್ತ ತನಿಖೆ ಮಾಡಿ ತಪ್ಪಿಸ್ಥರ ವಿರುದ್ಧ ಕ್ರಮ ಜರುಗಿಸಬೇಕು. ಇಲ್ಲದಿದ್ದಲ್ಲಿ ಜಿಲ್ಲಾಡಳಿತ ವಿರುದ್ಧ ಉಗ್ರ ಪ್ರತಿಭಟನೆಯನ್ನು ರೈತರೊಂದಿಗೆ ಹಮ್ಮಿಕೊಳ್ಳಲಾಗುತ್ತದೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಎಚ್ಚರಿಕೆ ನೀಡಿದರು.

ದೇಶದ ಆರ್ಥಿಕತೆಯ ಶ್ರೇಷ್ಠ ಅರ್ಥಶಾಸ್ತ್ರಜ್ಞ ಅಂಬೇಡ್ಕರ್

ಮೈಸೂರಿನ ಮಹಾರಾಜ ಕಾಲೇಜಿನ ಪ್ರಾಂಶುಪಾಲ ಪ್ರೊ.ಷಣ್ಮುಗಂ



ಕಾರ್ಯಕ್ರಮದಲ್ಲಿ ಡಾ.ಅಂಬೇಡ್ಕರ್ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡಿದರು.

ನಂಜನಗೂಡು, ಏ.2– ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನ ಶಿಲ್ಪಿ ಮಾತ್ರವಲ್ಲದೆ ದೇಶದ ಆರ್ಥಿಕತೆಯ ಬಗ್ಗೆ ಆಳವಾದ ಜ್ಞಾನ ಹೊಂದಿದ್ದ ಶ್ರೇಷ್ಠ ಅರ್ಥಶಾಸ್ತ್ರಜ್ಞ. ಅಂಬೇಡ್ಕರ್ ಮಾರ್ಗಸೂಚಿ ಆಧಾರದ ಮೇಲೆ ಆರ್‌ಬಿಐ ಸ್ಥಾಪನೆಯಾಗಿದೆ ಎಂದು ಮೈಸೂರಿನ ಮಹಾರಾಜ ಕಾಲೇಜಿನ ಪ್ರಾಂಶುಪಾಲ ಪ್ರೊ.ಷಣ್ಮುಗಂ ತಿಳಿಸಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆ ದಿನದ ಅಂಗವಾಗಿ ನಡೆದ ಅಂಬೇಡ್ಕರ್ ಅವರ ಆರ್ಥಿಕ ಚಿಂತನೆಗಳು ಎಂಬ ವಿಷಯದ ಕುರಿತ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ಅವರು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಅರ್ಥಶಾಸ್ತ್ರ ವಿಷಯದಲ್ಲಿ ಡಾಕ್ಟರೇಟ್ ಪಡೆದು ಶ್ರೇಷ್ಠ ಅರ್ಥಶಾಸ್ತ್ರಜ್ಞರಾಗಿದ್ದರು. 1926ರಲ್ಲಿ ಬ್ರಿಟಿಷ್ ಸರ್ಕಾರವು ಭಾರತದ ಹಣಕಾಸು ವ್ಯವಸ್ಥೆಯನ್ನು ಸುಧಾರಿಸಲು ಹಿಲ್ಟನ್ ಯಂಗ್ ಆಯೋಗವನ್ನು ನೇಮಿಸಿತ್ತು. ಈ ಆಯೋಗದ ಮುಂದೆ ಅಂಬೇಡ್ಕರ್ ಅವರು ಬರೆದ ‘ದಿ ಪ್ರಾಬ್ಲಮ್ ಆಫ್ ದಿ ರುಪಿ, ಇಟ್ಸ್ ಒರಿಜಿನ್ ಅಂಡ್ ಇಟ್ಸ್ ಸೊಲ್ಯೂಷನ್’ ಎಂಬ ಸಂಶೋಧನಾ ಪ್ರಬಂಧವು ಆರ್‌ಬಿಐ ರಚನೆಗೆ ಭದ್ರ ಬುನಾದಿ ಹಾಕಿಕೊಟ್ಟಿದೆ. ಅಲ್ಲದೆ ದೇಶದ ಹಣದುಬ್ಬರ ನಿಯಂತ್ರಣ ಮತ್ತು ಕರೆನ್ಸಿ ನಿರ್ವಹಣೆಗಾಗಿ ಕೇಂದ್ರಿಯ ಬ್ಯಾಂಕ್‌ನ ಅವಶ್ಯಕತೆಯನ್ನು ಅವರು ಬಲವಾಗಿ ಪ್ರತಿಪಾದಿಸಿದ್ದರು. ಆದ್ದರಿಂದಲೇ ಅಂಬೇಡ್ಕರ್ ಅವರು ನೀಡಿದ ವೈಜ್ಞಾನಿಕ ತತ್ವಗಳ ಆಧಾರದ ಮೇಲೆ 1935ರ ಏ.1ರಂದು ಭಾರತೀಯ ರಿಸರ್ವ್ ಬ್ಯಾಂಕ್ ಕಾರ್ಯಾರಂಭ ಮಾಡಿತು. ಅಲ್ಲದೇ ಡಾ.ಬಿ.ಆರ್.ಅಂಬೇಡ್ಕರ್ ಅವರ ಆರ್ಥಿಕ ಚಿಂತನೆಗಳು ಪ್ರಮುಖವಾಗಿ ಸಾಮಾಜಿಕ ನ್ಯಾಯ, ಸಮಾನತೆ, ಕೈಗಾರಿಕರಣ, ರಾಜ್ಯ ಸಮಾಜವಾದ ಮತ್ತು ಕೃಷಿ ಸುಧಾರಣೆಗಳ ಕೇಂದ್ರೀತವಾಗಿದ್ದವು. ಸಂಪತ್ತಿನ ಹಂಚಿಕೆ ಮತ್ತು ಕೃಷಿ ಭೂಮಿ ರಾಷ್ಟ್ರೀಕರಣ ಹಾಗೂ ಆರ್ಥಿಕ ಸಬಲೀಕರಣ ಅವರ ಮುಖ್ಯ ಗುರಿಗಳಾಗಿದ್ದವು ಎಂದರು.

ಹಣಕಾಸು ನೀತಿ, ರಾಜ್ಯಕೋಶ ನೀತಿ, ಕೃಷಿ ರಾಷ್ಟ್ರೀಕರಣ, ಭಾರತದಲ್ಲಿ ಸಣ್ಣ ಭೂ ಹಿಡುವಳಿಗಳ ಒಗ್ಗೂಡಿಸುವಿಕೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅಂಬೇಡ್ಕರ್ ಅವರು ನೀಡಿರುವ ಪರಿಹಾರಗಳ ಕುರಿತು ಸಂಪೂರ್ಣ ಉಪನ್ಯಾಸ ನೀಡಿದರಲ್ಲದೆ ಅಂಬೇಡ್ಕರ್ ಬದುಕಿರುವಾಗಲೇ ಅರ್ಥಶಾಸ್ತ್ರಕ್ಕೆ ನೋಬೆಲ್ ಬಹುಮಾನ ನೀಡುವಂತಿದ್ದರೆ, 3 ಬಾರಿ ನೋಬೆಲ್ ಪ್ರಶಸ್ತಿಗೆ ಭಾಜನರಾಗುತ್ತಿದ್ದರು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ. ಕೆಂಪೇಗೌಡ, ಡಾ.ಬಸವಣ್ಣಗೌಡ, ಡಾ.ಜಗದೀಶ್, ಸುಮಿತ್ರ, ವಸಂತ್ ಕುಮಾರ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಶುಕ್ರವಾರ 3 ಏಪ್ರಿಲ್ 2026

ಭಾರತ ಮಾತ್ರವಲ್ಲ ಪಾಕಿಸ್ತಾನದಲ್ಲೂ ಬಾಂಬ್ ಬೆದರಿಕೆ ಹಾಕಿದ್ದ ಶ್ರೀನಿವಾಸ

ಮೈಸೂರಿನ ಮನೆಯಲ್ಲಿ ಮಹಜರು ಬಳಿಕ ಕರೆದೊಯ್ದ ದೆಹಲಿ ಪೊಲೀಸರು

- ▶ತನಿಖೆ ವೇಳೆ ಸ್ಫೋಟಕ ಮಾಹಿತಿಗಳು ಬಹಿರಂಗ
- ▶ಐಪಿ ವಿಳಾಸ ಮರೆಮಾಚುವಿಕೆ ವಿಓಐಪಿ ಬಳಕೆಯಲ್ಲಿ ಮಹಾನಿಪುಣ
- ▶ಸ್ನಾತಕೋತ್ತರ ಪದವೀಧರನಿಂದ ದೇಶದ್ರೋಹಿ ಕೃತ್ಯ
- ▶ಲ್ಯಾಪ್‌ಟಾಪ್, ಮೊಬೈಲ್, ಸಿಮ್ ಕಾರ್ಡ್ ಎಫ್‌ಎಸ್‌ಎಲ್‌ಗೆ ರವಾನೆ

ಮೈಸೂರು, ಏ.2(ಬಿಎಲ್‌ಯು, ಬಿಸಿಟಿ)– ಸಾವಿರಕ್ಕೂ ಹೆಚ್ಚು ಹುಸಿ ಬಾಂಬ್ ಬೆದರಿಕೆ ಕರೆ ಮಾಡಿ ಈಗ ದೆಹಲಿ ಪೊಲೀಸರ ವಶದಲ್ಲಿರುವ ಮೈಸೂರಿನ ಶ್ರೀನಿವಾಸ್ ಅಲಿಯಾಸ್ ಶ್ರೀನಿವಾಸ್ ಲೂಯಿಸ್, ಭಾರತ ಮಾತ್ರವಲ್ಲದೆ ಪಾಕಿಸ್ತಾನದಲ್ಲೂ ಆತಂಕ ಸೃಷ್ಟಿಸಿದ್ದ ಎಂಬುದು ಪೊಲೀಸರ ತನಿಖೆಯಲ್ಲಿ ಬಯಲಾಗಿದೆ.

ದೇಶಾದ್ಯಂತ ಕೋರ್ಟ್, ವಿಧಾನಸಭೆ, ಸರ್ಕಾರಿ ಕಚೇರಿ, ಶಾಲಾ ಕಾಲೇಜುಗಳಿಗೆ ಹುಸಿ ಬಾಂಬ್ ಬೆದರಿಕೆ ಹಾಕಿದ್ದ ಆರೋಪದಡಿ ಶ್ರೀನಿವಾಸ್‌ನನ್ನು ಕೆಲ ದಿನಗಳ ಹಿಂದೆ ದೆಹಲಿ ಪೊಲೀಸರು ಮೈಸೂರಿನಲ್ಲಿ ಬಂಧಿಸಿ, ಕರೆದೊಯ್ದಿದ್ದರು. ದೆಹಲಿ ಕೋರ್ಟ್‌ಗೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಆರು ದಿನಗಳ ಕಾಲ ತಮ್ಮ ಕಸ್ಟಡಿಗೆ ಪಡೆದ ವೇಳೆ ಹಲವು ಸ್ಫೋಟಕ ಮಾಹಿತಿಯನ್ನು ಆರೋಪಿ ಬಾಯ್ಬಿಟ್ಟಿದ್ದಾನೆ.


ಶ್ರೀನಿವಾಸ್‌ನಿಂದ ವಶಪಡಿಸಿಕೊಂಡಿದ್ದ ಲ್ಯಾಪ್‌ಟಾಪ್‌ನಲ್ಲಿದ್ದ ಇ–ಮೇಲ್ ಪರಿಶೀಲಿಸಿದಾಗ ಪೊಲೀಸರೇ ದಂಗಾಗಿದ್ದಾರೆ. ಪಾಕಿಸ್ತಾನದ ಗೂಗಲ್ ಮ್ಯಾಪ್ ಬಳಸಿಕೊಂಡು ಅಲ್ಲಿನ ಕೋರ್ಟ್, ಸರ್ಕಾರಿ ಕಚೇರಿ, ಶಾಲಾ ಕಾಲೇಜುಗಳ ಮಾಹಿತಿ ತಿಳಿದು, ಹುಸಿ ಬಾಂಬ್ ಬೆದರಿಕೆಯ ಇ–ಮೇಲ್ ಕಳುಹಿಸಿರುವುದು ಬಯಲಾಗಿದೆ. ಈ ಬಗ್ಗೆ ವಿಚಾರಣೆ ವೇಳೆ ಆರೋಪಿಯೂ ಪೊಲೀಸರಿಗೆ ತಿಳಿಸಿದ್ದಾನೆ.

ಶ್ರೀನಿವಾಸ್‌ನ ಮೈಸೂರು ಮನೆಯಲ್ಲಿ ಮಹಜರು

ಮೈಸೂರು: ಹುಸಿ ಬಾಂಬ್ ಬೆದರಿಕೆ ಕರೆ ಹಾಗೂ ಇ–ಮೇಲ್ ಮಾಡಿರುವ ಶ್ರೀನಿವಾಸ್‌ನನ್ನು ದೆಹಲಿ ಪೊಲೀಸರು ಬುಧವಾರ ಮೈಸೂರಿನ ನಿವಾಸಕ್ಕೆ ಕರೆತಂದು, ಮಹಜರು ನಡೆಸಿದ್ದಾರೆ.

ಮೈಸೂರಿನ ಬೃಂದಾವನ ಬಡಾವಣೆಯಲ್ಲಿರುವ ಆತನ ಮನೆಗೆ ಕರೆತಂದು ಬೆಳಗ್ಗೆಯಿಂದ ಮಧ್ಯಾಹ್ನದವರೆಗೂ ಮಹಜರು ನಡೆಸಿ, ಹಲವು ಮಾಹಿತಿಗಳನ್ನು ದಾಖಲಿಸಿಕೊಂಡಿದ್ದಾರೆ.

ಪೊಲೀಸರಿಗೆ ಸಿಕ್ಕಿ ಬೀಳಬಾರದೆಂದು ಶ್ರೀನಿವಾಸ್ ಆಗಾಗ್ಗೆ ಬಾಡಿಗೆ ಮನೆಗಳನ್ನು ಬದಲಾಯಿಸುತ್ತಿದ್ದನು. ಆದ್ದರಿಂದ ಈ ಹಿಂದೆ ವಾಸವಿದ್ದ ಮನೆಗಳಿಗೂ ತೆರಳಿ ಮಹಜರು ನಡೆಸಿದ್ದಾರೆ. ನಿನ್ನೆ ರಾತ್ರಿವರೆಗೆ ಮೈಸೂರಲ್ಲಿ ಮಹಜರು ಕಾರ್ಯ ನಡೆಸಿ, ನಂತರ ಶ್ರೀನಿವಾಸ್‌ನನ್ನು ಮತ್ತೆ ದೆಹಲಿಗೆ ಕರೆದೊಯ್ದಿದ್ದಾರೆ.



ಶ್ರೀನಿವಾಸ್ ಲೂಯಿಸ್

ಮೊದಲೇ ಶತ್ರು ರಾಷ್ಟ್ರ ಪಾಕಿಸ್ತಾನ ಎಲ್ಲದಕ್ಕೂ ಭಾರತದತ್ತ ಬೊಟ್ಟು ಮಾಡುತ್ತದೆ. ಪಾಕ್ ನೆಲದಲ್ಲಿ ಬಲೂಚಿಸ್ತಾನ ಹಾಗೂ ಅಫ್ಘಾನಿಸ್ತಾನ್ ರಾಷ್ಟ್ರಗಳು ನಡೆಸುವ ದಾಳಿಗಳಿಗೂ ಭಾರತವೇ ಉತ್ತೇಜನ ನೀಡುತ್ತಿದೆ ಎಂದು ಆರೋಪ ಮಾಡುತ್ತಿದೆ. ಇಂತಹ ಸೂಕ್ಷ್ಮ ಪರಿಸ್ಥಿತಿಯಲ್ಲಿ ಶ್ರೀನಿವಾಸ್, ಪಾಕಿಸ್ತಾನದ ಹಲವು ಸ್ಥಳಗಳಲ್ಲಿ ಬಾಂಬ್ ಸ್ಫೋಟಿಸುವ ಬೆದರಿಕೆ ಹಾಕಿರುವುದರಿಂದ ಈ ಪ್ರಕರಣ ಗಂಭೀರ ಸ್ವರೂಪ ಪಡೆಯುವ ಸಾಧ್ಯತೆ ಇದೆ.

ಡಾರ್ಕ್ ವೆಬ್ ಬಳಕೆ: ಹುಸಿ ಬಾಂಬ್ ಕರೆ ಮಾಡುತ್ತಿದ್ದ ಶ್ರೀನಿವಾಸ್, ಐಪಿ ವಿಳಾಸ ಮರೆಮಾಚುವಿಕೆ ಮತ್ತು ವಾಯ್ಸ್ ಓವರ್ ಇಂಟರ್ನೆಟ್ ಪ್ರೋಟೋಕಾಲ್ (ವಿಓಐಪಿ) ಬಳಸಿ ಕರೆ ಅಥವಾ ಇ–ಮೇಲ್ ಮಾಡುವುದರಲ್ಲಿ ನಿಪುಣನಾಗಿದ್ದ ಎಂಬುದು ಪೊಲೀಸರ ತನಿಖೆಯಲ್ಲಿ ಬಯಲಾಗಿದೆ.

ಶ್ರೀನಿವಾಸ್, ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಹಲವು ಬಾರಿ ಇ–ಮೇಲ್ ಕಳುಹಿಸಿರುವುದು ದೃಢಪಟ್ಟಿದೆ. ಇದಕ್ಕಾಗಿ ಈತ 50ಕ್ಕೂ ಹೆಚ್ಚು ಇ–ಮೇಲ್ ಐಡಿಗಳನ್ನು ಬಳಕೆ ಮಾಡಿದ್ದಾನೆ. ಯಾವುದೇ ಕಾರಣಕ್ಕೂ ಪೊಲೀಸರು ತನ್ನ ಗುರುತು ಪತ್ತೆ ಹಚ್ಚಬಾರದೆಂದು ಡಾರ್ಕ್ ವೆಬ್ ಮತ್ತು ಇತರೆ ತಂತ್ರಗಳನ್ನು ಬಳಸಿದ್ದಾನೆ. ಇದರಿಂದಲೇ ಲ್ಯಾಪ್‌ಟಾಪ್ ಹಾಗೂ ಮೊಬೈಲ್‌ನಿಂದ ಈತ 1,100ಕ್ಕೂ ಹೆಚ್ಚು ಬಾಂಬ್ ಬೆದರಿಕೆ ಇ–ಮೇಲ್ ಹಾಗೂ ಕರೆ ಮಾಡಿದ್ದರೂ ಪೊಲೀಸರಿಗೆ ಸಿಕ್ಕಿಬಿದ್ದಿರಲಿಲ್ಲ. ತಂತ್ರಜ್ಞಾನ ಹಾಗೂ ತಜ್ಞರ ನೆರವಿನಿಂದ ದೆಹಲಿ ಪೊಲೀಸರು ಕೊನೆಗೂ ಶ್ರೀನಿವಾಸ್‌ನನ್ನು ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಎಫ್‌ಎಸ್‌ಎಲ್‌ಗೆ ಮೊಬೈಲ್, ಲ್ಯಾಪ್‌ಟಾಪ್: ಶ್ರೀನಿವಾಸ್‌ನಿಂದ ವಶಪಡಿಸಿಕೊಂಡಿರುವ ಲ್ಯಾಪ್‌ಟಾಪ್, ಮೊಬೈಲ್ ಹಾಗೂ ಸಿಮ್‌ಕಾರ್ಡ್‌ಗಳನ್ನು ದೆಹಲಿ ಪೊಲೀಸರು ವಿಧಿ ವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್)ಕ್ಕೆ ಕಳುಹಿಸಿದ್ದಾರೆ. ಈ ಪ್ರಕರಣದ ಸಂಬಂಧ ಮುಂಬೈ ಪೊಲೀಸರೂ ದೆಹಲಿ ಪೊಲೀಸರ ಸಂಪರ್ಕಿಸಿ ಮಾಹಿತಿ ಪಡೆದಿದ್ದಾರೆ. ಮುಂಬೈಗೆ ಹೆಚ್ಚಾಗಿ ಹುಸಿ ಬಾಂಬ್ ಬೆದರಿಕೆ ಇ–ಮೇಲ್ ಕಳುಹಿಸಿರುವ ಹಿನ್ನೆಲೆಯಲ್ಲಿ ಕೆಲವೇ ದಿನದಲ್ಲಿ ಮುಂಬೈ ಪೊಲೀಸರು ಕೂಡ ಶ್ರೀನಿವಾಸ್‌ನನ್ನು ವಶಕ್ಕೆ ಪಡೆಯುವ ಸಾಧ್ಯತೆ ಇದೆ ಎನ್ನಲಾಗಿದೆ.

ತನ್ನ ಪರ ತೀರ್ಪು ಬಾರದಿದ್ದಕ್ಕೆ ಕೋರ್ಟ್ ಟಾರ್ಗೆಟ್

ಮೈಸೂರು: ತಮ್ಮ ಕುಟುಂಬದ ಆಸ್ತಿ ವಿವಾದದಲ್ಲಿ ನ್ಯಾಯಾಲಯದಿಂದ ತನಗೆ ಅನುಕೂಲಕರವಾದ ತೀರ್ಪು ಬರದಿದ್ದರಿಂದ ಶ್ರೀನಿವಾಸ್, ಹೆಚ್ಚಾಗಿ ಕೋರ್ಟ್‌ಗಳಿಗೆ ಬಾಂಬ್ ಬೆದರಿಕೆ ಕರೆ ಮಾಡುತ್ತಿದ್ದ ಎಂದು ಪೊಲೀಸರ ವಿಚಾರಣೆಯಲ್ಲಿ ತಿಳಿದುಬಂದಿದೆ. ನ್ಯಾಯಾಂಗ ಮತ್ತು ಸರ್ಕಾರದ ವ್ಯವಸ್ಥೆ ವಿರುದ್ಧ ದ್ವೇಷ ಬೆಳೆಸಿಕೊಂಡಿದ್ದ ಈತ, ಬಾಂಬ್ ಬೆದರಿಕೆ ಮೂಲಕ ಸೇಡು ತೀರಿಸಿಕೊಂಡನೆಂಬ ತೃಪ್ತ ಭಾವ ಅನುಭವಿಸುತ್ತಿದ್ದ ಎನ್ನಲಾಗಿದೆ.

ಪೊಲೀಸರ ಪ್ರಾಥಮಿಕ ವಿಚಾರಣೆಯಲ್ಲಿ ಶ್ರೀನಿವಾಸ್ ಬಿಎ, ಎಂಎ, ಎಂಬಿಎ ಪದವಿ ಪಡೆದಿದ್ದು, ತಾನು ಎನ್‌ಇಟಿ ಸಹಾಯಕ ಪ್ರಾಧ್ಯಾಪಕ ಎಂದು ಹೇಳಿಕೊಂಡಿದ್ದಾನೆ. ಪೊಲೀಸರು ಈ ಬಗ್ಗೆ ನಿಖರ ಮಾಹಿತಿ ಕಲೆಹಾಕುತ್ತಿದ್ದಾರೆ.

ಶ್ರೀನಿವಾಸ್ ದುಷ್ಕೃತ್ಯ ಅಂತರರಾಷ್ಟ್ರೀಯ ಮಟ್ಟಕ್ಕೂ ವ್ಯಾಪಿಸಿರುವುದರಿಂದ ಈತನ ಸಂಪೂರ್ಣ ಚರಿತ್ರೆಯನ್ನು ಪೊಲೀಸರು ಕೆದಕುತ್ತಿದ್ದಾರೆ. ಈತ ಮಾನಸಿಕ ರೋಗದಿಂದ ಬಳಲುತ್ತಿರುವಂತೆ ಕಂಡುಬಂದಿರುವ ಹಿನ್ನೆಲೆಯಲ್ಲಿ ಮನೋರೋಗ ತಜ್ಞರಿಂದ ಕೌನ್ಸಲಿಂಗ್ ನಡೆಯಲು ಕ್ರಮ ಕೈಗೊಂಡಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬೈಕರ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಗಾರ್ಡಿಯನ್ಸ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಧುರಂದರ್–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಲೀಡರ್ (ತ) + ಕಾಳಿದಾಸ–2 (ತ)	4 ಪ್ರದರ್ಶನಗಳು
ಸಂಗಂ	
ಧುರಂದರ್–2 (ಕ)	3 ಪ್ರದರ್ಶನಗಳು
ಲಿಡೋ	
ಧುರಂದರ್–2 (ಕ)	3 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಫಸ್ಟ್ ನೈಟ್ ವಿತ್ ದೆವ್ವ (ಕ)	4 ಪ್ರದರ್ಶನಗಳು

'ಜಯಲಕ್ಷ್ಮಿ ವಿಲಾಸ ಅರಮನೆ' ಖಾಸಗಿಯವರಿಗೆ ಕಾನೂನು ಬಾಹಿರ ಗುತ್ತಿಗೆ

ಸಿಂಡಿಕೇಟ್ ಸದಸ್ಯ ಡಾ.ಟಿ.ಆರ್.ಚಂದ್ರಶೇಖರ್ ಆರೋಪ



ಜಯಲಕ್ಷ್ಮಿ ವಿಲಾಸ ಅರಮನೆ



ಚಂದ್ರಶೇಖರ್

ಮೈಸೂರು, ಏ.2(ಎಂಕೆ)– ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಕ್ಯಾಂಪಸ್‌ನಲ್ಲಿರುವ ಐತಿಹಾಸಿಕ 'ಜಯಲಕ್ಷ್ಮಿ ವಿಲಾಸ ಅರಮನೆ'ಯನ್ನು ಕಾನೂನು ಬಾಹಿರವಾಗಿ 40 ವರ್ಷಗಳ ಅವಧಿಗೆ ಖಾಸಗಿ ಸಂಸ್ಥೆಯೊಂದಕ್ಕೆ ಉಚಿತವಾಗಿ ಗುತ್ತಿಗೆ ನೀಡಲಾಗುತ್ತಿದೆ ಎಂದು ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಡಾ.ಟಿ. ಆರ್.ಚಂದ್ರಶೇಖರ್ ಆರೋಪಿಸಿದ್ದಾರೆ.

ಸಿಎಸ್‌ಆರ್ ಯೋಜನೆಯಡಿ ಸುಮಾರು 33 ಕೋಟಿ ರೂ.ವೆಚ್ಚದಲ್ಲಿ ನವೀಕರಣಗೊಂಡಿರುವ ಜಯಲಕ್ಷ್ಮಿ ವಿಲಾಸ ಅರಮನೆಯನ್ನು ಏಕಪಕ್ಷೀಯ ನಿರ್ಧಾರದೊಂದಿಗೆ ಖಾಸಗಿ ಸಂಸ್ಥೆಗೆ ಗುತ್ತಿಗೆ ನೀಡುತ್ತಿರುವುದು ಅಕ್ಷಮ್ಯವಾಗಿದ್ದು, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಕಾನೂನು ಬಾಹಿರವಾಗಿ ಈ ನಿರ್ಧಾರ ಕೈಗೊಂಡಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರಕವಿ ಕುವೆಂಪು ಅವರು ಕುಲಪತಿಗಳಾಗಿದ್ದ ಸಂದರ್ಭದಲ್ಲಿ ವಿವಿಯ ಶೈಕ್ಷಣಿಕ ಚಟುವಟಿಕೆಯ ಭಾಗವಾಗಿದ್ದ ಐತಿಹಾಸಿಕ ಜಯಲಕ್ಷ್ಮಿ ವಿಲಾಸ ಅರಮನೆಯನ್ನು ಸಂರಕ್ಷಣೆ ಮಾಡಿಕೊಂಡು ಬರಲಾಗಿದೆ. ಸಾಂಸ್ಕೃತಿಕ ನಗರಿಯಲ್ಲಿರುವ ಪಾರಂಪರಿಕ ಕಟ್ಟಡಗಳಲ್ಲಿ ಒಂದಾಗಿರುವ ಜಯಲಕ್ಷ್ಮಿ ವಿಲಾಸ ಅರಮನೆಯನ್ನು ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲ ಎಂಬ ಕಾರಣಕ್ಕೆ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ, ಸದಸ್ಯರ ಅಭಿಪ್ರಾಯ ಪಡೆಯದೆ ಉಚಿತವಾಗಿ ಗುತ್ತಿಗೆ ನೀಡುತ್ತಿರುವುದು ಸರಿಯಲ್ಲ ಎಂದಿದ್ದಾರೆ.

ಏಕಪಕ್ಷೀಯ ನಿರ್ಧಾರ ಕೈಗೊಳ್ಳುತ್ತಿರುವ ಕುಲಪತಿಗಳಿಗೆ ಕಾನೂನಾತ್ಮಕವಾಗಿ ಎಚ್ಚರಿಕೆ ನೋಟಿಸ್ ನೀಡಲಾಗಿದ್ದು, ಕೂಡಲೇ ಖಾಸಗಿ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಮುಂದಾಗಿರುವುದನ್ನು ನಿಲ್ಲಿಸಬೇಕು. ತಪ್ಪಿದಲ್ಲಿ ರಾಜ್ಯಪಾಲರು, ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರ ಗಮನಕ್ಕೆ ತಂದು ಹೈಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಲಾಗುವುದು ಎಂದು ಪತ್ರಿಕಾ ಪ್ರಕಟಣೆ ಮೂಲಕ ಎಚ್ಚರಿಸಿದ್ದಾರೆ.

ಬಸವಮಾರ್ಗದಲ್ಲಿ ಹುಣ್ಣಿಮೆ ಪೂಜೆ; ಅನ್ನ ಸಂತರ್ಪಣೆ



ಹುಣ್ಣಿಮೆ ಅಂಗವಾಗಿ ಮೈಸೂರಿನ ಹೆಬ್ಬಾಳದಲ್ಲಿರುವ ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದಲ್ಲಿ ಶಿವನಿಗೆ ವಿಶೇಷ ಪೂಜೆ ನೆರವೇರಿಸಿದ ವೇಳೆ ಸಂಸ್ಥೆಯ ಸಂಸ್ಥಾಪಕ ಎಸ್.ಬಸವರಾಜು, ದಾನಿಗಳಾದ ಪದ್ಮಾ, ನರಸೇಗೌಡ, ಅರ್ಚಕರಾದ ಸಾಗರ್ ಶರ್ಮ ಮತ್ತಿತರರಿದ್ದರು.

ಮೈಸೂರು, ಏ.2– ಹುಣ್ಣಿಮೆ ಹಿನ್ನೆಲೆಯಲ್ಲಿ ನಗರದ ಹೆಬ್ಬಾಳಿನಲ್ಲಿರುವ ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದಲ್ಲಿ ಗುರುವಾರ ಸಂಜೆ ಶಿವನಿಗೆ ವಿಶೇಷ ಪೂಜೆ ಸಲ್ಲಿಸಿ, ಅನ್ನ ಸಂತರ್ಪಣೆ ಮಾಡಲಾಯಿತು.

ಕೇಂದ್ರದ ಆವರಣದಲ್ಲಿ ಗಣೇಶ, ಶಿವ, ನಂದಿ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಿ, ಅಷ್ಟೋತ್ತರ ಮಂತ್ರ ಜಪಿಸಲಾಯಿತು. ಬಸವಮಾರ್ಗ ಸಂಸ್ಥೆಯಲ್ಲಿ ಪರಿವರ್ತನೆ ಹಾದಿಯಲ್ಲಿರುವ ವ್ಯಸನಿಗಳು ಹಾಗೂ ಅವರ ಕುಟುಂಬಕ್ಕೆ ಒಳಿತಾಗಲೆಂಬ ಸಂಕಲ್ಪದೊಂದಿಗೆ ಅರ್ಚಕರಾದ ಸಾಗರ್ ಶರ್ಮಾ ನೇತೃತ್ವದಲ್ಲಿ ಪೂಜಾ ವಿಧಿ–ವಿಧಾನಗಳನ್ನು ನೆರವೇರಿಸಲಾಯಿತು.

ಈ ವೇಳೆ ಸಂಸ್ಥೆಯ ಸಂಸ್ಥಾಪಕ ಎಸ್.ಬಸವರಾಜು ಮಾತನಾಡಿ, ಬಸವಮಾರ್ಗ ಫೌಂಡೇಷನ್ ವತಿಯಿಂದ ಪ್ರತಿ ಅಮಾವಾಸ್ಯೆ ಮತ್ತು ಹುಣ್ಣಿಮೆಯಂದು ಶಿವನಿಗೆ ವಿಶೇಷ ಪೂಜೆ ನೆರವೇರಿಸಿ, ನೂರಾರು ಜನರಿಗೆ ಪ್ರಸಾದ ವಿತರಿಸುವ ಸಂಪ್ರದಾಯ ನಡೆದುಬಂದಿದೆ. ವ್ಯಸನದ ಸಮಸ್ಯೆಯಿಂದ ನಮ್ಮ ಸಂಸ್ಥೆಗೆ ದಾಖಲಾಗಿರುವ ಶಿಬಿರಾರ್ಥಿಗಳು ಮತ್ತು ಅವರ ಕುಟುಂಬ ವರ್ಗದವರಿಗೆ ದೇವರ ಅನುಗ್ರಹವನ್ನು ಬೇಡಲೆಂದು ನಾವು ಈ ಧಾರ್ಮಿಕ ಕಾರ್ಯಕ್ರಮವನ್ನು ನೆರವೇರಿಸಿಕೊಂಡು ಬರುತ್ತಿದ್ದೇವೆ ಎಂದು ತಿಳಿಸಿದರು.

ವ್ಯಸನ ಎಲ್ಲಾ ರೀತಿಯಿಂದಲೂ ಬಾಧಿಸುವ ಕಾಯಿಲೆ. ಇದೊಂದು ಕಾಯಿಲೆ ಎನ್ನುವುದು ವ್ಯಸನಿಗಾಗಲೀ ಅವರ ಮನೆಯವರಿಗಾಗಲೀ ತಿಳಿದಿರುವುದಿಲ್ಲ. ಈ ಕಾಯಿಲೆಗೆ ಪ್ರಾರಂಭಿಕ ಹಂತದಲ್ಲೇ ಸೂಕ್ತ ಚಿಕಿತ್ಸೆ ಪಡೆದರೆ ವ್ಯಸನಿಂದ ದೂರ ಇರಬಹುದು. ಮದ್ಯಪಾನ ಸೇರಿದಂತೆ ಯಾವುದೇ ವ್ಯಸನದ ಬಗ್ಗೆ ಜಾಗೃತಿ ಮೂಡಿಸುವುದರ ಜೊತೆಗೆ ವ್ಯಸನಿಗಳನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಪರಿಣಾಮಕಾರಿ ಕಾರ್ಯಕ್ರಮಗಳು ತುರ್ತಾಗಿ ಆಗಬೇಕಾಗಿದೆ ಎಂದು ಅವರು ಅಭಿಪ್ರಾಯಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ವ್ಯವಸ್ಥಾಪಕ ಮಹೇಶ್, ಸಿಬ್ಬಂದಿ ಮಂಜುನಾಥ್, ನಿಶ್ಚಿತಾ, ನೇತ್ರಾ, ಉಷಾರಾಣಿ, ಮೋನಿಷಾ, ರಾಧಿಕಾ, ಅರ್ಚಿತ್ ರಾಮ್, ಆನಂದ್, ರಾಘವೇಂದ್ರ, ಅಭಿ, ಶ್ರೀಧರ್, ನಂದೀಶ್, ಗೋವಿಂದ್, ರವೀಂದ್ರ, ಹೇಮಂತ್, ಅಭಿ, ಗೌತಮ್, ಕೃಷ್ಣ, ಪ್ರಜ್ವಲ್, ದಾನಿಗಳಾದ ಪದ್ಮಾ, ನರಸೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನಲ್ಲಿ ಅರ್ಥಪೂರ್ಣ ಪೊಲೀಸ್ ಧ್ವಜ ದಿನಾಚರಣೆ

ಮೈಸೂರು, ಏ.2(ಬಿಎಲ್‌ಯು)– ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸಿಎಆರ್ ಮೈದಾನದಲ್ಲಿ ಇಂದು ಪೊಲೀಸ್ ಧ್ವಜ ದಿನಾಚರಣೆ ಆಚರಿಸಲಾಯಿತು.

ಮೈಸೂರು ನಗರ ಮತ್ತು ಜಿಲ್ಲಾ ಪೊಲೀಸ್, ಕರ್ನಾಟಕ ಪೊಲೀಸ್ ಅಕಾಡೆಮಿ, ಕೆಎಸ್‌ಆರ್ ಪಿ, ಮೌಂಟೆಡ್ ಪೊಲೀಸ್, ಪೊಲೀಸ್ ತರಬೇತಿ ಶಾಲೆ, ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ತಂಡಗಳು ಈ ವೇಳೆ ಪಥ ಸಂಚಲನ ನಡೆಸಿದವು.

ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ದಕ್ಷಿಣ ವಲಯ ಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ ಹಾಗೂ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ಡಿವೈಎಸ್ಪಿ ಶಾಂತಮಲ್ಲಪ್ಪ ಅವರು ಪಥ ಸಂಚಲನ ನಡೆಸಿದ ತಂಡಗಳಿಂದ ಗೌರವ ವಂದನೆ ಸ್ವೀಕರಿಸಿದರು.



ಮೈಸೂರಿನ ಸಿಎಆರ್ ಮೈದಾನದಲ್ಲಿ ಗುರುವಾರ ನಡೆದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ನಿವೃತ್ತ ಡಿವೈಎಸ್ಪಿ ಶಾಂತಮಲ್ಲಪ್ಪ ಅವರ ಕೋಟ್‌ಗೆ ಪೊಲೀಸ್ ಧ್ವಜ ಸ್ಟಿಕ್ಕರ್ ಅಳವಡಿಸಿ, ಗೌರವ ಸೂಚಿಸಲಾಯಿತು. ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

1965, ಏಪ್ರಿಲ್ 2ರಂದು ಜಾರಿಗೆ ಬಂದ ಕರ್ನಾಟಕ ಪೊಲೀಸ್ ಕಾಯ್ದೆ ಪ್ರಕಾರ ಈ ದಿನವನ್ನು ಪೊಲೀಸ್ ಧ್ವಜ ದಿನಾಚರಣೆಯಾಗಿ ಆಚರಿಸಲಾಗುತ್ತಿದೆ.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಷ್ಟ್ರಪತಿಗಳಿಗೆ ಮನವಿ

ಮೈಸೂರು, ಏ.2(ಎಂಕೆ)– ಎಂಎಸ್‌ಪಿ ಗ್ಯಾರಂಟಿ ಕಾಯ್ದೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ವತಿಯಿಂದ ಅಪರ ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಗುರುವಾರ ಮನವಿ ಸಲ್ಲಿಸಲಾಯಿತು.

ಪ್ರಸ್ತಾವಿತ ಭಾರತ ಮತ್ತು ಅಮೆರಿಕಾ ನಡುವಿನ ಒಪ್ಪಂದದಲ್ಲಿ ಕೃಷಿ, ಹಾಲು ಮತ್ತು ಕೋಳಿ ವಲಯ ಸೇರಿಸಬಾರದು. ಅಮೆರಿಕಾದಿಂದ ಆಹಾರ ಮತ್ತು ಕೃಷಿ ಉತ್ಪನ್ನಗಳ ಆಮದು ಮಾಡಿಕೊಳ್ಳುವುದನ್ನು ಸಂಪೂರ್ಣ ನಿಷೇಧಿಸಬೇಕು. ರೈತರ ಸಾಲಗಳ ವಸೂಲಾತಿಗಾಗಿ ಜಾರಿಗೆ ತರಲಾದ ಸರ್ಫೇಸಿ ಕಾಯ್ದೆ ರದ್ದುಗೊಳಿಸಬೇಕು.

ಹಾಗೆಯೇ ಗೋಧಿ, ಸಾಸಿವೆ, ಜೋಳ ಮತ್ತು ಸೂರ್ಯಕಾಂತಿಗೆ ಬೆಂಬಲ ಬೆಲೆ ನೀಡಬೇಕು. ಆಲೂಗಡ್ಡೆ ಬೆಲೆ ಕುಸಿತದಿಂದ ಕಂಗಾಲಾಗಿರುವ ರೈತರ ಆತ್ಮಹತ್ಯೆ ತಡೆಯಲು ವಿಶೇಷ ಪರಿಹಾರ ಪ್ಯಾಕೇಜ್ ಘೋಷಣೆ ಮಾಡಬೇಕು ಮತ್ತು ದೇಶಾದ್ಯಂತ ಮತ್ತು ರಾಜ್ಯದಲ್ಲಿ ರೈತರ ಪ್ರತಿಭಟನೆಯ ಸಂದರ್ಭದಲ್ಲಿ ದಾಖಲಾಗಿರುವ ಎಲ್ಲಾ ಪೊಲೀಸ್ ಪ್ರಕರಣಗಳನ್ನು ಹಿಂಪಡೆಯಬೇಕು ಎಂದು ಮನವಿ ಮಾಡಲಾಯಿತು. ಈ ವೇಳೆ ರೈತ ಮುಖಂಡರಾದ ಅತ್ತಹಳ್ಳಿ ದೇವರಾಜ್, ಅಂಬಳೆ ಮಂಜುನಾಥ್, ಬನ್ನೂರು ಸೂರಿ, ವಾಜಮಂಗಲ ನಾಗೇಂದ್ರ, ಬಸವನಹಳ್ಳಿ ನಂಜುಂಡ ಉಪಸ್ಥಿತರಿದ್ದರು.



ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ವತಿಯಿಂದ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅವರ ಮೂಲಕ ರಾಷ್ಟ್ರಪತಿಗಳಿಗೆ ಗುರುವಾರ ಮನವಿ ಸಲ್ಲಿಸಲಾಯಿತು.

ವಿದ್ಯುತ್ ಸ್ಪರ್ಶಿಸಿ ಬಾಲಕ ಸಾವು

ಮೈಸೂರು,ಏ.2(ಪಿಎಂ)– ಮನೆಯೊಳಗೆ ಆಟವಾಡುತ್ತಿದ್ದಾಗ ಆಕಸ್ಮಿಕವಾಗಿ ವಿದ್ಯುತ್ ಸ್ಪರ್ಶಿಸಿ ಬಾಲಕ ಮೃತಪಟ್ಟಿರುವ ಘಟನೆ ಮಂಡಿ ಮೊಹಲ್ಲಾದ ಕೈಲಾಸಪುರಂನಲ್ಲಿ ಗುರುವಾರ ನಡೆದಿದೆ. ಇಲ್ಲಿನ ಮೊಹಮ್ಮದ್ ಕರೀಂ ಎಂಬುವವರ ಪುತ್ರ ಮೊಹಮ್ಮದ್ ಅಲಿ (7) ಮೃತ ಬಾಲಕ. ಮೊಹಮ್ಮದ್ ಕರೀಂ ಅವರ ಸಂಬಂಧಿಕರ ಮದುವೆ ಭಾನುವಾರ ನಿಗದಿಯಾಗಿದ್ದು, ಇದಕ್ಕೆ ಪೂರಕವಾದ ಕಾರ್ಯಕ್ರಮವೊಂದನ್ನು ಮೊಹಮ್ಮದ್ ಕರೀಂ ಅವರ ಮನೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು ಈ ವೇಳೆ ಕರೀಂ ಅವರ ಮನೆಯೊಳಗೆ ಆಟವಾಡುತ್ತಿದ್ದ ಮೊಹಮ್ಮದ್ ಅಲಿಗೆ ಆಕಸ್ಮಿಕವಾಗಿ ವಿದ್ಯುತ್ ಸ್ಪರ್ಶಿಸಿದೆ ಎಂಬುದು ವಿಚಾರಣೆ ವೇಳೆ ಕುಟುಂಬಸ್ಥರಿಂದ ತಿಳಿದುಬಂದಿದೆ ಎಂದು ಮಂಡಿ ಠಾಣೆ ಪೊಲೀಸರು ತಿಳಿಸಿದರು.

ಕೂಡಲೇ ಬಾಲಕನನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಮಗು ಬದುಕುಳಿಯಲಿಲ್ಲ ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಮಂಡಿ ಠಾಣೆ ಪೊಲೀಸರು ತಿಳಿಸಿದರು.

ಬೆಲೆ ಏರಿಕೆ ನಿಯಂತ್ರಿಸುವಲ್ಲಿ ಕೇಂದ್ರ ಸರ್ಕಾರ ವಿಫಲ

ಬೆಂಗಳೂರು, ಏ.2(ಕೆಎಂಶಿ)– ಕೇಂದ್ರ ಸರ್ಕಾರ ಬೆಲೆ ಏರಿಕೆ ನಿಯಂತ್ರಿಸುವಲ್ಲಿ ವಿಫಲವಾಗಿರುವುದರಿಂದ ಜನತೆ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.



ರಾಜ್ಯ ಸರ್ಕಾರಕ್ಕೂ ಬೆಲೆ ಏರಿಕೆಗೂ ಯಾವುದೇ ಸಂಬಂಧವಿಲ್ಲ ಕೇಂದ್ರ ಸರ್ಕಾರದ ಬದಲಾದ ನೀತಿಗಳು, ಇತ್ತೀಚಿನ ಪೆಟ್ರೋಲಿಯಂ ವ್ಯವಸ್ಥೆಯಿಂದ ಜನ ಸಾಮಾನ್ಯರು ಬಳಸುವ ನಿತ್ಯ ಬಳಕೆಯ ವಸ್ತುಗಳ ಬೆಲೆಗಳು ಗಗನಕ್ಕೆ ಮುಟ್ಟಿವೆ ಎಂದಿದ್ದಾರೆ.

ಕೇಂದ್ರ ಗ್ಯಾಸ್, ಪೆಟ್ರೋಲ್, ಡೀಸೆಲ್ ನೀಡಿದರೆ ಅವುಗಳನ್ನು ವಿತರಿಸುವುದಷ್ಟೇ ನಮ್ಮ ಜವಾಬ್ದಾರಿ. ನಮ್ಮ ನೀತಿ ಮತ್ತು ಗ್ಯಾರಂಟಿ ಯೋಜನೆಗಳಿಂದ ನೆರೆ ರಾಜ್ಯಗಳಿಗಿಂತ ನಮ್ಮಲ್ಲಿ ಬೆಲೆಗಳು ಕಡಿಮೆ ಇವೆ ಎಂದು ಹೇಳಿದ್ದಾರೆ.


ಬಿಜೆಪಿಯವರು ನಾಲ್ಕು ವರ್ಷದಲ್ಲಿ ಯಾವ ಅಭಿವೃದ್ಧಿಯನ್ನು ಮಾಡದೇ, ರಾಜ್ಯವನ್ನು ಲೂಟಿ ಮಾಡಿದ್ದಾರೆ ಎಂಬ ಸತ್ಯವನ್ನು ಜನರು ಅರಿತಿದ್ದಾರೆ. ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಜಾರಿಯಾಗುತ್ತಿದ್ದು, ಬಿಜೆಪಿಯವರ ಸುಳ್ಳುಗಳ ನಡುವೆಯೂ ಜನ ನಮ್ಮನ್ನು ನಂಬಿದ್ದಾರೆ. ರಾಜ್ಯದಲ್ಲಿ ಯಾವುದೇ ಚುನಾವಣೆಯ ನಂತರ ಗ್ಯಾರಂಟಿಗಳನ್ನು ಸ್ಥಗಿತಗೊಳಿಸಲಾಗುವುದು ಎಂದು ಬಿಜೆಪಿಯವರು ಅಪಪ್ರಚಾರ ಮಾಡಿದರೂ, ನಮ್ಮ ಗ್ಯಾರಂಟಿಗಳು ನಿರಂತರವಾಗಿ ಮುಂದುವರಿದಿದೆ. ಇದಕ್ಕಾಗಿ 52000 ಕೋಟಿ ಮೀಸಲಿಟ್ಟಿದ್ದು, ಇದುವರೆಗೆ 1,31,000 ಕೋಟಿ ರೂಗಳನ್ನು ವೆಚ್ಚ ಮಾಡಲಾಗಿದೆ ಎಂದರು.

ಚುನಾವಣಾ ಪ್ರಚಾರ ಹಾಗೂ ಪತ್ರಕರ್ತರೊಂದಿಗೆ ಪ್ರತ್ಯೇಕವಾಗಿ ಮಾತನಾಡಿದ ಮುಖ್ಯಮಂತ್ರಿಯವರು, ರಾಜ್ಯ ಸರ್ಕಾರ ಮಿತಿಯೊಳಗೆ ಸಾಲ ಮಾಡಬೇಕು. ಆರ್ಥಿಕ ಹೊಣೆಗಾರಿಕೆ ಕಾಯ್ದೆಯ ಮಾನದಂಡದಂತೆ, ರಾಜ್ಯದ ಜಿಡಿಪಿಯ ಶೇ. 25ರ ಮಿತಿಯೊಳಗೆ ಸಾಲದ ಮೊತ್ತವಿದೆ. ನಮ್ಮ ವಿತ್ತೀಯ ಕೊರತೆ 2.95ರಷ್ಟಿದೆ. ಇದು ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ನ್ಯಾಯಬದ್ಧ ಅನುದಾನಗಳು ರೆವಿನ್ಯೂ ಸರ್ಪ್ಲಸ್ ಸಾಧಿಸಲು ಸಾಧ್ಯವಾಗಲಿಲ್ಲ. ಬಿಹಾರ ಚುನಾವಣೆಯ ಸಂಬಂಧ ಜಿಎಸ್‌ಟಿ ದರವನ್ನು ಕಡಿತ ಗೊಳಿಸಿದರು. ಇದರಿಂದಾಗಿ ರಾಜ್ಯದ ಬೊಕ್ಕಸಕ್ಕೆ 10,000 ಕೋಟಿ ನಷ್ಟವಾಗಿದೆ. ಜಿಎಸ್‌ಟಿ ಕಡಿತದ ಮುಂಚೆ 10% ಇದ್ದ ಜಿಎಸ್‌ಟಿ ಬೆಳವಣಿಗೆ ಈಗ ಶೇ. 4ಕ್ಕೆ ಕುಸಿದಿದೆ. ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡಬೇಕಾದ ಜಿಎಸ್‌ಟಿ ಪರಿಹಾರವನ್ನು ಮತ್ತು ವಿಶೇಷ ಅನುದಾನಗಳನ್ನು ನೀಡದ ಕಾರಣ ಬಜೆಟ್ ರೆವಿನ್ಯೂ ಸರ್ಪ್ಲಸ್ ಆಗಲು ಸಾಧ್ಯವಾಗಿಲ್ಲ. ಆರ್ಥಿಕತೆಗೆ ಶ್ವೇತಪತ್ರ ಹೊರಡಿಸಬೇಕು ಎಂದು ಹೇಳುವ ಬಿಜೆಪಿಯ ರಾಜ್ಯಾಧ್ಯಕ್ಷ ವಿಜಯೇಂದ್ರ ರವರು ಈ ಎಲ್ಲಾ ಅಂಶಗಳನ್ನು ಪರಿಶೀಲಿಸದೇ, ಕೇವಲ ಸುಳ್ಳು ಹೇಳಿಕೆಗಳನ್ನು ನೀಡುತ್ತಿದ್ದಾರೆ. ಗ್ಯಾರಂಟಿ ಯೋಜನೆಯು ನೇರವಾಗಿ ಫಲಾನುಭವಿಗಳ ಖಾತೆಗೆ ತಲುಪುತ್ತಿದ್ದು, ಇದರಲ್ಲಿ ಭ್ರಷ್ಟಾಚಾರಕ್ಕೆ ಆಸ್ಪದವಿಲ್ಲ ಎಂದರು.

ಗುತ್ತಿಗೆದಾರರಿಗೆ ಬಾಕಿ ಪಾವತಿ ಆಗದಿರುವ ಬಗ್ಗೆ ಪ್ರತಿಕ್ರಿಯೆಗಳು ಎದ್ದಿರುವ ಬಗ್ಗೆ ಉತ್ತರಿಸಿ, ಬಿಜೆಪಿಯವರ ಅವಧಿಯಲ್ಲಿ ಗುತ್ತಿಗೆದಾರರ 29ಸಾವಿರ ಕೋಟಿಯಷ್ಟು ಬಾಕಿ ಉಳಿಸಲಾಗಿತ್ತು ಅದರಲ್ಲಿ 24 ಸಾವಿರ ಕೋಟಿ ಬಾಕಿ ಬಿಲ್ಲು ಪಾವತಿಸಲಾಗಿದೆ. ಈ ಬಗ್ಗೆ ದಾಖಲಾತಿಯ ಆಧಾರದಲ್ಲಿ ಸ್ಪಷ್ಟ ಉತ್ತರವನ್ನು ಅಧಿವೇಶನದಲ್ಲಿ ನೀಡಲಾಗಿದೆ ಎಂದರು.

ಮೈಸೂರಲ್ಲೂ ಆಟೋ ಎಲ್‌ಪಿಜಿ ಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯ

●ಬಂಕ್‌ಗಳಲ್ಲಿ ನೋ ಸ್ಟಾಕ್ ಬೋರ್ಡ್ ; ಸರತಿ ಸಾಲಿನಲ್ಲಿ ನಿಂತರೂ ಗ್ಯಾಸ್ ಸಿಗದೇ ವಾಪಸ್ಸಾದ ಸಾಕಷ್ಟು ಆಟೋ ಚಾಲಕರು ● ಈ ಮಧ್ಯೆ ಬೆಲೆ ಏರಿಕೆಯ ಬರೆ



ನಜರ್‌ಬಾದಿನ ಆಟೋ ಎಲ್‌ಪಿಜಿ ಗ್ಯಾಸ್ ಸ್ಟೇಷನ್ ಎದುರು ಗ್ಯಾಸ್‌ಗಾಗಿ ಸರತಿ ಸಾಲಿನಲ್ಲಿ ನಿಂತಿರುವ ಚಾಲಕರು.

ಮೈಸೂರು,ಏ.2(ಪಿಎಂ)– ಮಧ್ಯಪ್ರಾಚ್ಯದ ಬಿಕ್ಕಟ್ಟಿನ ಪರಿಣಾಮವಾಗಿ ಮೈಸೂರಿನಲ್ಲೂ ಆಟೋ ಎಲ್‌ಪಿಜಿ ಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಗುರುವಾರ ನಗರದಲ್ಲಿನ ಎಲ್‌ಪಿಜಿ ಗ್ಯಾಸ್ ಬಂಕ್‌ಗಳ ಬಳಿ ಆಟೋಗಳೊಂದಿಗೆ ಚಾಲಕರು ಕಾದು ನಿಂತರೂ ಗ್ಯಾಸ್ ದೊರೆಯುದೇ ಹಿಂತಿರುಗುವ ಪರಿಸ್ಥಿತಿ ಕಂಡುಬಂದಿತು.

ಈ ಮಧ್ಯೆ ಗ್ಯಾಸ್ ಬೆಲೆ ಸಹ ಏರಿಕೆಯಾಗಿತ್ತು. ಅದಾಗ್ಯೂ ಪರವಾಗಿಲ್ಲವೆಂದರೂ ಗ್ಯಾಸ್ ಸಿಗದೇ ಆಟೋ ಚಾಲಕರ ಬೇಸರ ವ್ಯಕ್ತಪಡಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಗ್ಯಾಸ್ ಬಂಕ್‌ಗಳು ನೋ ಸ್ಟಾಕ್ ಬೋರ್ಡ್ ಹಾಕಿರುವುದು ಕಂಡು ಆಟೋ ಚಾಲಕರು ಬದುಕು ಸಾಗಿಸುವುದಾದರೂ ಹೇಗೆ ಎಂಬ ಚಿಂತೆಯಲ್ಲೇ ವಾಪಸ್ಸಾಗುತ್ತಿದ್ದರು.

ಅಲ್ಲದೆ, ಹಲವರು ಪ್ರಯಾಣಿಕರೊಂದಿಗೆ ಬಂಕ್ ಬಳಿ ಬಂದು ನೋ ಸ್ಟಾಕ್ ಬೋರ್ಡ್ ಕಂಡು ಪರದಾಡುವ ಸನ್ನಿವೇಶ ಸೃಷ್ಟಿಯಾಗಿತ್ತು. ಈ ನಡುವೆ ಹಲವು ಚಾಲಕರು ಯಾವಾಗ ಸ್ಟಾಕ್ ಬರಲಿದೆ ಎಂದು ವಿಚಾರಿಸುವ ಕಾತರ ವ್ಯಕ್ತಪಡಿಸುತ್ತಿದ್ದರು. ಬುಧವಾರ ಲೀಟರ್ ಆಟೋ ಎಲ್‌ಪಿಜಿ ಗ್ಯಾಸ್ ದರವು 83 ರೂ. ಇದ್ದರೆ, ಗುರುವಾರ 90 ರೂ.ಗೆ ಏರಿಕೆ ಕಂಡಿತ್ತು. ಈ ನಡುವೆ ಒಂದೊಂದು ಬಂಕ್‌ನಲ್ಲಿ ಒಂದೊಂದು ದರ ನಿಗದಿ ಮಾಡಲಾಗಿದೆ ಎಂದು ಆಟೋ ಚಾಲಕರು ಅಸಮಾಧಾನ ಸಹ ವ್ಯಕ್ತಪಡಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕುರಿಮಂಡಿ ನಿವಾಸಿಯಾದ ಆಟೋ ಚಾಲಕ ನಾಗರಾಜು, ಎಲ್‌ಪಿಜಿ ಆಟೋ ಗ್ಯಾಸ್ ಬೆಲೆ ಹೆಚ್ಚಳವೂ ಆಗಿದೆ. ಜೊತೆಗೆ ಪೂರೈಕೆಯೂ ಸಮರ್ಪಕವಾಗಿಲ್ಲ. ಈಗಂತೂ ಸ್ಟಾಕ್ ಇಲ್ಲ ಎನ್ನುತ್ತಿದ್ದಾರೆ. ಇಂದು ಲೀಟರ್‌ಗೆ 90 ರೂ. ಆಗಿದೆ. ನಿನ್ನೆ (ಬುಧವಾರ) 83 ರೂ. ಇತ್ತು. ಆಗ ಗ್ಯಾಸ್ ಬೆಲೆಯು ಪೆಟ್ರೋಲ್‌ಗೆ ಹೋಲಿಸಿದರೆ ಕಡಿಮೆ ಇತ್ತು. ಹಾಗಾಗಿ ಬದಲಾವಣೆ ಮಾಡಿಕೊಳ್ಳಲಾಯಿತು. ಈಗ ನೋಡಿದರೆ ಇದರ ದರವೂ ಗಗನಕ್ಕೇರುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ನಜರಬಾದಿನಲ್ಲಿರುವ ಆಟೋ ಗ್ಯಾಸ್ ಬಂಕ್‌ನ ಮೇಲ್ವಿಚಾರಕ ಜಯರಾಮ್ 'ಮಿತ್ರ'ನೊಂದಿಗೆ ಮಾತನಾಡಿ, ಈಗ ಗ್ಯಾಸ್ ಮುಗಿದಿದ್ದು, ನಾಳೆ (ಶುಕ್ರವಾರ) ಬೆಳಗ್ಗೆ ಬರಲಿದೆ. ಮಧ್ಯಪ್ರಾಚ್ಯದ ಯುದ್ಧದಿಂದ ಇಡೀ ಮೈಸೂರಿನಲ್ಲಿ ಆಟೋ ಎಲ್‌ಪಿಜಿ ಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದೆ. ಇಂತಹ ಗ್ಯಾಸ್ ಬಂಕ್ ಮೈಸೂರಿನಲ್ಲಿ ಸುಮಾರು 9 ಇವೆ. ಆಟೋ, ಕಾರು ಸೇರಿದಂತೆ ಎಲ್‌ಪಿಜಿ ಕಿಟ್ ಇರುವ ವಾಹನಗಳಿಗೆ ಇದನ್ನು ಬಳಸಲಾಗುತ್ತದೆ. ಇಂದು ಗುರುವಾರ ಸಂಜೆ 4 ಗಂಟೆಗೆ ನಮ್ಮಲ್ಲಿ ಸ್ಟಾಕ್ ಮುಗಿಯಿತು. ಯುದ್ಧ ಪ್ರಾರಂಭವಾದಾಗ ತಕ್ಕ ಮಟ್ಟಿಗೆ ಗ್ಯಾಸ್ ಪೂರೈಕೆಯಾಗುತ್ತಿತ್ತು. ಈಗ ಕೊರತೆ ಉಂಟಾಗಿದೆ. ಆಟೋ ಎಲ್‌ಪಿಜಿ ಗ್ಯಾಸ್ ಲೀಟರ್‌ಗೆ ಬುಧವಾರ 83 ರೂ. ಇತ್ತು. ಇಂದು 90 ರೂ.ಗೆ ಏರಿಕೆಯಾಗಿದೆ. ಇದು ಕಂಪನಿಯ ನಿರ್ಧಾರ ಎಂದು ತಿಳಿಸಿದರು.

ಆಟೋ ಚಾಲಕ ರಹೀಂ ಮಾತನಾಡಿ, ಆಟೋ ಎಲ್‌ಪಿಜಿ ಗ್ಯಾಸ್ ಸಿಗುತ್ತಿಲ್ಲ. ಜೊತೆಗೆ ನಿನ್ನೆಯಿಂದ ಒಂದೊಂದು ಬಂಕ್‌ನಲ್ಲಿ ಒಂದೊಂದು ರೀತಿ ಬೆಲೆ ನಿಗದಿ ಮಾಡಲಾಗಿದೆ ಈ ರೀತಿಯಾದರೆ ನಮ್ಮ ಬದುಕು ಹೇಗೆ ಎಂದು ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಧನ್ವಂತರಿ ರಸ್ತೆಯಲ್ಲಿರುವ ಶ್ರೀ ವಿಜಯ ಸರ್ವೀಸ್ ಸ್ಟೇಷನ್ (ಬಂಕ್) ಮಾಲೀಕ ರಮೇಶ್ ಮಾತನಾಡಿ, ಆಟೋ ಎಲ್‌ಪಿಜಿ ಗ್ಯಾಸ್ ಲೀಟರ್‌ಗೆ 83.53 ರೂ. ಇದೆ. ಈಗ ಸ್ಟಾಕ್ ಇಲ್ಲ. ಯುದ್ಧದ ಪರಿಣಾಮ ಇಡೀ ಜಗತ್ತಿನಲ್ಲಿ ಸಮಸ್ಯೆ ಸೃಷ್ಟಿಯಾಗಿದೆ. ಈ ನಡುವೆ ಬೇರೆ ದೇಶಗಳಿಗೆ ಹೋಲಿಸಿದರೆ ನಮ್ಮ ದೇಶದ ಸ್ಥಿತಿಯಲ್ಲಿ ಸುಧಾರಣೆ ಇದೆ. ಆತಂಕಪಡುವ ಅಗತ್ಯವಿಲ್ಲ. ಆಟೋ ಎಲ್‌ಪಿಜಿ ಗ್ಯಾಸ್ ಆದಷ್ಟು ಶೀಘ್ರದಲ್ಲಿ ಪೂರೈಕೆಯಾಗಲಿದೆ ಎಂದು ಹೇಳಿದರು.

ವಾಣಿಜ್ಯ ಸಿಲಿಂಡರ್ ದರ ಪರಿಷ್ಕರಣೆ

ಮೈಸೂರು,ಏ.2(ಪಿಎಂ)– ತೈಲ ಮಾರಾಟ ಕಂಪನಿಗಳು ಏ.1ರಿಂದ ಅನ್ವಯವಾಗುವಂತೆ ವಾಣಿಜ್ಯ ಬಳಕೆ ಸಿಲಿಂಡರ್ ದರದಲ್ಲಿ ಪರಿಷ್ಕರಣೆ ಮಾಡಿವೆ. ಅದರಂತೆ 19 ಕೆಜಿ ತೂಕದ ಸಿಲಿಂಡರ್ ಬೆಲೆಯಲ್ಲಿ ಇಡೀ ದೇಶಕ್ಕೆ ಸಂಬಂಧಿಸಿದಂತೆ 195.50 ರೂ. ಹೆಚ್ಚಳವಾಗಿದ್ದರೆ, ಮೈಸೂರಿಗೆ ಸಂಬಂಧಿಸಿದಂತೆ ಇದು 202 ರೂ.ಗೆ ಏರಿಕೆಯಾಗಿದೆ.

ಮಾ.7ರಿಂದ 31ರವರೆಗೆ 19 ಕೆಜಿ ಸಿಲಿಂಡರ್ ಬೆಲೆಯು 1,938.50 ರೂ. ಇದ್ದಿತು. ಇದೀಗ ಏ.1ರಿಂದ 2,141 ರೂ.ಗೆ ಹೆಚ್ಚಳ ಮಾಡಲಾಗಿದೆ. ಅದೇ ರೀತಿಯಲ್ಲಿ ವಾಣಿಜ್ಯ ಬಳಕೆಯ 35 ಕೆಜಿ ಸಿಲಿಂಡರ್ ಬೆಲೆಯು 3,571.50 ರೂ.ನಿಂದ 3,945 ರೂ.ಗೆ ಹೆಚ್ಚಳವಾಗಿದೆ. ಅಂತೆಯೇ ವಾಣಿಜ್ಯ ಬಳಕೆಯ 47.5 ಕೆಜಿ ಸಿಲಿಂಡರ್ ಬೆಲೆಯು 4,842.50 ರೂ.ನಿಂದ 5,349 ರೂ.ಗೆ ಏರಿಕೆ ಕಂಡಿದೆ. ಗೃಹ ಬಳಕೆ ಸಿಲಿಂಡರ್ ಸಂಬಂಧ ಯಾವುದೇ ಪರಿಷ್ಕರಣೆಯಾಗಿಲ್ಲ.

SITES FOR SALE

80x43 Commercial Site
South-East corner in 80ft-60ft road

Also available 20x30, 30x43, 40x50, 40x75, 46x83.
15 years old layout, Ready for Construction, MUDA Approved Sites in Middle of Vasanth Nagar
80% Bank loan available

Contact: 91643 59710 97419 05998

PROPERTY FOR SALE

1. Commercial Property for Sale in Dattagalli
2. NIE College Road
3. Residential Property for Sale in Vijaynagar 2nd & 3rd stage

Book now save 20% Hurry up

Call: 9008111454

ಶ್ರೀ ಗೌರೀಶಂಕರ ಟ್ರಾವೆಲ್ಸ್

30–4–2026 (6 ದಿನ): ದೆಹಲಿ, ಆಗ್ರಾ, ಅಯೋಧ್ಯೆ, ಪ್ರಯಾಗ್‌ರಾಜ್, ಕಾಶಿ.
17–5–2026 (6 ದಿನ): ಗುರುವಾಯೂರು, ಮುನ್ನಾರ್, ಆಲಪ್ಪಿ, ಕೊಚ್ಚಿನ್, ತ್ರಿವೇಂಡ್ರಂ.
29–5–2026 (13 ದಿನ): ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರಿನಾಥ್, ಹರಿದ್ವಾರ್, ದೆಹಲಿ.
(ವಿಮಾನ, ಬಸ್, ಊಟ, ರೂಂ)

Mob: 9620002114

WANTED

For a Reputed Institute

Walk-in-interview for

- **Tally Faculty** - 3 Nos
- **Telecaller** - 5 Nos
- **Civil Engineer** - 2 Nos (With Autocad)
- **Stenographer** - 2 Nos (With good typing speed)

Contact:
9663968949 / 9663941939

WANTED PRESCHOOL CORDINATOR/ CENTRE HEAD/ TEACHERS

A leading pre-school chain in Mysore is looking for dynamic and passionate Co-ordinators / Centre head / Pre-school teachers.

Qualifications	Any degree with Montessori/ Nursery trained (MTT / NTT)
Role	To monitor and administer Pre-school and Co-ordination with franchise chain.
Experience	3 to 5 years in preschool as centre head/ Co-ordinators/ teachers

2 Preschool Teachers MTT/ NTT trained graduate with 3 to 5 years experience

3 Arts & Crafts Teachers Good knowledge of Arts and Craft.

Send your Resume with photo to : preschoolstaffneeded@gmail.com

ಟೈಲ್ಸ್ ಮಾರ್ಬಲ್ ಮತ್ತು ಗ್ರಾನೈಟ್ ಹಾಕುವ ಕಂಟ್ರಾಕ್ಟರ್‌ಗಳು ಬೇಕಾಗಿದ್ದಾರೆ
(Wanted Tiles, Marbles & Granite Laying Vendors)

ನಮ್ಮಲ್ಲಿ ಹೊಸದಾಗಿ ನಿರ್ಮಿಸುತ್ತಿರುವ ಕಟ್ಟಡಕ್ಕೆ ಅನುಭವವಿರುವ ಟೈಲ್ಸ್, ಮಾರ್ಬಲ್ ಮತ್ತು ಗ್ರಾನೈಟ್ ಕೆಲಸದ ವೆಂಡರ್‌ಗಳು ಅಥವಾ ಮೇಸ್ತ್ರಿಗಳು ಬೇಕಾಗಿದ್ದಾರೆ.

* ಕೆಲಸದ ವಿಧ: ಫ್ಲೋರಿಂಗ್ (Flooring), ಗೋಡೆ ಟೈಲ್ (Wall Tiles), ಮತ್ತು ಗ್ರಾನೈಟ್ ಮತ್ತು ಮಾರ್ಬಲ್ ಫಿಟ್ಟಿಂಗ್.
* ಅನುಭವ: ಕನಿಷ್ಠ 3–5 ವರ್ಷಗಳು.
* ಸ್ಥಳ: ಮೈಸೂರು / ಬೆಂಗಳೂರು. ಸಂಪರ್ಕಿಸಿ:

9606013797, 7625081008

SWAMI VIVEKANANDA VIDYAKULA
SABBANAHALLI

WALK-IN FOR INTERVIEW
On 05.04.2026 Sunday

Primary & High School Teachers in the following subjects:

+ English
+ Mathematics
+ Science
+ Social Studies
+ Hindi
+ Nursery (NTT Trained)
+ Physical Instructors (BP.Ed / M.P.Ed)

Send your resume or Call:
9606309190 / 9164469953

HOUSE FOR SALE

Independent Duplex 3BHK House, (40X60) East Facing (31Sq. Built Area) Ample Car Parking with Clear Documents. MUDA Approved, Near J.P.Nagar Ring Road, Mysore.
Price. Rs.2.25 Cr. (Negotiable)

Mob.9108545566

VILLA PLOTS FOR SALE

30X40 & 30X50
MUDA & RERA APPROVED

Ready for Registration & to Build
CC Roads, Under Ground Electric Cabling, Plot Loan from Leading Banks
Srirampura, Near Ring Road, Mysuru

Call
709 002 7575

REQUIRED

Vacancies are available in a reputed manufacturing industry located at Hebbal Industrial Area, Mysore, for the following positions:


* SENIOR SALES EXECUTIVE – 1 POST
* SENIOR STORE EXECUTIVE – 2 POSTS
* SENIOR HR EXECUTIVE – 1 POST
* PURCHASE MANAGER - 1 POST
* PRODUCTION SUPERVISOR – 4 POSTS

SEND YOUR CV VIA EMAIL TO:
info@vaspalpackaging.com
Contact: **Mob: 9108483236**

HOUSE FOR SALE

30x40, W/N Door, 2 BHK, 8 years old, single floor, Dattagalli, Mysore.
BROKERS EXCUSE

Mob: 9606774333



9148991267 | 9901291267



ಪ್ಲಾಸ್ಟಿಕ್ ಬಳಕೆ ನಿಷೇಧಿಸಿ
ಪರಿಸರವನ್ನು ಕಾಪಾಡಿ

Wanted: Dentist – Multispeciality Practice

Join a well-established, patient-focused **MULTISPECIALITY CLINIC IN JP NAGAR** as a **full-time associate.** We're looking for a skilled, enthusiastic Dentist with a passion for quality care and teamwork. Attractive work environment with good clinical exposure. Contact:

Mob: 9886173631

ನಗರಸಭಾ ಕಾರ್ಯಾಲಯ, ಹುಣಸೂರು
CITY MUNICIPAL COUNCIL HUNSUR
ಮೈಸೂರು ಜಿಲ್ಲೆ ~ ೫೭೧೧೦೫

E-mail : ka.hunsur.cmc@gmail.com ಫೋನ್: 08222–252048

ಸಂ:ಹುನಕಾ:/ಕಂ.ಶಾ/ಪಿ.ಆರ್/ಹ/01/2026–27 ದಿನಾಂಕ: 02–04–2026

"ಮರು ಹರಾಜು ಇಸ್ತಿಹಾರ್ ಪ್ರತಿ"

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಹುಣಸೂರು ನಗರಸಭೆಗೆ ಸೇರಿದ 2026–27ನೇ ಸಾಲಿನ (1) ಪಟ್ಟಣದಾದ್ಯಂತ ವಾಹನದಲ್ಲಿ ಮೀನು ಮಾರಾಟ ಮಾಡುವ ಹಕ್ಕು, (2) ಅನುಪಯುಕ್ತ ನ್ಯೂಸ್ ಪೇಪರ್‌ಗಳ ಹಕ್ಕನ್ನು ದಿನಾಂಕ 01.04.2026 ರಂದು ನಡೆದ ಬಹಿರಂಗ ಹರಾಜಿನಲ್ಲಿ ನಿಗಧಿತ ಸರ್ಕಾರಿ ಮೊತ್ತಕ್ಕೆ ಹರಾಜಾಗದ ಕಾರಣ, ಮೇಲ್ಕಂಡ ಎರಡು ಐಟಂಗಳನ್ನು ಮರು ಹರಾಜು ಮಾಡಲು ಈ ಹಿಂದಿನ ಇಸ್ತಿಹಾರ್ ಪ್ರಕಟಣೆಯ ಷರತ್ತುಗಳಂತೆ ಮರು ಹರಾಜನ್ನು ದಿನಾಂಕ 08.04.2026 ರ ಬುಧವಾರ ಬೆಳಿಗ್ಗೆ 11–00 ಗಂಟೆಗೆ ನಗರಸಭಾ ಕಛೇರಿ ಆವರಣದಲ್ಲಿ ನಗರಸಭಾ ಆಡಳಿತಾಧಿಕಾರಿಗಳಾದ ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಮೈಸೂರು ರವರು ಮತ್ತು ಪೌರಾಯುಕ್ತರ ಸಮ್ಮುಖದಲ್ಲಿ ಅಥವಾ ಅವರಿಂದ ಅಧಿಕಾರ ಪಡೆದವರ ಸಮ್ಮುಖದಲ್ಲಿ ಈ ಕೆಳಕಂಡ ಬಾಬುಗಳನ್ನು ಮರು ಹರಾಜು ಮೂಲಕ 12 (ಹನ್ನೆರಡು) ತಿಂಗಳ ಅವಧಿಗೆ ಅಂದರೆ 2026–27ನೇ ಸಾಲಿಗೆ ವಿಲೇ ಮಾಡಲಾಗುವುದು. ಹೆಚ್ಚಿನ ವಿವರಗಳಿಗೆ ಕಛೇರಿಯ ಕೆಲಸದ ವೇಳೆಯಲ್ಲಿ ಕಂದಾಯ ವಿಭಾಗದಿಂದ ಮಾಹಿತಿಯನ್ನು ಪಡೆಯಬಹುದು.

ಕ್ರ.ಸಂ	ಬಾಬುಗಳ ವಿವರ	ಅವಧಿ	ಠೇವಣಿ ಮೊತ್ತ
1	ಪಟ್ಟಣದಾದ್ಯಂತ ವಾಹನಗಳಲ್ಲಿ ಮೀನು ಮಾರಾಟ ಮಾಡುವ ಹಕ್ಕು	—"—	50,000–00
2	ಅನುಪಯುಕ್ತ ನ್ಯೂಸ್ ಪೇಪರ್ ಹಕ್ಕು	—"—	1000–00

ಸಹಿ/–
(ಶ್ರೀ ಲಕ್ಷ್ಮೀಕಾಂತ್‌ರೆಡ್ಡಿ ಜಿ, ಐ.ಎ.ಎಸ್)
ಮಾನ್ಯ ಆಡಳಿತಾಧಿಕಾರಿಗಳು ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು
ಮೈಸೂರು ಜಿಲ್ಲೆ, ಮೈಸೂರು

ಸಹಿ/–
(ಶ್ರೀಮತಿ ಮಾನಸ ಎಂ, ಕೆ.ಎಂ.ಎ.ಎಸ್ ಶ್ರೇಣಿ–I)
ಪೌರಾಯುಕ್ತರು
ನಗರಸಭೆ ಹುಣಸೂರು

ಗಾಯತ್ರಿ ಟಾಕೀಸ್ ನಲ್ಲಿ ಮಾತ್ರ



ಯಶಸ್ವಿ ಪ್ರದರ್ಶನ
3ನೇ ವಾರ
ರಣವೀರ್ ಸಿಂಗ್ ಅಭಿನಯಿಸಿರುವ
ದುರಂಧರ್
(ಕನ್ನಡ)
3 ಪ್ರದರ್ಶನಗಳು
10:30, 03:00, 08:00

ಆನ್‌ಲೈನ್ ಟಿಕೆಟ್ಸ್ ಬುಕ್ ಮೈ ಷೋ ನಲ್ಲಿ ಲಭ್ಯವಿದೆ

HOUSE FOR SALE

As Per Your Requirement Architect Designed.

AT MYSURU	*AT HUNSUR*
Near Vajamangala, Bannur Road. 20x30 32 Lakhs 20x40 36 Lakhs 30x40 58 Lakhs Near St. Joseph School 20x40 - 48 Lakhs 30x50 - 89.5 Lakhs	Near KSRTC Bus Depot. 20x30 24 Lakhs 20x40 24.6 Lakhs 30x40 29 Lakhs, Contact

8123387555 / 7259348777



VIEW - BUY - SELL
@
COIN SHOW INDIA-2026
Coins | Banknotes | Medals | Stamps
Date: April: 3,4,5. Time: 10 am to 8pm
Venue: Kanyaka Mahal, Ashoka Road, Mysore-1
ENTRY FREE
Organized by **THE ANCIENT TIMES**



